ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 25 ಶುಕ್ರವಾರ 2023


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 130 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com













ಲ್ಯಾಂಡರ್‌ನಿಂದ ಹೊರಬಂದ ರೋವರ್: ಚಂದ್ರನ ಮೇಲೆ ಚಲನೆ ಆರಂಭ



ಚೆನ್ನೈ: ಚಂದ್ರನ ಮೇಲ್ಮೈ ಮೇಲೆ ವಿಕ್ರಮ್ ಲ್ಯಾಂಡರ್ ಬುಧವಾರ ಯಶಸ್ವಿಯಾಗಿ ಲ್ಯಾಂಡಿಂಗ್ ಮಾಡಿದೆ. ಇದೀಗ ಲ್ಯಾಂಡರ್‌ನಿಂದ ಹೊರಬಂದ ಪ್ರಗ್ಯಾನ್ ರೋವರ್ ಚಂದ್ರನ ಮೇಲೆ ಚಲನೆ ಆರಂಭಿಸಿದೆ ಎಂದು ಇಸ್ರೋ ಟ್ವೀಟ್ ಮಾಡಿದೆ. ಚಂದ್ರಯಾನ–3 ಚಂದ್ರನ ಮೇಲೆ ಲ್ಯಾಂಡಿಂಗ್ ಮಾಡಿದ ಕೆಲವೇ ಗಂಟೆಗಳ ನಂತರ ಯಶಸ್ವಿಯಾಗಿ ಮುಂದಿನ ಹಂತ ಆರಂಭಿಸಿದೆ.

ಆ.30ರಿಂದ 352ನೇ ರಾಯರ ಆರಾಧನಾ ಮಹೋತ್ಸವ



ಮೈಸೂರು, ಆ. 24–ಮೈಸೂರಿನ ನಿರ್ವಾಣ್‌ನಗರದ ಎಂ.ಬಿ. ಹಳ್ಳಿ ರಸ್ತೆ, ಜಂತಗಳ್ಳಿಯ ಕಲ್ಪವೃಕ್ಷ ಕ್ಷೇತ್ರ–ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ 352ನೇ ಆರಾಧನಾ ಮಹೋತ್ಸವವನ್ನು ಆ.30ರಿಂದ ಸೆ. 3ರವರೆಗೆ ಏರ್ಪಡಿಸಲಾಗಿದೆ.

ಆ.30ರ ಬುಧವಾರ ಸಂಜೆ 4 ಗಂಟೆಗೆ ಪ್ರಾರ್ಥನೆ, ಧ್ವಜಾರೋಹಣ, ಗೋಪೂಜೆ ನಡೆಯುವುದು. ಸಾನ್ನಿಧ್ಯವನ್ನು ಉಡುಪಿಯ ಪೇಜಾವರ ಅಧೋಕ್ಷಜಮಠದ ಪೀಠಾಧಿಪತಿಗಳಾದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ವಹಿಸಲಿದ್ದಾರೆ. ಆ.31ರ ಗುರುವಾರ ರಾಯರ ಪೂರ್ವಾರಾಧನೆ ಅಂದು ಬೆಳಗ್ಗೆ ಪಂಚಾಮೃತ, ಅಭಿಷೇಕ, ಪ್ರವಚನ, ಭಜನೆ, ಶ್ರೀ ಶ್ರೀಪಾದಂಗಳವರಿಂದ ಸಂಸ್ಥಾನ ಪೂಜೆ, ಮಹಾನೈವೇದ್ಯ, ಪಲ್ಲಕ್ಕಿ ಉತ್ಸವ ನಡೆಯಲಿದೆ.

ಸಂಜೆ 6ಕ್ಕೆ ಆರತಿ ವಿಜಯೀಂದ್ರ ಮತ್ತು ಸಂಗಡಿಗರು ಹಾಗೂ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ದಾಸರ ಪದಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸೆ.1ರ ಶುಕ್ರವಾರ ರಾಯರ ಮಧ್ಯಾರಾಧನೆ ಅಂಗವಾಗಿ ಅಭಿಷೇಕ, ಭಜನೆ, ನೈವೇದ್ಯ, ಪಲ್ಲಕ್ಕಿ ಉತ್ಸವ, ಮಹಾಮಂಗಳಾರತಿ ನಡೆಯಲಿದೆ. ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಆಕಾಶವಾಣಿ ಕಲಾವಿದರಾದ ಮೈಸೂರು ಮೋಹನ್ ಮತ್ತು ತಂಡದವರಿಂದ ವೀಣಾ ವಾದನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.


ಸೆ.2ರ ಶನಿವಾರ ರಾಯರ ಉತ್ತರಾರಾಧನೆ ಬೆಳಗ್ಗೆ ಅಭಿಷೇಕ, ಭಜನೆ, ವೇದಘೋಷ, ಪಾರಾಯಣ, ಮಂಗಳವಾದ್ಯ ಮಠದ ರಾಜಬೀದಿಯಲ್ಲಿ ಮಹಾರಥೋತ್ಸವ ನೆರವೇರಲಿದೆ. ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಚಿನ್ಮಯ ದೇವಿ ಭಜನಾ ಮಂಡಳಿ ನಂಜನಗೂಡು ಇವರಿಂದ ಶ್ರೀಮತಿ ಪದ್ಮ ಮತ್ತು ತಂಡದವರಿಂದ ದಾಸರ ಪದಗಳನ್ನು ಏರ್ಪಡಿಸಲಾಗಿದೆ. ಸೆ.3ರ ಭಾನುವಾರ ಶ್ರೀ ಸುಜ್ಞಾನೇಂದ್ರತೀರ್ಥರ ಆರಾಧನೆ ಪ್ರಯುಕ್ತ ಪಂಚಾಮೃತ ಅಭಿಷೇಕ, ಪ್ರವಚನ, ಮಹಾನೈವೇದ್ಯ, ಮಹಾಮಂಗಳಾರತಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 95389 90101, 9110861544 ಹಾಗೂ 9448342252 ಸಂಪರ್ಕಿಸಬಹುದಾಗಿದೆ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಇಂದು ಸಾಮೂಹಿಕ ವರಮಹಾಲಕ್ಷ್ಮಿ ವ್ರತ



ಮೈಸೂರು,ಆ.24–ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಆಶೀರ್ವಾದಗಳೊಂದಿಗೆ ನಾಳೆ ಶುಕ್ರವಾರ ಬೆಳಗ್ಗೆ 10ರಿಂದ 11.30ರವರೆಗೆ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿ ಸಾಮೂಹಿಕ ವರಮಹಾಲಕ್ಷ್ಮಿ ವ್ರತವು ನಡೆಯಲಿದೆ. ಮನೆಗಳಲ್ಲಿ ಆಚರಣೆ ಮಾಡಿಕೊಳ್ಳಲು ಸಾಧ್ಯವಾಗದೇ ಇರುವವರು ಇಲ್ಲಿಗೆ ಆಗಮಿಸಿ ಸ್ವತಃ ಪೂಜೆ ವ್ರತ ಮಾಡಿಕೊಳ್ಳಬಹುದು. ಪೂಜಾ ವಸ್ತುಗಳು ಆಶ್ರಮದಲ್ಲೇ ದೊರೆಯಲಿವೆ. ವಿವರಗಳಿಗೆ ಸಂಪರ್ಕಿಸಿ ದೂರವಾಣಿ ಸಂಖ್ಯೆ 0821–2486486.


ಜೆಎಸ್‌ಎಸ್ ವಿದ್ಯಾಸಂಸ್ಥೆಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ



ಮೈಸೂರು,ಆ.24–ಜೆಎಸ್‌ಎಸ್ ವಿದ್ಯಾಸಂಸ್ಥೆಗಳು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊರತರುವ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಕಳೆದ ಇಪ್ಪತ್ತೆರಡು ವರ್ಷಗಳಿಂದ ಪ್ರತಿವರ್ಷ ರಾಜೇಂದ್ರ ಶ್ರೀಗಳವರ ಜಯಂತಿ ಮಹೋತ್ಸವದಲ್ಲಿ ಬಹುಮಾನ ನೀಡಲಾಗುತ್ತಿದೆ. ಈ ಬಾರಿ 2021–22ನೇ ಸಾಲಿನ ಸ್ಪರ್ಧೆಗೆ ಸಂಸ್ಥೆಗಳಿಂದ ಬಂದಿದ್ದ ಸಂಚಿಕೆಗಳನ್ನು ಸಮಿತಿಯು ಪರಿಶೀಲಿಸಿ ಕೆಳಕಂಡ 9 ಸಂಸ್ಥೆಗಳ ಸಂಚಿಕೆಗಳನ್ನು ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳಿಗೆ ಆಯ್ಕೆ ಮಾಡಿದೆ.

ಪ್ರಥಮ ಬಹುಮಾನಕ್ಕೆ ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸಾಮರ್ಥ್ಯ, ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪ್ರತಿಭಾ, ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಸಿಂಚನ, ದ್ವಿತೀಯ ಬಹುಮಾನಕ್ಕೆ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಜೇಜೀನ್, ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸುವರ್ಣ ಮತ್ತು ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಹೊಂಬಾಳೆ ಹಾಗೂ ತೃತೀಯ ಬಹುಮಾನಕ್ಕೆ ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಫಾರ್ಮಸಾಗ, ಗುಂಡ್ಲುಪೇಟೆಯ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನ ನೆನಪಿನಂಗಳ ಮತ್ತು ಕೊಳ್ಳೇಗಾಲದ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಆರೈಕೆ ಸಂಚಿಕೆಗಳು ಆಯ್ಕೆಯಾಗಿವೆ. ಬಹುಮಾನಗಳನ್ನು ಆ.29ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜರುಗುವ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮಿಗಳವರ 108ನೆಯ ಜಯಂತಿ ಮಹೋತ್ಸವದ ಮಧ್ಯಾಹ್ನದ ಸಮಾರಂಭದಲ್ಲಿ ವಿತರಿಸಲಾಗುವುದು.

ನೈಪುಣ್ಯ ದಸರಾ ಚಿತ್ರಕಲಾ ಸ್ಪರ್ಧೆ



ಮೈಸೂರು, ಆ.24– ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಂಸ್ಥೆಯು ಸೆ.10ರಂದು ನೈಪುಣ್ಯ ದಸರಾ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿದೆ. ಆರ್.ಟಿ.ನಗರದ ಶಾಲಾ ಆವರಣದಲ್ಲಿ ಸ್ಪರ್ಧೆ ಆಯೋಜಿಸಿದ್ದು, ಪ್ರೌಢ, ಪ್ರಾಥಮಿಕ, ಕಿರಿಯ ಮತ್ತು ಪೂರ್ವ ಪ್ರಾಥಮಿಕ ಹಂತಗಳಲ್ಲಿ 4 ವಿಭಾಗಗಳಾಗಿ ವಿಂಗಡಿಸಿ, ಸ್ಪರ್ಧೆ ನಡೆಯಲಿದ್ದು, ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಶಾಲೆಯ ಮೂಲಕ ಅಥವಾ ನೇರವಾಗಿ ಸೆ.2ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ 7022849856, 9901072527 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಪ್ರೊ. ಬಿ. ಕೃಷ್ಣರಾವ್



ಮೈಸೂರು,ಆ.24–ಮೈಸೂರಿನ ವಿ.ವಿ.ಪುರಂ ನಿವಾಸಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ಅಧ್ಯಯನ ವಿಭಾಗದ ವಿಶ್ರಾಂತ ಮುಖ್ಯಸ್ಥರಾದ ಪ್ರೊ.ಬಿ.ಕೃಷ್ಣರಾವ್ (83) ಬುಧವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಪುತ್ರಿ ವಿದೇಶದಿಂದ ಬಂದ ನಂತರ ಆ.26ರಂದು ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿವೃತ್ತ ಎಎಸ್‌ಐ ನಾಗರಾಜು




ಮೈಸೂರಿನ ನಿವೃತ್ತ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ (ವೈರ್‌ಲೆಸ್) ಮತ್ತು ಜೆ.ಪಿ.ನಗರ ನಿವಾಸಿ ನಾಗರಾಜು ಗುರುವಾರ ಬೆಳಗ್ಗೆ ನಿಧನರಾದರು. ಅವರಿಗೆ 68 ವರ್ಷ ವಯಸ್ಸಾಗಿತ್ತು. ಶ್ರೀಯುತರು ಮಂಡ್ಯ, ಮೈಸೂರು, ರಾಮನಗರ ಮತ್ತು ಬೆಂಗಳೂರಿನ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಎಸ್‌ಪಿ) ಕಚೇರಿಯಲ್ಲಿ ಕಾರ್ಯನಿರ್ವಹಿಸಿದ್ದರು. ಚಾಮರಾಜನಗರ ಜಿಲ್ಲೆಯ ಭುಜಂಗನಪುರದ ದಿವಂಗತ ಚಿನ್ನಪ್ಪ ಅವರ ಪುತ್ರರಾದ ಇವರು ಪತ್ನಿ ಭಾಗ್ಯ, ಮೂವರು ಪುತ್ರಿಯರು (ಬಿ.ಎನ್.ರಾಧ, ಬಿ.ಎನ್.ತಾರಾ ಮತ್ತು ಬಿ.ಎನ್.ರಮ್ಯಾ), ಓರ್ವ ಪುತ್ರ (ಬಿ.ಎನ್.ಮಂಜುನಾಥ್) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ (ಆ.25) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಬಿ. ರಾಮೇಗೌಡ



ನಂಜನಗೂಡು ಪಟ್ಟಣದ 7ನೇ ಕ್ರಾಸ್ ನಿವಾಸಿ ಹೆಚ್.ಬಿ. ರಾಮೇಗೌಡ (85) ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕಪಿಲಾ ನದಿ ದಂಡೆಯ ಲಿಂಗಭಟ್ಟರ ಗುಡಿ ಸಮೀಪವಿರುವ ಹಿಂದೂ ರುದ್ರಭೂಮಿಯಲ್ಲಿ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಸ್ರೋಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ



ಬೆಂಗಳೂರು,ಆ.24(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಬೆಳಗ್ಗೆ ಪೀಣ್ಯ ಇಸ್ರೋ ಕೇಂದ್ರಕ್ಕೆ ಭೇಟಿ ನೀಡಿ, ವಿಜ್ಞಾನಿಗಳ ಜತೆ ಕೆಲ ಸಮಯ ಕಳೆದು ಅವರನ್ನು ಅಭಿನಂದಿಸಿದರು.

ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ವಿಶ್ವದಲ್ಲಿ ರಾಷ್ಟ್ರದ ಘನತೆಯನ್ನು ಎತ್ತಿ ಹಿಡಿದ ಇಸ್ರೋ ವಿಜ್ಞಾನಿಗಳನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ರಾಜ್ಯ ಸರ್ಕಾರ

ವಿಜ್ಞಾನಿಗಳಿಗೆ ಅಭಿನಂದನೆ

ಸನ್ಮಾನಿಸಲಿದೆ ಎಂದು ಪ್ರಕಟಿಸಿದರು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಿ ಇಸ್ರೋ ವಿಜ್ಞಾನಿಗಳನ್ನು, ಸರ್ಕಾರದ ವತಿಯಿಂದ ಗೌರವಿಸಲಾಗು ವುದು. ಇಸ್ರೋ ಅಧ್ಯಕ್ಷ ಸೋಮನಾಥ್ ಸೇರಿದಂತೆ ಕರ್ನಾಟಕದ 500 ವಿಜ್ಞಾನಿಗಳು ಇದರಲ್ಲಿ ಪಾಲ್ಗೊಂಡಿದ್ದು, ಅವರೆಲ್ಲರಿಗೂ ಸನ್ಮಾನಿಸಲಾಗುವುದು. 3 ಲಕ್ಷ 84 ಸಾವಿರ ಕಿ.ಮೀ. ಪ್ರಯಾಣ ಮಾಡಿರುವ ವಿಕ್ರಂ ಸಾಧನೆ ಕಡಿಮೆಯಲ್ಲ. ಸರ್ಕಾರದ ಸಹಕಾರ, ಬೆಂಬಲ ಇರಲಿದೆ. ಇದು ದೇಶದ ಹೆಮ್ಮೆ ಎಂದರು. ವಿಜ್ಞಾನಿಗಳು ಹಗಲು ಇರುಳು ಎನ್ನದೆ ಇದಕ್ಕಾಗಿ ಶ್ರಮಿಸಿದ್ದಾರೆ. ದೇಶದ ಒಟ್ಟು 1 ಸಾವಿರ ವಿಜ್ಞಾನಿಗಳು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಿಂದಲೇ 500 ಜನ ಪಾಲ್ಗೊಂಡಿದ್ದಾರೆ. ಚಂದ್ರನ ಮೇಲೆ ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಇಳಿದಿರುವುದು ಐತಿಹಾಸಿಕ ಸಾಧನೆ. ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸ ಬೇಕು. ಇದರಿಂದ ಇಡೀ ಜಗತ್ತು ಭಾರತದ ಕಡೆಗೆ ನೋಡುವಂತಹ ಕೆಲಸವಾಗಿದೆ ಎಂದರು. ಜಗತ್ತಿನಲ್ಲಿಯೇ ರಷ್ಯಾ, ಅಮೆರಿಕ, ಚೈನಾ ದೇಶಗಳನ್ನು ಬಿಟ್ಟರೆ ಚಂದ್ರನ ನೆಲೆಯಲ್ಲಿ ಸಾಧನೆ ಮಾಡಿದ 4ನೇ ದೇಶ ಭಾರತ. ಅದರಲ್ಲೂ ದಕ್ಷಿಣ ಧ್ರುವದಲ್ಲಿ ಲ್ಯಾಂಡಿಂಗ್ ಮಾಡಿದ ಮೊದಲ ದೇಶ ನಮ್ಮ ಭಾರತ. ನಾವೆಲ್ಲರೂ ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸಲೇಬೇಕು ಎಂದರು.

ಶನಿವಾರ ಪ್ರಧಾನಿ ಭೇಟಿ: ವಿದೇಶ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಬೆಳಗ್ಗೆ ಇಸ್ರೋ ಸಂಸ್ಥೆಗೆ ಭೇಟಿ ನೀಡಿ, ಇಸ್ರೋ ಅಧ್ಯಕ್ಷ ಸೋಮನಾಥ್ ಸೇರಿದಂತೆ ಚಂದ್ರಯಾನ–3ರ ಯೋಜನೆ ಯಶಸ್ಸಿಗೆ ಶ್ರಮಿಸಿದ ವಿಜ್ಞಾನಿಗಳನ್ನು ಅಭಿನಂದಿಸಲಿದ್ದಾರೆ. ಸುಮಾರು ಎರಡು ಗಂಟೆಗಳ ಕಾಲ ವಿಜ್ಞಾನಿಗಳೊಂದಿಗೆ ಸಮಾಲೋಚನೆ ನಡೆಸಿ, ರಾಷ್ಟ್ರದ ಪರವಾಗಿ ಅವರಿಗೆ ಗೌರವ ಸಮರ್ಪಣೆ ಮಾಡಲಿದ್ದಾರೆ. ಭಾರತದ ಮಹತ್ವಾಕಾಂಕ್ಷಿ ಚಂದ್ರ ಯಾನ–3ರ ಯಶಸ್ಸಿನ ಐತಿಹಾಸಿಕ ಕ್ಷಣವನ್ನು ಮೋದಿ ಅವರು ಈಗಾಗಲೇ ನವ ಭಾರತದ ಉದಯ ಎಂದು ವ್ಯಾಖ್ಯಾನಿಸಿದ್ದಾರೆ.

ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಜೋಹಾನ್ಸ್‌ಬರ್ಗ್‌ಗೆ ತೆರಳಿರುವ ಪ್ರಧಾನಿ, ಅಲ್ಲಿಂದಲೇ ಇಸ್ರೋ ಅಧ್ಯಕ್ಷರನ್ನು ಸಂಪರ್ಕಿಸಿ ಅಭಿನಂದಿಸಿದ್ದಲ್ಲದೆ, ಕಾರ್ಯಕ್ರಮ ಮುಗಿಸಿ ನೇರವಾಗಿ ನಿಮ್ಮನ್ನು ಭೇಟಿ ಮಾಡುತ್ತೇನೆ ಎಂದು ತಿಳಿಸಿದ್ದರು.

ದಸರಾ ದೀಪಾಲಂಕಾರ: ಸಲಹೆ ಸೂಚನೆ ನೀಡಲು ಆ.28 ಕೊನೆ ದಿನ

ಮೈಸೂರು,ಆ.24–ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಚಾವಿಸನಿನಿ ವತಿಯಿಂದ ಮೈಸೂರು ನಗರ ವ್ಯಾಪ್ತಿಯಲ್ಲಿ ಪ್ರಮುಖ ವೃತ್ತಗಳು, ರಸ್ತೆಗಳು ಹಾಗೂ ಪ್ರತಿಕೃತಿಗಳಿಗೆ ದೀಪಾಲಂಕಾರ ಮಾಡಲಾಗುತ್ತಿದ್ದು, ದೀಪಾಲಂಕಾರ ವನ್ನು ವಿನೂತನವಾಗಿ ನಿರ್ವಹಿಸುವ ಉದ್ದೇಶದಿಂದ ಸಾರ್ವಜನಿಕರಿಂದ ವಿದ್ಯುತ್ ದೀಪಾಲಂಕಾರಕ್ಕೆ ಸಂಬಂಧಿಸಿದಂತೆ ವಿನೂತನ ಮಾದರಿಗಳು, ಪ್ರತಿಕೃತಿಗಳು ಹಾಗೂ ಸಲಹೆ ಸೂಚನೆಗಳು ಇದ್ದಲ್ಲಿ ಆ.28ರೊಳಗೆ ಛಾಯಾಚಿತ್ರ ಮತ್ತು ವೀಡಿಯೋಗಳನ್ನು ಕಚೇರಿ ಇ–ಮೇಲ್ ವಿಳಾಸ seeworksmy@gmail. com, seemys@cescmysore. orgಗೆ ಸಲ್ಲಿಸಬಹುದು. ಮಾಹಿತಿಗಾಗಿ ಚಾವಿಸನಿನಿ ಕಾರ್ಯ ಮತ್ತು ಪಾಲನಾ ವೃತ್ತದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎಂ.ಶ್ರೀನಾಥ್ ಮೊ.ಸಂ: 9449595548 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ನೀರಿನ ಬಿಲ್ ಪಾವತಿಗೆ QR ಕೋಡ್ ವ್ಯವಸ್ಥೆ ವಿಳಂಬ

ಮೈಸೂರು,ಆ.24(ಆರ್‌ಕೆ)–ಕುಡಿಯುವ ನೀರಿನ ಮಾಸಿಕ ಬಿಲ್ ಪಾವತಿಸಲು ಡೈನಾಮಿಕ್ QR ಕೋಡ್ ವ್ಯವಸ್ಥೆ ಜಾರಿಗೆ ತರಲು ಮೈಸೂರು ಮಹಾನಗರಪಾಲಿಕೆಯು ಸಿದ್ಧತೆ ಮಾಡಿಕೊಂಡಿದೆಯಾದರೂ, ತಾಂತ್ರಿಕ ಕಾರಣದಿಂದ ವಿಳಂಬವಾಗುತ್ತಿದೆ. ಮೇಯರ್ ಶಿವಕುಮಾರ್ ಅವರ ವಿಶೇಷ ಆಸಕ್ತಿಯೊಂದಿಗೆ ಈ ಹಿಂದಿನ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀ ಕಾಂತರೆಡ್ಡಿ ಅವರು ವಾಣಿವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳ ನೆರವಿನೊಂದಿಗೆ ನೀರಿನ ಮಾಸಿಕ ಬಿಲ್ ಮೇಲೆ ಪ್ರತೀ ಗ್ರಾಹಕರಿಗೆ ಪ್ರತ್ಯೇಕ ಡೈನಾಮಿಕ್ QR ಕೋಡ್ ಮುದ್ರಿಸಿ ಕೊಡುವ ಯೋಜನೆಯನ್ನು ಸಿದ್ಧಪಡಿಸಿದ್ದರು. ಅಷ್ಟರಲ್ಲಿ ಆಯುಕ್ತರ ವರ್ಗಾವಣೆಯಾಯಿತು.

ನಂತರ ಬಂದ ಆಯುಕ್ತರಿಗೆ ಅಧಿಕಾರಿಗಳು ಉದ್ದೇಶಿತ ಹೊಸ ಯೋಜನೆ ಬಗ್ಗೆ ಮಾಹಿತಿ ನೀಡದೇ ವಿಳಂಬ ಮಾಡುತ್ತಿರುವುದರಿಂದ QR ಕೋಡ್ ವ್ಯವಸ್ಥೆ ಅನುಷ್ಠಾನಗೊಂಡಿಲ್ಲ. ವಿಜ್ಞಾನ, ತಂತ್ರಜ್ಞಾನ ಬೆಳೆದಿದ್ದು, ಸರಳ ವಿಧಾನದ ಮೂಲಕ ನಾಗರಿಕರಿಗೆ ಸೇವೆ ಲಭ್ಯವಾಗುವಂತೆ ಮಾಡಲು ಇಚ್ಛಾಸಕ್ತಿ ಕೊರತೆ ಕಾಣುತ್ತಿದೆ.

ಪರಿಣಾಮ ವಾಣಿವಿಲಾಸ ವಾಟರ್ ವರ್ಕ್ಸ್ ಕಚೇರಿ, ಪಾಲಿಕೆ ವಲಯ ಕಚೇರಿಗಳ ಕೌಂಟರ್‌ಗಳಲ್ಲಿ ಹೋಗಿ ನೀರಿನ ಬಿಲ್ ಪಾವತಿಸುವ ಹಳೇ ಪದ್ಧತಿ ಮುಂದುವರೆದಿದೆ. ಮನೆಗೆ ಬಿಲ್ ಬರುತ್ತಿದ್ದಂತೆಯೇ ಮೊಬೈಲ್‌ನಿಂದ ಸ್ಕ್ಯಾನ್ ಮಾಡಿ ಫೋನ್ ಪೇ, ಗೂಗಲ್ ಪೇ ಮಾದರಿಯಲ್ಲಿ ಕುಳಿತಲ್ಲೇ ಪಾವತಿ ಮಾಡುವ ಸರಳ ವಿಧಾನವನ್ನು ಜಾರಿಗೊಳಿಸಿದರೆ ಅನುಕೂಲವಾಗುತ್ತದೆ ಎಂದು ಗ್ರಾಹಕರು ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಸಜ್ಜಾಗಿವೆ 'ಸಂಚಾರಿ ಪಶು ಚಿಕಿತ್ಸಾಲಯ'

1962ಕ್ಕೆ ಕರೆ ಮಾಡಿದರೆ ನಿಮ್ಮ ಮನೆ ಬಾಗಿಲಲ್ಲೇ ಚಿಕಿತ್ಸೆ ನೀಡಲು ರೆಡಿಯಾಗಿವೆ ಆಂಬುಲೆನ್ಸ್

ಮೈಸೂರು,ಆ.24(ಜಿಎ)–ಮೈಸೂರು ಜಿಲ್ಲೆಯಲ್ಲಿ ಶೀಘ್ರದಲ್ಲೇ 'ಸಂಚಾರಿ ಪಶು ಚಿಕಿತ್ಸಾಲಯ' ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಲಿದ್ದು, ಈಗಾಗಲೇ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯೂ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಕಳೆದ ವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಒಟ್ಟು 275 ಸಂಚಾರಿ ಪಶು ಚಿಕಿತ್ಸಾಲಯ ಆಂಬುಲೆನ್ಸ್ ಹಾಗೂ ಸಹಾಯವಾಣಿ ಸಂಖ್ಯೆ 1962ಕ್ಕೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2022ರ ಮೇ 7ರಂದು ಬೆಂಗಳೂರಿನಲ್ಲಿ ಚಾಲನೆ ನೀಡಿದ್ದರು. ಆದರೆ, ಈ ಯೋಜನೆಯೂ ಸಮರ್ಪಕವಾಗಿ ಜಾರಿಯಾಗಿರಲಿಲ್ಲ. ಈಗ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ಶೀಘ್ರದಲ್ಲಿಯೇ ಆಂಬುಲೆನ್ಸ್ ಸೇವೆ ಆರಂಭಿಸಲು ಚಿಂತನೆ ನಡೆಸಿದ್ದು, ವಾರದೊಳಗೆ ಆಂಬುಲೆನ್ಸ್‌ಗಳು ಮೈಸೂರಿನಲ್ಲಿ ಸಂಚರಿಸುವ ಸಾಧ್ಯತೆ ಇದೆ.

ಮೊದಲ ಹಂತವಾಗಿ 75 ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಲಾಗಿತ್ತು. ಅದರಂತೆ ಮೈಸೂರಿಗೆ 9 'ಸಂಚಾರಿ ಪಶು ಚಿಕಿತ್ಸಾಲಯ' ಆಂಬುಲೆನ್ಸ್ ನೀಡಲಾಗಿತ್ತು. ಆದರೆ, ಈಗ ಅದಕ್ಕೆ ಮತ್ತೆರಡು ಸೇರ್ಪಡೆಯಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಒಟ್ಟು 11 ಆಂಬುಲೆನ್ಸ್‌ಗಳಿವೆ. ಮೈಸೂರಿನ 9 ತಾಲೂಕು ಕೇಂದ್ರಗಳಾದ ಮೈಸೂರು ನಗರ ವ್ಯಾಪ್ತಿಯಲ್ಲಿ 2, ಪಿರಿಯಾಪಟ್ಟಣ 2 ವಾಹನಗಳು, ಹೆಗ್ಗಡದೇವನಕೋಟೆ, ಹುಣಸೂರು, ತಿ.ನರಸೀಪುರ, ನಂಜನಗೂಡು, ಕೆ.ಆರ್.ನಗರ, ಸಾಲಿಗ್ರಾಮ, ಸರಗೂರು ತಾಲೂಕುಗಳಿಗೆ ತಲಾ ಒಂದು ಆಂಬುಲೆನ್ಸ್ ಒದಗಿಸಲಾಗುತ್ತಿದೆ. ರೈತರು ಹಾಗೂ ಸಾರ್ವಜನಿಕರು ತಮ್ಮ ಮನೆಯಲ್ಲಿರುವ ಕುರಿ, ಮೇಕೆ ಸೇರಿದಂತೆ ಮತ್ತಿತರ ಜಾನುವಾರುಗಳಿಗೆ ಚಿಕಿತ್ಸೆ, ಗರ್ಭಧಾರಣೆ ಸಮಸ್ಯೆಗಳಿಗಾಗಿ ಪಶು ಕೇಂದ್ರಗಳಿಗೆ ಅಲೆಯುವ ಅವಶ್ಯಕತೆಯೇ ಇಲ್ಲ. ಯಾವುದೇ ರೀತಿ ಆರೋಗ್ಯ ಸಮಸ್ಯೆಗಳಾದರೆ 1962 ಸಂಖ್ಯೆಗೆ ಕರೆ ಮಾಡಿದರೆ, ಬೆಂಗಳೂರಿನಲ್ಲಿರುವ ಕಂಟ್ರೋಲ್ ರೂಂಗೆ ಮಾಹಿತಿ ತಲುಪುತ್ತದೆ. ನಂತರ 'ಸಂಚಾರಿ ಪಶು ಚಿಕಿತ್ಸಾಲಯ' ವಾಹನ ನೇರವಾಗಿ ನಿಮ್ಮ ಮನೆ ಬಾಗಿಲಿಗೆ ತಲುಪಲಿದೆ. ಈ ಮೂಲಕ ಸ್ಥಳದಲ್ಲೇ ಸೂಕ್ತ ಚಿಕಿತ್ಸೆ ದೊರೆಯಲಿದೆ.

ಶೀಘ್ರದಲ್ಲಿ ಸೇವೆ: ಮೈಸೂರನ್ನು ತಲುಪಿರುವ 'ಸಂಚಾರಿ ಪಶು ಚಿಕಿತ್ಸಾಲಯ' ವಾಹನಗಳು ಶೀಘ್ರದಲ್ಲೇ ಸೇವೆ ನೀಡಲಿವೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.





'ಸಂಚಾರಿ ಪಶು ಚಿಕಿತ್ಸಾಲಯ' ಆಂಬುಲೆನ್ಸ್ ಮತ್ತು ಅದರ ಒಳಭಾಗದಲ್ಲಿ ಜಾನುವಾರುಗಳಿಗೆ ಚಿಕಿತ್ಸೆಗೆ ಎಲ್ಲಾ ವ್ಯವಸ್ಥೆ ಮಾಡಿಕೊಂಡಿರುವುದನ್ನು ಕಾಣಬಹುದು.

ಆಂಬುಲೆನ್ಸ್‌ನಲ್ಲಿ ಏನೇನಿದೆ!

ಒಬ್ಬ ವೈದ್ಯರು, ಪಶು ವೈದ್ಯಕೀಯ ಸಹಾಯಕ, ಡಿ ದರ್ಜೆ ನೌಕರ ಮತ್ತು ಚಾಲಕನನ್ನು ಒಳಗೊಂಡಿರುವ 'ಸಂಚಾರಿ ಪಶು ಚಿಕಿತ್ಸಾಲಯ' ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಅಗತ್ಯವಾಗಿ ಬೇಕಾಗಿರುವ ಎಲ್ಲಾ ರೀತಿಯ ಸಾಮಗ್ರಿ ಹೊಂದಿದೆ. ಇದರೊಂದಿಗೆ ಎಸಿ, ಫ್ಯಾನ್, ಬಿಸಿ ನೀರು ಕಾಯಿಸಲು ಗೀಸರ್, ಔಷಧಿಗಳನ್ನು ಶೇಖರಿಸಲು ಫ್ರಿಡ್ಜ್ ವ್ಯವಸ್ಥೆಯನ್ನು ಸಹ ಮಾಡಲಾಗಿದ್ದು, ಯಾವುದೇ ಸರ್ವ ಸನ್ನದ್ಧ ಪಶು ಕೇಂದ್ರಕ್ಕೂ ಕಡಿಮೆ ಇಲ್ಲದಂತೆ ಸೇವೆಗೆ ಲಭ್ಯವಿದೆ.

'ಸಂಚಾರಿ ಪಶು ಚಿಕಿತ್ಸಾಲಯ' ಕಾರ್ಯನಿರ್ವಹಿಸಲು ಈ ಹಿಂದೆ ಮಾನವ ಸಂಪನ್ಮೂಲ ಅಗತ್ಯವಿತ್ತು

> "ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಯಾವುದೇ ವ್ಯಾಪ್ತಿ ಇರುವುದಿಲ್ಲ. ತಾಲೂಕಿನ ಯಾವುದೇ ಭಾಗದಿಂದ ಕರೆ ಬಂದರೂ ತಕ್ಷಣ ತೆರಳಿ ಪಶುಗಳಿಗೆ ಸೂಕ್ತ ಚಿಕಿತ್ಸೆ ನೀಡಲು ಉಪಯುಕ್ತವಾಗಿದ್ದು, ರೈತರು ಮತ್ತು ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬಹುದು.
>
> –ನಾಗರಾಜ್, ಉಪನಿರ್ದೇಶಕ, ಪಶುಪಾಲನಾ, ಪಶು ವೈದ್ಯಕೀಯ ಸೇವಾ ಇಲಾಖೆ

ಆದರೆ, ಈಗ ಸರ್ಕಾರದ ವತಿಯಿಂದಲೇ ವಿಶೇಷ ಟೆಂಡರ್ ಕರೆದು ಪ್ರತಿ ಆಂಬುಲೆನ್ಸ್‌ನಲ್ಲಿ ಚಿಕಿತ್ಸೆಗೆ ಅಗತ್ಯವಿರುವ ವೈದ್ಯರು, ಪಶು ವೈದ್ಯಕೀಯ ಸಹಾಯಕ, ಡಿ ದರ್ಜೆ ನೌಕರ ಮತ್ತು ಚಾಲಕನನ್ನು ನೇಮಕ ಮಾಡಿಕೊಳ್ಳಲಾಗಿದೆ. ವಾರದೊಳಗೆ ಆಂಬುಲೆನ್ಸ್ ಮೈಸೂರಿನಲ್ಲಿ ಸೇವೆ ಆರಂಭಿಸಲಿದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.8.2023 ಶುಕ್ರವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ, ಲಯನ್ಸ್ ಕ್ಲಬ್ ಆಫ್ ಮಯೂರಿ, ಲಿಯೋ ಕ್ಲಬ್ ಆಫ್ ಮೈಸೂರು ಯರೀಶ್, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ :** ಉಚಿತ ಅಕ್ಯೂಪ್ರೆಶರ್, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಷನ್ ತೆರಪಿ ಚಿಕಿತ್ಸೆ, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ವಿಶ್ವೇಶ್ವರನಗರ, ಬೆಳಗ್ಗೆ 8ರಿಂದ ಮಧ್ಯಾಹ್ನ 12 ಗಂಟೆವರೆಗೆ, ಸಂಜೆ 4ರಿಂದ 8 ರವರೆಗೆ.

■ **ಶ್ರೀ ಶೃಂಗೇರಿ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ವರಮಹಾಲಕ್ಷ್ಮಿ ವ್ರತ ಹಾಗೂ ಶ್ರೀ ಮಹಾಲಕ್ಷ್ಮಿ ಪೂಜೆ, ಸ್ಥಳ : ಶ್ರೀ ಶೃಂಗೇರಿ ಶಂಕರ ಮಠ, ಬೆಳಗ್ಗೆ 8.30ರಿಂದ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಡಾ.ಅಂಬೇಡ್ಕರ್ ಪೀಠ, ಇಂಡಿಯನ್ ಪಾಲಿಟಿ ಫೋರಂ:** ಕ್ಷೇತ್ರ ಪುನರ್‌ವಿಂಗಡಣೆ: ಅಂತರರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಬೆಂಗಳೂರು ರಾಷ್ಟ್ರೀಯ ಕಾನೂನು ಶಾಲೆ ಇಂಡಿಯಾ ವಿವಿ ವಿಶ್ರಾಂತ ಕುಲಪತಿ ಡಾ.ಜಿ.ಮೋಹನ್ ಗೋಪಾಲ್, ದಿಕ್ಸೂಚಿ ನುಡಿ: ಹರಿಯಾಣ ನಿವೃತ್ತ ಮುಖ್ಯ ಕಾರ್ಯದರ್ಶಿ ಎಂ.ಜಿ.ದೇವಸಹಾಯಂ, ಮುಖ್ಯ ಅತಿಥಿಗಳು: ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ವಿಶ್ರಾಂತ ಸಂಪಾದಕ ಪ್ರೊ.ಗೋಪಾಲ್ ಗುರು, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ವಾಚನ: ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಸನಾತನ ಸಭಾ, ಮೈಸೂರು :** ರಾಮಾಯಣ ಪ್ರವಚನ ಮಾಲಿಕೆ ಏಳನೇ ಸರಣಿ, ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಕುರಿತು ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ 8ರವರೆಗೆ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ತಂಡದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಮ್ಮ ಊರಿನ ರಸಿಕರು ಮತ್ತು ಇತರ ಕೃತಿಗಳ ಆಧಾರಿತ ನಾಟಕ 'ಗೊರೂರು' ನಾಟಕ ಪ್ರದರ್ಶನ, ರಂಗ ನಿರ್ವಹಣೆ : ಆಕರ್ಷ್‌ಕುಮಾರ್, ಸಂಗೀತ : ದಿಗ್ವಿಜಯ ಹೆಗ್ಗೋಡು, ನಿರ್ದೇಶನ : ಮಂಜುನಾಥ ಎಲ್. ಬಡಿಗೇರ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ

■ **ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ :** ವಿದ್ವಾನ್ ಮೈಸೂರ್ ಸುಬ್ರಮಣ್ಯ ಕುಮಾರ್ ನೇತೃತ್ವದಲ್ಲಿ ತಿಂಗಳ ಕಾರ್ಯಕ್ರಮ, ವಿದ್ವಾನ್ ಅಜಯ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ, ವಿದ್ವಾನ್. ಸಿ. ಚೇತನ್–ಪಿಟೀಲು, ವಿದ್ವಾನ್ ಕೇಶವ ದತ್ತ–ಮೃದಂಗ, ವಿದ್ವಾನ್ ಟಿ.ಎನ್. ಅಜಯ್– ಘಟಂ, ಸ್ಥಳ: 16ನೇ ಕ್ರಾಸ್ ಶ್ರೀರಾಮ ಮಂದಿರ ಜಯನಗರ, ಸಂಜೆ 6.30ರಿಂದ 8.15 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬಣ್ಣದ ಬಾನಾಡಿಗಳು, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ– ಜಿ.ಶಾಂತ ಕುಮಾರ್ 6.40 ಪದಸಂಸ್ಕೃತಿ–ಟಿ.ಎಸ್.ಗೋಪಾಲ್, 7.15 ಭಾವ ಗೀತೆಗಳು–ಸಂಗೀತಾ ಕಟ್ಟಿ, ಸುಪ್ರಿಯಾ ಆಚಾರ್ಯ, ಎಂ.ಡಿ. ಪಲ್ಲವಿ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಆರ್.ಹರಿಣಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ದಿವ್ಯಾರಾಘವನ್, ಜಗನ್ನಾಥ್ ಮತ್ತು ಎನ್. ಜ್ಯೋತಿ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಸ್ಟಾನ್ಲೀ ಪಾರ್ಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 3.00 ಎನ್.ವಿ. ಸತ್ಯನಾರಾಯಣ–ಶ್ರೀ ಸರಸ್ವತಿ ಸಂಗೀತ ವಿದ್ಯಾಲಯದ ಸದಸ್ಯೆಯರಿಂದ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಕಾರ್ಯಕ್ರಮ, 4.00 ಮಹಿಳಾರಂಗ–ಮನಸ್ವಿನಿ ಮಹಿಳಾ ಸಂಘದ ಸದಸ್ಯೆಯರಿಂದ "ಶ್ರಾವಣ ಮಾಸ" ಕುರಿತ ಕಾರ್ಯಕ್ರಮ, 4.30 ವೃತ್ತಿ ಮಾರ್ಗದರ್ಶನ ಮಂಜುನಾಥ್, 6.10 ಬಣ್ಣದ ಬಾನಾಡಿಗಳು, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.50 ಕೃಷಿರಂಗ–ಡ್ರಾಗನ್ ಹಣ್ಣಿನ ಬೇಸಾಯ ಕುರಿತು ಸಂವಾದ. ಭಾಗವಹಿಸುವವರು ಡಾ.ಎಸ್. ವೆಂಕಟೇಶಮೂರ್ತಿ, ಯಮುನಾ ಸೂರ್ಯನಾರಾಯಣ, 8.00 ಸಂಧ್ಯಾರಾಗ, 9.30 ತುಮಕೂರು ಬಿ.ರವಿಶಂಕರ್ ನಿರ್ದೇಶನದ ವಾದ್ಯವೃಂದ, 10.00 ಜನಪದ ರೂಪಕ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 25 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 130 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಪರಿಹಾರ ನಿಧಿಗೆ ಸಮರ್ಪಕ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಿ

ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಬೆಂಗಳೂರು, ಆ.24– ಮುಖ್ಯಮಂತ್ರಿಗಳ ಪರಿಹಾರ ನಿಧಿಗಾಗಿ ಅರ್ಜಿಯೊಂದಿಗೆ ಸಮರ್ಪಕ ದಾಖಲೆಗಳನ್ನು ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪರಿಹಾರ ಕೋರಿ ಸಚಿವರು, ವಿಧಾನಸಭಾ ಮತ್ತು ವಿಧಾನಪರಿಷತ್ ಸದಸ್ಯರು ಹಾಗೂ ಸಂಸದರ ಕಚೇರಿಗಳಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಕೆಯಾಗುವ ಬಹುತೇಕ ಅರ್ಜಿಗಳೊಂದಿಗೆ ಸಮರ್ಪಕ ದಾಖಲೆಗಳನ್ನು ಒದಗಿಸದಿರುವುದು ನನ್ನ ಗಮನಕ್ಕೆ ಬಂದಿದೆ. ಇದರಿಂದ ಕಡತ ವಿಲೇವಾರಿ ಸಾಧ್ಯವಾಗದೆ ಬಡವರು, ನಿರ್ಗತಿಕರು ಹಾಗೂ ನೊಂದ ಜನರಿಗೆ ಸಕಾಲದಲ್ಲಿ ಪರಿಹಾರ ಸಿಗದಂತಾಗಿದೆ. ಈ ಮೂಲಕ ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಮುಖ್ಯ ಉದ್ದೇಶವೂ ಈಡೇರಿದಂತಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಇನ್ನು ಮುಂದೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಅರ್ಜಿದಾರರ ಪಾಸ್‌ಪೋರ್ಟ್ ಅಳತೆ ●6ನೇ ಪುಟಕ್ಕೆ

ಧನಭಾಗ್ಯ ಯೋಜನೆಯಡಿ ಕಾರ್ಡ್‌ದಾರರಿಗೆ ಎರಡನೇ ಕಂತಿನ ಹಣ ಪಾವತಿ

ಬೆಂಗಳೂರು, ಆ.24– ಧನಭಾಗ್ಯ ಯೋಜನೆಯಡಿ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್‌ದಾರರ ಖಾತೆಗೆ ಪ್ರಸ್ತುತ ತಿಂಗಳಿನ 2ನೇ ಕಂತು ಹಣ ಸಂದಾಯವಾಗುತ್ತಿದೆ.

ರಾಜ್ಯಾದ್ಯಂತ 1.03 ಕೋಟಿ ಕಾರ್ಡ್‌ಗಳಿಂದ ಒಟ್ಟು 3.69 ಕೋಟಿ ಫಲಾನುಭವಿಗಳಿಗೆ 605 ಕೋಟಿ ರೂ. ಪಾವತಿಸಬೇಕಿದೆ. ರಾಜ್ಯದ 31 ಜಿಲ್ಲೆಗಳ ಪೈಕಿ ಬೀದರ್, ಚಿತ್ರದುರ್ಗ, ದಾವಣಗೆರೆ ಹಾಗೂ ರಾಮನಗರ ಫಲಾನುಭವಿಗಳಿಗೆ ಹಣ ಪಾವತಿಸಲಾಗಿದ್ದು, ಮುಂದಿನ ಐದು ದಿನಗಳಲ್ಲಿ ಉಳಿದ ಜಿಲ್ಲೆಗಳ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡುವುದಾಗಿ ಆಹಾರ ಇಲಾಖೆ ಮಾಹಿತಿ ನೀಡಿದೆ.

ಕಾರ್ಡ್‌ದಾರರಿಗೆ ಅಕ್ಕಿ ಬದಲು ಹಣ ವರ್ಗಾವಣೆ ವ್ಯವಸ್ಥೆಯು ರಾಜ್ಯದಲ್ಲಿ ಜು.10ರಿಂದ ಜಾರಿಗೆ ಬಂದಿದೆ. ರಾಷ್ಟ್ರೀಯ ಮಾಹಿತಿ ಕೇಂದ್ರದಿಂದ (ಎನ್‌ಐಸಿ) ಫಲಾನುಭವಿಗಳ ಮಾಹಿತಿಯನ್ನು ಇ–ಆಡಳಿತ ಇಲಾಖೆ ಅಭಿವೃದ್ಧಿಪಡಿಸಿರುವ ●9ನೇ ಪುಟಕ್ಕೆ

ಕಾಂಗ್ರೆಸ್ ಸೇರುವ ಬಿಜೆಪಿ, ಜೆಡಿಎಸ್ ಶಾಸಕರು, ನಾಯಕರಿಗೆ ಯಾವುದೇ ಸ್ಥಾನಮಾನದ ಭರವಸೆ ನೀಡಿಲ್ಲ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟನೆ

ಬೆಂಗಳೂರು, ಆ.24(ಕೆಎಂಶಿ)– ಬಿಜೆಪಿ, ಜೆಡಿಎಸ್ ತೊರೆದು ಪಕ್ಷ ಸೇರುವ ಶಾಸಕರು ಮತ್ತು ಮುಖಂಡರಿಗೆ ಯಾವುದೇ ಸ್ಥಾನಮಾನದ ಭರವಸೆ ನೀಡಿಲ್ಲ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ನಮ್ಮಿಂದ ದೂರ ಸರಿದವರು ಮತ್ತು ನಮ್ಮ ಸಂಘಟನೆಯ ಶಕ್ತಿಯನ್ನು ನೆಚ್ಚಿ ಹಲವಷ್ಟು ಮಂದಿ ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ನಮಗೆ ಸ್ಪಷ್ಟ ಬಹುಮತ ನೀಡಿ ಜನ ಶಕ್ತಿ ಕೊಟ್ಟಿದ್ದಾರೆ. ಹೊರಗಿನವರ ಅವಶ್ಯಕತೆ ನಮಗಿಲ್ಲ. ಆದರೂ ಸಿದ್ಧಾಂತಗಳನ್ನು ಒಪ್ಪಿ ಬರುವವರನ್ನು ಬೇಡ ಎನ್ನುವುದು ಸರಿ ಅಲ್ಲ. ಪಕ್ಷದ ಕಚೇರಿಯಲ್ಲಿ ಮಾಜಿ ಶಾಸಕ ಹಾಗೂ ಜೆಡಿಎಸ್ ಮುಖಂಡ ಆಯನೂರು ಮಂಜುನಾಥ್, ಶಿಕಾರಿಪುರದಲ್ಲಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಬಿಜೆಪಿ ಅಭ್ಯರ್ಥಿ ಬಿ.ಎಸ್.ವಿಜಯೇಂದ್ರಗೆ ಭಾರಿ ಪೈಪೋಟಿ ನೀಡಿದ್ದ ನಾಗರಾಜ್‌ಗೌಡ ಸೇರಿದಂತೆ ಕೆಲವು ಮುಖಂಡರನ್ನು ಸೇರ್ಪಡೆ ಮಾಡಿಕೊಂಡ ನಂತರ ಮಾತನಾಡಿ, ವಲಸಿಗರಿಗೆ ಈ ಸ್ಪಷ್ಟ ಸಂದೇಶ ರವಾನಿಸಿದ್ದಾರೆ. ಹೊಸದಾಗಿ ಬಂದಿರುವವರು ಹಳಬರನ್ನು ತಳ್ಳಿ ಮುಂದೆ ಬರಲು ಈ ಡಿ.ಕೆ.ಶಿವಕುಮಾರ್ ಅವಕಾಶ ನೀಡುವುದಿಲ್ಲ. ಪಕ್ಷ ಸೇರುವವರಿಗೆ ಯಾವುದೇ ಸ್ಥಾನಮಾನ ●9ನೇ ಪುಟಕ್ಕೆ

ಮೈಸೂರಲ್ಲಿ 3,200 ಉದ್ಯೋಗ ಸೃಷ್ಟಿಯ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ

●ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಕೇನ್ಸ್ ಟೆಕ್ನಾಲಜೀಸ್ ಸಂಸ್ಥೆ ಹಾಗೂ ಕೈಗಾರಿಕಾ ಇಲಾಖೆ ಒಡಂಬಡಿಕೆಗೆ ಸಹಿ ●ಕಡಕೊಳ ಕೈಗಾರಿಕಾ ಪ್ರದೇಶದ ಕೋಚನಹಳ್ಳಿಯಲ್ಲಿ ಘಟಕ ಆರಂಭ



ಅತ್ಯಾಧುನಿಕ ಸೆಮಿಕಂಡಕ್ಟರ್ ತಯಾರಿಕಾ ಘಟಕ ಸ್ಥಾಪನೆಗಾಗಿ ಕೇನ್ಸ್ ಟೆಕ್ನಾಲಜೀಸ್ ಸಂಸ್ಥೆ ಹಾಗೂ ರಾಜ್ಯ ಕೈಗಾರಿಕಾ ಇಲಾಖೆಯ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಗುರುವಾರ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಬೆಂಗಳೂರು, ಆ.24– ಮೈಸೂರಿನಲ್ಲಿ 3,200 ಉದ್ಯೋಗ ಸೃಷ್ಟಿಸುವ 3,750 ಕೋಟಿ ರೂ. ಹೂಡಿಕೆಯ ಅತ್ಯಾಧುನಿಕ ಸೆಮಿಕಂಡಕ್ಟರ್ ತಯಾರಿಕಾ ಘಟಕ ಸ್ಥಾಪನೆ ಸಂಬಂಧ ಒಡಂಬಡಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಗುರುವಾರ ಸಹಿ ಹಾಕಲಾಯಿತು.

ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದ ಕೋಚನಹಳ್ಳಿಯಲ್ಲಿ 10 ಸಾವಿರ ಜನರಿಗೆ ಉದ್ಯೋಗಾವಕಾಶ ಕಲ್ಪಿಸುವಂತಹ ಇಸ್ರೇಲ್ ಮೂಲದ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ ಸಂಬಂಧ ಹಿಂದಿನ ಬಿಜೆಪಿ ಸರ್ಕಾರ ಒಡಂಬಡಿಕೆ ಮಾಡಿಕೊಂಡಿತ್ತಾದರೂ, ಅದನ್ನು ಅಮೆರಿಕಾದ ಇಂಟೆಲ್ ಕಂಪನಿ ಖರೀದಿಸಿದ್ದರಿಂದ, ಕಾನೂನಾತ್ಮಕ ತೊಡಕು ಉಂಟಾಗಿ ಅದು ಸ್ಥಾಪನೆ ಆಗುವುದು ಅನುಮಾನವಾಗಿರುವ ಸಂದರ್ಭದಲ್ಲೇ ಕೇನ್ಸ್ ಟೆಕ್ನಾಲಜೀಸ್ ಸಂಸ್ಥೆ ಮೈಸೂರಿನ ಹೊರ ವಲಯದ ಕೋಚನಹಳ್ಳಿಯಲ್ಲಿ ಸೆಮಿ ಕಂಡಕ್ಟರ್ ಸ್ಥಾಪಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಈಗ ಸ್ಥಾಪಿಸಲು ಉದ್ದೇಶಿರುವ ಸೆಮಿ ಕಂಡಕ್ಟರ್ ಅಸೆಂಬ್ಲಿ ಬಿಡಿಭಾಗಗಳು ಮತ್ತು ಟೆಸ್ಟಿಂಗ್ ಸೌಲಭ್ಯ, ಪ್ರಿಂಟೆಡ್ ಸರ್ಕಿಟ್ ಬೋರ್ಡ್ ಉತ್ಪಾದನಾ ಘಟಕವನ್ನು ಸ್ಥಾಪಿಸುವ ಸಂಬಂಧ ಕೇನ್ಸ್ ಟೆಕ್ನಾಲಜೀಸ್ ಸಂಸ್ಥೆ ಹಾಗೂ ಕೈಗಾರಿಕಾ ಇಲಾಖೆಯ ನಡುವೆ ಒಪ್ಪಂದವಾಯಿತು. ಈ ಒಪ್ಪಂದ ರಾಜ್ಯದಲ್ಲಿ ಎಲೆಕ್ಟ್ರಾನಿಕ್ಸ್ ಹಾಗೂ ಸೆಮಿ ಕಂಡಕ್ಟರ್ ಉತ್ಪಾದನಾ ಅಭಿವೃದ್ಧಿಗೆ ಪೂರಕವಾಗಲಿದೆ ಹಾಗೂ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ ಎಂದು ಸರ್ಕಾರ ತಿಳಿಸಿದೆ. ಕೇನ್ಸ್ ಟೆಕ್ನಾಲಜಿಯು ಮೈಸೂರಿನಲ್ಲಿ ಇಎಸ್‌ಡಿಎಂ ಸೆಮಿಕಾನ್ ಪರಿಸರ ವ್ಯವಸ್ಥೆಯ ಪ್ರಮುಖ ನಿರ್ವಹಣಾ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲಿದ್ದು, ಈ ಒಡಂಬಡಿಕೆಯು ಮೈಸೂರು ನಗರವನ್ನು ಜಾಗತಿಕ ನಕ್ಷೆಯಲ್ಲಿ ಗುರುತಿಸಲು ಸಹಾಯ ಮಾಡುತ್ತದೆ. ಕೇನ್ಸ್ ಸೆಮಿಕಾನ್ ಪ್ರೈವೇಟ್ ಲಿಮಿಟೆಡ್ ಸೆಮಿಕಂಡಕ್ಟರ್ ಅಸೆಂಬ್ಲಿ ಮತ್ತು ಟೆಸ್ಟಿಂಗ್ (OSAT) ಸೌಲಭ್ಯದ ಸಂಸ್ಥೆಯಾಗಿದ್ದು, ಬಹು–ಲೇಯರ್ಡ್ ಬೋರ್ಡ್‌ಗಳನ್ನು ಉತ್ಪಾದಿಸಲು ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ (ಪಿಸಿಬಿ) ತಯಾರಿಕಾ ಘಟಕವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಮಾಹಿತಿ ●6ನೇ ಪುಟಕ್ಕೆ

ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಹರಿಯುತ್ತಿದ್ದ ನೀರು ಬಂದ್



ಮಂಡ್ಯ, ಆ.24– ಕೆಆರ್‌ಎಸ್ ಅಣೆಕಟ್ಟೆಯಿಂದ ತಮಿಳುನಾಡಿಗೆ ಕಳೆದ ಕೆಲ ದಿನಗಳಿಂದ ಹರಿಸುತ್ತಿದ್ದ ಕಾವೇರಿ ನೀರನ್ನು ಗುರುವಾರ ಸ್ಥಗಿತಗೊಳಿಸಲಾಗಿದೆ.

ಕಳೆದ 10 ದಿನಗಳಿಂದ ಸುಮಾರು 12 ಟಿಎಂಸಿಗೂ ಅಧಿಕ ನೀರನ್ನು ತಮಿಳುನಾಡಿಗೆ ಹರಿಸಲಾಗುತ್ತಿತ್ತು. ನೀರು ಬಿಡುತ್ತಿರುವ ಕ್ರಮ ಖಂಡಿಸಿ, ಬಿಜೆಪಿ, ರೈತ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳು ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ಹಲವೆಡೆ ಪ್ರತಿಭಟನೆ ಮಾಡಿದ್ದವು. ಇದಕ್ಕೆ ಕ್ಯಾರೆ ಎನ್ನದೇ ಸರ್ಕಾರ ನೀರು ಹರಿಸುತ್ತಲೇ ಇತ್ತು. ಆದರೆ ಹೋರಾಟ ವ್ಯಾಪಕಗೊಳ್ಳುತ್ತಿದ್ದಂತೆ ಕಳೆದ ಸೋಮವಾರ ನೀರು ನಿಲ್ಲಿಸುವುದಾಗಿ ಕಾಂಗ್ರೆಸ್ ಶಾಸಕ ರಮೇಶ್ ಬಂಡಿಸಿದ್ದೇಗೌಡ ಸುದ್ದಿಗೋಷ್ಠಿ ನಡೆಸಿ ಹೇಳಿದರಾದರೂ ನೀರು ಗುರುವಾರದವರೆಗೂ ತಮಿಳುನಾಡಿಗೆ ಹರಿದಿದೆ. ಜೊತೆಗೆ ತಮಿಳುನಾಡು ಸಹ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮೇಲೆ ಒತ್ತಡ ಹಾಕಿತ್ತು. ಕರ್ನಾಟಕ ಸರ್ಕಾರ ಸರಿಯಾಗಿ ಮಳೆ ಆಗದ ಕಾರಣ ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ಪ್ರಾಧಿಕಾರದ ಮುಂದೆ ವಾದಿಸಿತ್ತು. ಪ್ರಾಧಿಕಾರ ಸಂಕಷ್ಟದ ಸೂತ್ರ ಗಮನಿಸಿ ನೀರು ಬಿಡುವ ಬಗ್ಗೆ ನೀವೇ ತೀರ್ಮಾನಿಸುವಂತೆ ಹೇಳಿತ್ತಾದರೂ ರಾಜ್ಯ ಸರ್ಕಾರ ನೀರು ಬಿಡುಗಡೆ ಮಾಡಿತ್ತು. ಇದು ಹೋರಾಟಗಾರರ ಕಣ್ಣು ಕೆಂಪಾಗುವಂತೆ ಮಾಡಿತ್ತು.

ಏಕೆಂದರೆ ಈಗಾಗಲೇ ಮುಂಗಾರು ಕೈಕೊಟ್ಟ ಕಾರಣ ರಾಜ್ಯದಲ್ಲಿ ಒಂದು ಬೆಳೆ ಬೆಳೆಯುವುದೇ ದುಸ್ತರವಾಗಿದೆ. ಆದರೆ ತಮಿಳುನಾಡಿಗೆ ಎರಡನೇ ಬೆಳೆ ಬೆಳೆಯಲು ನೀರು ಹರಿಸಲಾಗುತ್ತಿದೆ ಎಂದು ಅಸಮಾಧಾನ ಹೊರ ಹಾಕಲಾಗಿತ್ತು. ಜೊತೆಗೆ ರಾಜ್ಯ ಸರ್ಕಾರ, ಮುಂಗಾರು ಕೈಕೊಟ್ಟಾಗ ಸಂಕಷ್ಟ ●9ನೇ ಪುಟಕ್ಕೆ


ಮೈಸೂರಲ್ಲಿ 'ಸ್ವದೇಶಿ' ಕೇಂದ್ರ

●ಕೇಂದ್ರ ಸರ್ಕಾರದ ಸಹಯೋಗದಲ್ಲಿ ಈ ಮಾಲ್ ಸ್ಥಾಪನೆಗೆ 193 ಕೋಟಿ ಬಡ್ಡಿ ರಹಿತ ಸಾಲ ●ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ್ ಮಾಹಿತಿ

ಬೆಂಗಳೂರು, ಆ.24(ಕೆಎಂಶಿ)– ಸ್ವದೇಶಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ಬೃಹತ್ ಕೇಂದ್ರವನ್ನು ಮೈಸೂರು ನಗರದಲ್ಲಿ ಪ್ರಾರಂಭಿಸುವುದಾಗಿ ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ್ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲೂ ಯೂನಿಟ್ ಮಾಲ್ ಸ್ಥಾಪನೆಗೆ ಪ್ರತಿ ರಾಜ್ಯಕ್ಕೆ 193 ಕೋಟಿ ರೂ. ಬಡ್ಡಿ ರಹಿತ ಸಾಲ ನೀಡಲಿದೆ ಎಂದರು.

ಎರಡರಿಂದ 10 ಎಕರೆ ವಿಸ್ತೀರ್ಣದಲ್ಲಿ ಈ ಮಾಲ್ ಸ್ಥಾಪಿಸಬೇಕಿದೆ. ಇದಕ್ಕಾಗಿ ಬೆಂಗಳೂರು ಇಲ್ಲವೇ ಮೈಸೂರಿನಲ್ಲಿ ಸ್ಥಾಪಿಸಬೇಕು ಎಂದು ತೀರ್ಮಾನಿಸಿದ್ದೆವು. ರಾಜಧಾನಿಯಲ್ಲಿ ಸ್ಥಳದ ಅಭಾವವಿದೆ. ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಅರಮನೆ ನಗರಿಯಲ್ಲೇ ಪ್ರಾರಂಭಿಸುತ್ತೇವೆ ಎಂದು ಹೇಳಿದರು. ಎಲ್ಲಾ ರಾಜ್ಯಗಳಲ್ಲಿ ಉತ್ಪಾದನೆಯಾಗುವ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ಕೇಂದ್ರ ಇದಾಗಲಿದೆ.



ಪ್ರತಿ ರಾಜ್ಯಕ್ಕೂ ಪ್ರತ್ಯೇಕ ಮಳಿಗೆ ನೀಡಲಾಗುವುದು. ಎಲ್ಲಾ ರಾಜ್ಯಗಳಿಗೂ ಹಂಚಿಕೆಯಾಗಿ ಉಳಿಯುವ ಮಳಿಗೆಗಳಲ್ಲಿ ಕರ್ನಾಟಕದ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಮಾಡಿಕೊಡಲಾಗುವುದು. ಈ ಮಾಲ್‌ಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರವಲ್ಲದೆ, ಉದ್ದಿಮೆದಾರರಿಗೆ ಮಾಹಿತಿ ನೀಡುವ ಕೇಂದ್ರವಾಗಲಿದೆ ಎಂದು ವಿಶ್ಲೇಷಿಸಿದರು. ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಉದ್ದಿಮೆದಾರರಿಗೆ ನೀಡಿರುವ ಕೈಗಾರಿಕಾ ಪ್ರದೇಶದ ಶೆಡ್‌ಗಳು ಮತ್ತು ನಿವೇಶನಗಳು ಶೇ.50ರಷ್ಟು ಬಳಕೆಯಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದೆಲ್ಲದಕ್ಕೂ ಮಿಗಿಲಾಗಿ ಸಣ್ಣ ಕೈಗಾರಿಕಾ ಪ್ರದೇಶ ನಿರ್ಮಾಣದ ಉದ್ದೇಶದಿಂದ ಮಾಡಿಕೊಂಡಿರುವ ಭೂಸ್ವಾಧೀನವಾದ ಸಾವಿರಾರು ಎಕರೆ ಭೂಮಿ ಅತಿಕ್ರಮಣ ●6ನೇ ಪುಟಕ್ಕೆ

'ಚಾರ್ಲಿ 777'ಗೆ ರಾಷ್ಟ್ರೀಯ ಪ್ರಶಸ್ತಿ



ರಕ್ಷಿತ್ ಶೆಟ್ಟಿಯ 'ಚಾರ್ಲಿ 777'

'ಪುಷ್ಪ'ದ ಅಲ್ಲು ಅರ್ಜುನ್ ಅತ್ಯುತ್ತಮ ನಟ; 'ಮಿಮಿ'ಯ ಕೃತಿ ಸನೋನ್, ಗಂಗೂಬಾಯಿ ಕಥಿಯವಾಡಿಯಾದ ಆಲಿಯಾ ಭಟ್ ಅತ್ಯುತ್ತಮ ನಟಿಯರು



ಅಲ್ಲು ಅರ್ಜುನ್



ಆಲಿಯಾ ಭಟ್



ಕೃತಿ ಸನೋನ್

ನವದೆಹಲಿ, ಆ.24– 69ನೇ ಪ್ರತಿಷ್ಠಿತ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರ ಇಂದು ಪ್ರಕಟಿಸಿದೆ. ಕನ್ನಡ ಚಿತ್ರರಂಗದ ರಕ್ಷಿತ್ ಶೆಟ್ಟಿ ಅವರ 'ಚಾರ್ಲಿ 777' ಸಿನಿಮಾ ಉತ್ತಮ ಕನ್ನಡ ಸಿನಿಮಾ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. 'ಆರ್‌ಆರ್‌ಆರ್' ಸಿನಿಮಾಗೆ ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿ, ನೃತ್ಯ ನಿರ್ದೇಶನ ಪ್ರಶಸ್ತಿಗಳ ಗೌರವ ದೊರಕಿದೆ.

'ಉಪ್ಪೇನಾ' ಸಿನಿಮಾವನ್ನು ಅತ್ಯುತ್ತಮ ತೆಲುಗು ಚಲನಚಿತ್ರವಾಗಿ ಘೋಷಿಸಲಾಗಿದೆ. 'ಹೋಮ್' ಅತ್ಯುತ್ತಮ ಮಲಯಾಳಂ ಚಿತ್ರ. 'ಸರ್ದಾರ್ ಉಧಮ್' ಅತ್ಯುತ್ತಮ ಹಿಂದಿ ಚಿತ್ರವಾಗಿ ಆಯ್ಕೆಯಾಗಿದೆ. 'ಚೆಲ್ಲೋ ಶೋ' ಅತ್ಯುತ್ತಮ ಗುಜರಾತಿ ಚಿತ್ರ ಪ್ರಶಸ್ತಿ ಪಡೆಯಲಿದೆ ಎಂದು ನಿರ್ದೇಶಕ ಕೇತನ್ ಮೆಹ್ತಾ ಘೋಷಿಸಿದರು. 'ಗಂಗೂಬಾಯಿ ಕಥಿಯಾವಾಡಿ' ಮತ್ತು 'ಮಿಮಿ' ಚಿತ್ರಕ್ಕಾಗಿ ಬಾಲಿವುಡ್‌ನ ಆಲಿಯಾ ಭಟ್ ಮತ್ತು ಕೃತಿ ಸನೋನ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ದೊರೆತಿದೆ. 'ಪುಷ್ಪ ದಿ ರೈಸ್' ಚಿತ್ರಕ್ಕಾಗಿ ಅಲ್ಲು ಅರ್ಜುನ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಲಭಿಸಿದೆ.

ಅತ್ಯುತ್ತಮ ಸಿನಿಮಾ ಪ್ರಶಸ್ತಿಗಳು: ಸರ್ದಾರ್ ಉಧಮ್ – ಅತ್ಯುತ್ತಮ ಹಿಂದಿ ಚಿತ್ರ, ಚೆಲ್ಲೋ ಶೋ – ಅತ್ಯುತ್ತಮ ಗುಜರಾತಿ ಚಿತ್ರ 777 ಚಾರ್ಲಿ – ಅತ್ಯುತ್ತಮ ಕನ್ನಡ ಚಿತ್ರ ಆರ್‌ಆರ್‌ಆರ್ – ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿ, ಆರ್‌ಆರ್‌ಆರ್ – ಅತ್ಯುತ್ತಮ ನೃತ್ಯ ನಿರ್ದೇಶನ, ರಾಕೆಟ್ರಿ ದಿ ನಂಬಿ ಎಫೆಕ್ಟ್ – ಅತ್ಯುತ್ತಮ ಚಲನಚಿತ್ರ, ಶೆರ್ಷಾ – ಸ್ಪೆಶಲ್ ಜ್ಯೂರಿ ಅವಾರ್ಡ್, ದಿ ಕಾಶ್ಮೀರ್ ಫೈಲ್ಸ್ – ನರ್ಗೀಸ್ ದತ್ ಪ್ರಶಸ್ತಿ.

ಅತ್ಯುತ್ತಮ ನಟ, ನಟಿ ಪ್ರಶಸ್ತಿಗಳು: ಕೃತಿ ಸನೋನ್ – ಮಿಮಿ ಸಿನಿಮಾ, ಆಲಿಯಾ ಭಟ್ – ಗಂಗೂಬಾಯಿ ಕಥಿಯಾವಾಡಿ, ಅಲ್ಲು ಅರ್ಜುನ್ – ಪುಷ್ಪ: ದಿ ರೈಸ್.

ಅತ್ಯುತ್ತಮ ಸಂಗೀತ ಪ್ರಶಸ್ತಿ: ಶ್ರೇಯಾ ಘೋಷಾಲ್ –ಅತ್ಯುತ್ತಮ ಮಹಿಳಾ ಹಿನ್ನೆಲೆ ●6ನೇ ಪುಟಕ್ಕೆ

ಮೈಸೂರಲ್ಲಿ ಆ.30ರಂದು 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ

ಬಟನ್ ಒತ್ತಿದ ಕೂಡಲೇ ಫಲಾನುಭವಿಗಳ ಕೈ ಸೇರಲಿದೆ ಹಣ

●ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಾತರಿ ●ಸರ್ವರ್ ಸಮಸ್ಯೆಯಿಂದ ತಡವಾದರೂ ಹಣ ಬರುವುದು ಗ್ಯಾರಂಟಿ ●ಕರ್ನಾಟಕದ ಎಲ್ಲಾ ಕಡೆ ಏಕಕಾಲಕ್ಕೆ ಕಾರ್ಯಕ್ರಮ ಆರಂಭ ●140 ಅಡಿ ಉದ್ದದ ಡಿಜಿಟಲ್ ಸ್ಕ್ರೀನ್ ಅಳವಡಿಕೆ ●ಸಮಾರಂಭದ ಹಿಂದಿನ ದಿನ ಟ್ರಯಲ್ ರನ್

ಮೈಸೂರು, ಆ.24(ಬಿಎಲ್‌ಯು)– ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿ ಮಾಡಿಸಿಕೊಂಡಿರುವ ಪ್ರತಿಯೊಬ್ಬ ಫಲಾನುಭವಿಯ ಬ್ಯಾಂಕ್ ಖಾತೆಗಳಿಗೆ ಸಂದಾಯವಾಗಬೇಕಿರುವ ಹಣವನ್ನು ಈಗಾಗಲೇ ಸರ್ಕಾರ ಬ್ಯಾಂಕ್‌ಗಳಿಗೆ ಜಮಾ ಮಾಡಿದ್ದು, ಗೃಹಲಕ್ಷ್ಮಿ ಯೋಜನೆಗೆ ಆಗಸ್ಟ್ 30 ರಂದು ಅಧಿಕೃತ ಚಾಲನೆ ದೊರೆಯುತ್ತಿದ್ದಂತೆ ಫಲಾನುಭವಿಗಳ ಖಾತೆಗೆ ಸಂದಾಯವಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಗೆ ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ನೋಂದಣಿ ಮಾಡಿಸಿಕೊಂಡಿರುವ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಎರಡು ಸಾವಿರ ರೂಪಾಯಿ ದೊರೆಯಲಿದೆ. ಈ ಬಗ್ಗೆ ಅನುಮಾನ ಬೇಡ ಎಂದು ಅಭಯ ನೀಡಿದರು. ಆಗಸ್ಟ್ 30 ರಂದು ಮೈಸೂರಿನಲ್ಲಿ ನಡೆಯುವ ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಒಂದು ಬಟನ್ ಒತ್ತಿದ ●9ನೇ ಪುಟಕ್ಕೆ



ವನಿತೆಯರಿಂದ "ನಾನು ಗೃಹಲಕ್ಷ್ಮಿ" ರಂಗೋಲಿ ಸಂಭ್ರಮ

ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಆಗಸ್ಟ್ 30ರಂದು ಕರ್ನಾಟಕದ ಪ್ರತಿ ಮನೆಯ ಮುಂದೆ "ನಾನು ಗೃಹಲಕ್ಷ್ಮಿ" ಎಂದು ರಂಗೋಲಿ ಬಿಡಿಸಿ ವನಿತೆಯರು ಸಂಭ್ರಮಿಸಲಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಗ್ರಾಮ ಪಂಚಾಯಿತಿ, ನಗರ ಪಾಲಿಕೆ ಹಾಗೂ ನಗರಸಭೆಗಳ ವಾರ್ಡ್‌ಗಳಲ್ಲಿ ನೋಡಲ್ ಆಫೀಸರ್‌ಗಳನ್ನು ನಿಯೋಜಿಸಲಾಗಿದೆ. ಅವರು ಗೃಹಲಕ್ಷ್ಮಿ ಯೋಜನೆಯ ಪ್ರತಿಯೊಬ್ಬ ಫಲಾನುಭವಿಗಳ ಮನೆಗೆ ಹೋಗಿ ಸಮಾರಂಭಕ್ಕೆ ಆಗಮಿಸುವಂತೆ ಆಮಂತ್ರಣ ನೀಡಲಿದ್ದಾರೆ ಎಂದರು.

ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ 140 ಅಡಿ ಉದ್ದದ ಡಿಜಿಟಲ್ ಸ್ಕ್ರೀನ್ ಅಳವಡಿಸಲಾಗಿದೆ. ಕರ್ನಾಟಕದ ಎಲ್ಲಾ ಕಡೆ ಏಕಕಾಲಕ್ಕೆ ಆರಂಭವಾಗುವ ಎಲ್ಲಾ ಕಾರ್ಯಕ್ರಮಗಳ 10 ಸಾವಿರ ಲಿಂಕ್‌ಗಳನ್ನು ಒಂದಾದ ಮೇಲೆ ಒಂದರಂತೆ ಪ್ರದರ್ಶಿಸಲಾಗುವುದು. ಒಟ್ಟಾರೆ ಫಲಾನುಭವಿಗಳ ಸಹಭಾಗಿತ್ವ ಹಾಗೂ ಉಪಸ್ಥಿತಿಯಲ್ಲಿ ಈ ಯೋಜನೆಯ ಉದ್ಘಾಟನಾ ಸಮಾರಂಭವನ್ನು ವ್ಯವಸ್ಥಿತವಾಗಿ ನೆರವೇರಿಸಲಾಗುವುದು ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ನ್ಯಾಯಾಲಯದ ಆದೇಶ ಗೌರವಿಸಿ ತಮಿಳುನಾಡಿಗೆ ಕಾವೇರಿ ನೀರು

ನ್ಯಾಯಾಲಯದ ಆದೇಶಗಳನ್ನು ಗೌರವಿಸುವ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನೀರು ಬಿಟ್ಟ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು. ಕರ್ನಾಟಕದಲ್ಲಿ ವಾಡಿಕೆಯಷ್ಟು ಮಳೆಯಾಗದ ಕಾರಣ ನಮ್ಮ ಜಲಾಶಯಗಳಲ್ಲಿ ಶೇಕಡ 40 ರಷ್ಟು ನೀರಿನ ಕೊರತೆ ಇದೆ. ಆದರೆ ನ್ಯಾಯಾಲಯದ ಆದೇಶ ಪಾಲಿಸಬೇಕಾದ ಕಾರಣ ನೀರು ಬಿಡಲಾಗಿದೆ. ಕರ್ನಾಟಕದ ರೈತರ ಹಿತ ಕಾಪಾಡುವುದನ್ನು ಗಮನದಲ್ಲಿಟ್ಟುಕೊಂಡು ನೀರು ಬಿಡುಗಡೆ ಮಾಡಲಾಗಿದೆ ಎಂದರು. ಕಾವೇರಿ ನೀರು ವಿವಾದ ಸಂಬಂಧ ನ್ಯಾಯಾಲಯಕ್ಕೆ ರಾಜ್ಯದಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ ಎಂದರು. ನೀವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಅಲ್ಲಿ ವಿವಾದ ಇತ್ಯರ್ಥವಾಗುವ ತನಕ ನೀರು ಬಿಡುಗಡೆ ಮಾಡುತ್ತಲೇ ಇರುತ್ತೀರಾ, ಅಲ್ಲಿವರೆಗೆ ಜಲಾಶಯದಲ್ಲಿ ನೀರು ಖಾಲಿ ಆಗುವುದಿಲ್ಲವೇ ಎಂಬ ಪ್ರಶ್ನೆಗೆ ಡಿ.ಕೆ.ಶಿವಕುಮಾರ್ ಹಾರಿಕೆಯ ಉತ್ತರ ನೀಡಿದರು.

> "ಕಾಂಗ್ರೆಸ್ ಪಕ್ಷ ಆಪರೇಷನ್ ಹಸ್ತ ಮಾಡುತ್ತಿಲ್ಲ. ಆದರೆ ತಮ್ಮ ರಾಜಕೀಯ ಭವಿಷ್ಯದ ನೆಲೆ ಕಂಡುಕೊಳ್ಳಲು ಬೇರೆ ಪಕ್ಷದವರು ನಮ್ಮ ಪಕ್ಷ ಸೇರುತ್ತಿದ್ದಾರೆ. ಬೇರೆ ಪಕ್ಷದವರನ್ನು ನಾವು ಕರೆ ತರುವ ಪ್ರಯತ್ನ ಮಾಡುತ್ತಿಲ್ಲ. ಆದರೆ ಅವರು ನಮ್ಮ ಪಕ್ಷದ ವರ್ಚಸ್ಸು ಗಮನಿಸಿ, ತಮ್ಮ ರಾಜಕೀಯ ಭವಿಷ್ಯ ಅರಸಿ ಕಾಂಗ್ರೆಸ್ ಸೇರುತ್ತಿದ್ದಾರೆ. ಹೀಗೆ ನಮ್ಮ ಪಕ್ಷಕ್ಕೆ ಸೇರ್ಪಡೆಗೊಳ್ಳುವವರಿಗೆ ನಾವು ಸ್ವಾಗತ ಕೋರುತ್ತಿದ್ದೇವೆ ಅಷ್ಟೆ. ಎಷ್ಟು ಜನರು ಬರುತ್ತಾರೆ ಎಂಬುದನ್ನು ಈಗಲೇ ಕರಾರುವಕ್ಕಾಗಿ ಹೇಳಲು ಸಾಧ್ಯವಿಲ್ಲ. ಎಲ್ಲದ್ದಕ್ಕೂ ಕಾಲ, ಸಮಯ ಎಂಬುದು ಇರುತ್ತದೆಯಲ್ಲ. ಜೆಡಿಎಸ್ ಶಾಸಕರನ್ನು ಕಾಂಗ್ರೆಸ್‌ಗೆ ಸೆಳೆಯುವ ಪ್ರಯತ್ನ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ, ಈ ವಿಚಾರವಾಗಿ ಹೇಳುತ್ತಾ ಹೋದರೆ ಅದು ಬಹಳ ದೊಡ್ಡದಾಗುತ್ತದೆ. ಈಗ ಅದರ ಬಗ್ಗೆ ಚರ್ಚೆ ಬೇಡ.
>
> –ಡಿ.ಕೆ.ಶಿವಕುಮಾರ್, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ

ನಕ್ಕರೆ ಅದೇ ಸ್ವರ್ಗ

ರೋಗಿ : ನನ್ನ ದೇಹದ ಶಾಖ ಜಾಸ್ತಿ ಇದೆಯೇ ಸಾರ್?
ಡಾಕ್ಟರ್ : ಹೌದು, ನೂರಾ ಒಂದು ಡಿಗ್ರಿ ಇದೆ
ರೋಗಿ : ವಿಶ್ವದಾಖಲೆ ಸ್ಥಾಪಿಸಬೇಕೆಂದಿದ್ದೇನೆ.
ಈವರೆಗಿನ ದಾಖಲೆಯ ಶಾಖ ಎಷ್ಟು ಡಾಕ್ಟರ್?!


ಮೈಸೂರು ಮಿತ್ರ
ಶುಕ್ರವಾರ, 25 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........
ದುರುದ್ದೇಶದಿಂದ ನುಡಿದ ಸತ್ಯವೂ ಯಾವುದೇ ಸುಳ್ಳು ಹೇಳಿಕೆಗಿಂತ ಹೆಚ್ಚು ಅಪಾಯಕಾರಿ. –ಪದ್ಮಪ್ರಿಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗುಡ್ಡಕ್ಕೆ ಕಲ್ಲು ಹೊತ್ತಂಗೆ, ಸಮುದ್ರಕ್ಕೆ ನೀರು ಹೊತ್ತಂಗೆ

ನಿಮ್ಮ ಪತ್ರಗಳು

'ಉದಯರವಿ' ಹೆಸರಲ್ಲಿ ರಾಜಕಾರಣ ಸಲ್ಲ



ಮಾನ್ಯರೆ,
ವಿಶ್ವಮಾನವ ಸಂದೇಶವನ್ನು ಇಡೀ ಜಗತ್ತಿಗೆ ಸಾರಿದ ಕುವೆಂಪು ಅವರು ಮೊಟ್ಟಮೊದಲ ಶೂದ್ರಕವಿ. ಸ್ವಾತಂತ್ರ್ಯ ಪೂರ್ವದಲ್ಲೇ 'ಜಲಗಾರ' ನಾಟಕ ಬರೆಯುವ ಮೂಲಕ ದಲಿತ ಸಮುದಾಯದ ಅಸ್ಮಿತೆಯನ್ನು ಎತ್ತಿ ಹಿಡಿದ ಕುವೆಂಪು ಅವರು, ಸಾಕ್ಷಾತ್ ಶಿವನೇ ದೇವಾಲಯದ ಗರ್ಭಗುಡಿಯಿಂದ ನಡುಬೀದಿಯಲ್ಲಿ ಕಸಗುಡಿಸುವ ಜಲಗಾರನನ್ನು ತಬ್ಬಿ "ನೀನು ಊರ ಜಲಗಾರ, ನಾನು ಜಗದ ಜಲಗಾರ" ನೀನು ಈ ಊರಿನ ಕೊಳೆಯನ್ನು ತೆಗೆದರೆ ನಾನು ಜಗದ ಕೊಳೆಯನ್ನು ತೊಳೆಯುತ್ತೇನೆ. ನನಗೂ ನಿನಗೂ ಅಂಥಾ ವ್ಯತ್ಯಾಸವಿಲ್ಲ. ನಾನಲ್ಲ, ನೀನೇ ಸಾಕ್ಷಾತ್ ಶಿವ ಎಂದು ಜಲಗಾರನ ಪ್ರಶಂಸಿಸುತ್ತಾನೆ. ಇಂತಹ ನಾಟಕವನ್ನು ಬರೆದ ಕುವೆಂಪು ನಮ್ಮ ಸಾಂಸ್ಕೃತಿಕ ಮೈಸೂರಿನ ಹೆಮ್ಮೆ. "ಯುಗದ ಕವಿಗೆ ಜಗದ ಕವಿಗೆ ಶ್ರೀ ರಾಮಾಯಣ ದರ್ಶನದಿಂದಲೇ ಕೈಮುಗಿದ ಕವಿಗೆ ಮಣಿಯದವರು ಯಾರು?" ಎಂದು ತನ್ನ ಸಮಕಾಲೀನ ಕವಿ ದ.ರಾ. ಬೇಂದ್ರೆಯವರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ಕವಿ ಮತ್ತೊಬ್ಬರಿಲ್ಲ.

ಈಗ ರಸ್ತೆಯ ವಿಚಾರಕ್ಕೆ ಬರೋಣ. ಮೈಸೂರಿನ ಅನಾದಿ ಕಾಲದಿಂದಲೂ 'ಉದಯರವಿ' ರಸ್ತೆಯೆಂದೇ ನಾಮಕರಣ ಮಾಡಿ, ಜನಮಾನಸದಲ್ಲಿ ಅದು ಬೇರುಬಿಟ್ಟು ನೆಲೆಯೂರಿದೆ. ಕುವೆಂಪು ಅವರು ಉದಯರವಿ ಎಂದರೆ ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಎಂದು. ಇವುಗಳ ಒಟ್ಟು ಮೊತ್ತವೇ ಉದಯರವಿ. ಉದಯರವಿ ಅಂದರೆ ಸರ್ವರ ಉದ್ಧಾರ. "ಉದಯರವಿ" ಎಂಬುದು ಕುವೆಂಪು ಅವರ ಒಂದು ಪದ್ಯದ ಹೆಸರು ಮತ್ತು ಅವರ ಅಧಿಕೃತ ನಿವಾಸದ ಹೆಸರು. "ಉದಯರವಿ" ಪ್ರಕಾಶನದ ಮೂಲಕ ಕುವೆಂಪು ಅವರ ಎಲ್ಲಾ ಕೃತಿಗಳು ಹೊರಬಂದಿವೆ.

ಇಂತಹ ವಿಶ್ವಮಾನವರಾದ ರಾಷ್ಟ್ರಕವಿ ಕುವೆಂಪು ಅವರನ್ನು ಮತ್ತೊಬ್ಬ ಶ್ರೇಷ್ಠ ನಾಯಕನ ವಿರುದ್ಧ ಎತ್ತಿಕಟ್ಟಿ ನಿಲ್ಲಿಸುವುದು ಎರಡು ಮಹಾನ್ ಪ್ರತಿಭೆ ಮತ್ತು ವ್ಯಕ್ತಿತ್ವ, ಘನತೆಗಳಿಗೆ ಸಾಂಸ್ಕೃತಿಕ ನಗರದ ನಾಗರಿಕರಾದ ನಾವು ಮಾಡುವ ಅವಮಾನವಲ್ಲದೇ ಬೇರೇನೂ ಇಲ್ಲ. ಕುವೆಂಪು ಅವರು ಹುಟ್ಟಿದ್ದು ಮಲೆನಾಡು. ಆದರೂ ಅವರು ಕರ್ಮಭೂಮಿ ಮೈಸೂರು. ಇಂತಹ ಸ್ಥಳೀಯ ಪ್ರತಿಭೆಯ ಘನತೆಗೆ ಕುಂದು ತರುವ ಕೆಲಸವನ್ನು ಯಾರೂ ಕನಸು ಮನಸ್ಸಿನಲ್ಲೂ ಎಣಿಸಬಾರದು. ಕುವೆಂಪು ಮತ್ತು ಉದಯರವಿ ಕುರಿತು ಏನೇ ಗೊಂದಲ, ಅನುಮಾನಗಳಿದ್ದರೂ ಅದನ್ನು ಬಗೆಹರಿಸಲು ಮೈಸೂರಿನಲ್ಲಿ ವಿದ್ವಾಂಸರ ದೊಡ್ಡಪಡೆಯೇ ಇದೆ. ವಿಶ್ವಮಾನವರಾದ ಕುವೆಂಪು ಅವರನ್ನು ರಾಜಕೀಯ ಕಾರಣಗಳಿಗೋಸ್ಕರ ಅಲ್ಪಮಾನವನ ಮಟ್ಟಕ್ಕೆ ಯಾರೂ ಇಳಿಸಬಾರದು. ಈ ವಿಷಯದಲ್ಲಿ ಮಹಾನಗರ ಪಾಲಿಕೆಯ ಸರ್ವಸದಸ್ಯರು ಪಕ್ಷಭೇದ ಮತ್ತು ಜಾತಿ–ಧರ್ಮ ಭೇದ ತೊರೆದು ಚಿಂತಿಸಿ, ಮಾತನಾಡಬೇಕು. ಗೊಂದಲ ಸೃಷ್ಟಿಸಬಾರದು.

ಅಂಬೇಡ್ಕರ್ ಇಡೀ ಜಗತ್ತಿನ ಜ್ಞಾನದ ಸಂಕೇತ. ವಿಶ್ವಸಂಸ್ಥೆಯೇ ಅವರ ಜನ್ಮದಿನವನ್ನು 'ವಿಶ್ವಜ್ಞಾನ' ದಿನವನ್ನಾಗಿ ಆಚರಿಸುತ್ತಿದೆ. ಅಂತಹ ಮಹಾನ್ ನಾಯಕನ ತಂದೆ ರಾಮ್‌ಜಿ ಸಕ್ಪಾಲ್ ಅವರು ಇಡೀ ವಿಶ್ವಕ್ಕೆ ಒಬ್ಬ ಹೆಮ್ಮೆ ಪಡುವ ತಂದೆಯಾಗಿದ್ದಾರೆ. ಅವರ ವ್ಯಕ್ತಿತ್ವ ಮತ್ತು ಘನತೆಯನ್ನು ಈ ಕ್ಷುಲ್ಲಕ ರಾಜಕೀಯ ಕಾರಣಕ್ಕಾಗಿ ಎಳೆದಾಡುವುದು ಸಾಂಸ್ಕೃತಿಕ ನಗರಿಗರಾದ ನಮಗೆ ಖಂಡಿತಾ ಶೋಭೆ ತರುವುದಿಲ್ಲ.

ಇಂದು ಮೈಸೂರು ವಿಸ್ತಾರವಾಗಿ ಬೆಳೆಯುತ್ತಿದೆ. ಹೀಗೆ ಬೆಳೆಯುತ್ತಿರುವ ನಗರದ ಹೊಸ ಬಡಾವಣೆ ಅಥವಾ ಮುಖ್ಯರಸ್ತೆಗೆ ಬೇಕಾದರೆ ಅವರ ಹೆಸರನ್ನು ಇಡೋಣ. ಇಲ್ಲವೇ ಮೈಸೂರಿನ ಡಿ.ದೇವರಾಜ ಅರಸು ರಸ್ತೆಯ ಹಿಂಭಾಗದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನದ ಆಸುಪಾಸು ರಸ್ತೆಗಳಿಗೆ ಬೇಕಾದರೆ ಇಡಬಹುದು. ಅಥವಾ ಉದಯರವಿ ರಸ್ತೆಯ ಇಸ್ಕಾನ್ ದೇವಸ್ಥಾನದಿಂದ ಎನ್‌ಐಇ ಕಾಲೇಜುವರೆಗೆ ರಾಮ್‌ಜಿ ಸಕ್ಪಾಲ್ ಅವರ ಹೆಸರಿಡಬಹುದು ಎನ್ನುವುದು ನನ್ನ ಅಭಿಪ್ರಾಯ.
–ಕೆ.ವಿ. ಮಲ್ಲೇಶ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ, ಮೈಸೂರು. ತಾ. 24.8.2023

ಇತಿಹಾಸ ಸೃಷ್ಟಿಸಿದ ಇಸ್ರೋ ವಿಜ್ಞಾನಿಗಳು

ಮಾನ್ಯರೆ,
ಭಾರತದ ಪಾಲಿಗೆ ಆಗಸ್ಟ್ 23 ಅವಿಸ್ಮರಣೀಯ ಐತಿಹಾಸಿಕ ಸಾಧನೆಯ ದಿನವಾಗಿದೆ. ಈ ದಿನವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನವಾಗಿದೆ. ಇಡೀ ಭಾರತವೇ ಸಂಭ್ರಮಿಸಿ ಆನಂದಿಸಿದ ಸುವರ್ಣ ದಿನ. ವಿಶ್ವವೇ ಭಾರತದತ್ತ ತಿರುಗಿ ನೋಡುವಂತೆ ಭಾರತದ ತಾಕತ್ತು ಏನೆಂಬುದನ್ನು ನಮ್ಮ ಹೆಮ್ಮೆಯ ಇಸ್ರೋದ ವಿಜ್ಞಾನಿಗಳು ಚಂದ್ರಯಾನ–3 ಯೋಜನೆಯನ್ನು ಯಶಸ್ವಿಗೊಳಿಸಿ, ಚಂದ್ರನ ದಕ್ಷಿಣ ಧ್ರುವಕ್ಕೆ ನೌಕೆಯನ್ನು ಇಳಿಸಿದ ಮೊಟ್ಟಮೊದಲ ದೇಶ ಹಾಗೂ ಚಂದ್ರನ ಮೇಲೆ ಅನ್ವೇಷಣೆಗಾಗಿ ಪ್ರಪಂಚದ ನಾಲ್ಕನೆಯ ದೇಶ ಎಂಬ ಹೆಗ್ಗಳಿಕೆ ಭಾರತಕ್ಕೆ ಸಲ್ಲುತ್ತದೆ. ಅಂತೂ ಭಾರತದ 140 ಕೋಟಿಯ ಜನರ ಪ್ರಾರ್ಥನೆ ಫಲಿಸಿದೆ. ಇಸ್ರೋದ ನಮ್ಮ ಹೆಮ್ಮೆಯ ವಿಜ್ಞಾನಿಗಳು ಹಗಲು ಇರುಳು ಎನ್ನದೆ ಅವಿರತವಾಗಿ ಶ್ರಮವಹಿಸಿ, ಭಾರತದ ಕೀರ್ತಿ ಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸಿದ್ದಾರೆ. ಈ ಯೋಜನೆಗೆ ಅನೇಕ ಟೀಕೆಗಳು, ಅವಮಾನಗಳು ವ್ಯಕ್ತವಾದರೂ, ಅವುಗಳನ್ನು ತಾಳ್ಮೆಯಿಂದ ಸ್ವೀಕರಿಸಿ, ಅವುಗಳನ್ನು ಲೆಕ್ಕಿಸದೇ, ಧೃತಿಗೆಡದೆ, ಎದೆಗುಂದದೆ ತಮ್ಮ ಸಾಧನೆಯ ಸಾಮರ್ಥ್ಯವನ್ನು ಟೀಕೆ, ಅವಮಾನ ಮಾಡುವವರಿಗೆ ದಿಟ್ಟ ಉತ್ತರವನ್ನು ಚಂದ್ರನಲ್ಲಿ ಸಾಫ್ಟ್ ಲ್ಯಾಂಡಿಂಗ್ ಮಾಡುವುದರ ಮೂಲಕ ತಮ್ಮ ಸಾಧನೆಯನ್ನು ಪ್ರದರ್ಶಿಸಿದ್ದಾರೆ. ಚಂದ್ರನ ದಕ್ಷಿಣ ಧ್ರುವ ವಾತಾವರಣವು ತುಂಬಾ ಕ್ಲಿಷ್ಟಕರವಾಗಿದ್ದರೂ ಅದನ್ನು ಸವಾಲಾಗಿ ಸ್ವೀಕರಿಸಿ, ಪ್ರಪಂಚದ ಯಾವುದೇ ದೇಶ ಮಾಡದ ಸಾಧನೆಯನ್ನು ನಮ್ಮ ಭಾರತ ದೇಶದ ಹೆಮ್ಮೆಯ ವಿಜ್ಞಾನಿಗಳು ಕಡಿಮೆ ವೆಚ್ಚದಲ್ಲಿ ಸಾಧಿಸಿ ತೋರಿಸಿದ್ದಾರೆ. ಚಂದ್ರನ ಅನ್ವೇಷಣೆಗೆ ಹೊಸ ಭಾಷ್ಯವನ್ನೇ ಬರೆದ ಅಭೂತಪೂರ್ವ ಸಾಧನೆ ಮಾಡಿದ ಇಸ್ರೋ ವಿಜ್ಞಾನಿಗಳಿಗೆ ಶತಕೋಟಿ ನಮನಗಳು.
–ಪರಶಿವಮೂರ್ತಿ ಎನ್.ಪಿ, ಸರಗೂರು ತಾ.

ಇಸ್ರೋ ವಿಜ್ಞಾನಿಗಳು ಅಭಿನಂದನಾರ್ಹರು

ಮಾನ್ಯರೆ,
ಭಾರತೀಯರ ಪಾಲಿಗೆ ಬುಧವಾರ (ಆಗಸ್ಟ್ 23) ಐತಿಹಾಸಿಕ ದಿನ. ಇಡೀ ಪ್ರಪಂಚವೇ ನಿಬ್ಬೆರಗಾಗುವಂತೆ ನಮ್ಮ ಇಸ್ರೋ ವಿಜ್ಞಾನಿಗಳ ಸಾಧನೆ ಚರಿತ್ರೆಯ ಪುಟಗಳಲ್ಲಿ ದಾಖಲೆಯಾಗಿದೆ. ಸಂಜೆ 6.04ರ ಸಮಯಕ್ಕೆ ಸರಿಯಾಗಿ ಚಂದ್ರಯಾನ–3 ರ ಯಶಸ್ವಿ ಉಡಾವಣೆಯ ವಿಕ್ರಮ್ ಚಂದ್ರನ ದಕ್ಷಿಣ ಧ್ರುವದಲ್ಲಿ ಸುರಕ್ಷಿತವಾಗಿ ಇಳಿದಿರುವುದು ಇಸ್ರೋ ವಿಜ್ಞಾನಿಗಳ ಮುಕುಟಕ್ಕೆ ಮತ್ತೊಂದು ಗರಿ. ಈ ಸಾಧನೆಯಿಂದ ಭಾರತ ಬಾಹ್ಯಾಕಾಶ ವಿಜ್ಞಾನದಲ್ಲಿ ತಾನು ಎಂತಹ ಬಲಿಷ್ಠ ರಾಷ್ಟ್ರ ಎಂಬುದನ್ನು ಇಡೀ ಪ್ರಪಂಚಕ್ಕೇ ತೋರಿಸಿ ಕೊಟ್ಟಂತಾಗಿದೆ.

ರಷ್ಯಾ ಮತ್ತು ಅಮೆರಿಕ ವಿಜ್ಞಾನ ಕ್ಷೇತ್ರದಲ್ಲಿ ತಮಗೆ ಸರಿಸಾಟಿ ಯಾರು ಎನ್ನುತ್ತಿದ್ದ ರಾಷ್ಟ್ರಗಳಿಗೆ ಈಗ ಭಾರತ ತಕ್ಕ ಪಾಠ ಕಲಿಸಿದೆ. ಮುಂದೊಂದು ದಿನ ಇತರ ರಾಷ್ಟ್ರಗಳು ಸಹ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರಕ್ಕೆ ಭಾರತವನ್ನೇ ಅವಲಂಬಿಸಬೇಕಾಗಿ ಬರಬಹುದು. ಈ ಮಹತ್ತರ ಸಾಧನೆಗೆ ಇಸ್ರೋ ವಿಜ್ಞಾನಿಗಳು ಅಭಿನಂದನಾರ್ಹರು. ಇದು ಸತತ ಎರಡು ವರ್ಷಗಳ ಶ್ರಮಕ್ಕೆ ದೊರೆತ ಯಶಸ್ಸು. ಪ್ರತಿ ಭಾರತೀಯ ಪ್ರಜೆಯು ಹೆಮ್ಮೆ ಪಡುವಂತಾಗಿದೆ.
–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಒಲಿಸಿಕೊಳ್ಳಿ ವರಮಹಾಲಕ್ಷ್ಮಿಯ...



ದ್ವಾದಶ ಗ್ರಂಥಿ ಸಂಯುಕ್ತಂ ಕೃತಂ ದ್ವಾದಶತಂತುಭಿಃ ಧಾರಯಾಮಿ ಮಹಾದೇವಿ ಸೂತ್ರಂ ತೇ ಸರ್ವ ಮಂಗಳೇ॥

ಕಲಶದ ಬಾಯಿಗೆ ವೀಳ್ಯದ ಎಲೆ ಅಥವಾ ಮಾವಿನ ಎಲೆಗಳನ್ನು ಇಡಬೇಕು. ಈ ಕಲಶವನ್ನು ಅಕ್ಕಿ ಹರಡಿರುವ ತಟ್ಟೆಯ ಮೇಲಿರಿಸಿ, ದೇವಿಗೆ ರೇಷಿಮೆ ಸೀರೆಯನ್ನು ಉಡಿಸಿ ತಮ್ಮ ಮನೆಯಲ್ಲಿರುವ ವಜ್ರಾಭರಣಗಳಿಂದ ಅಲಂಕರಿಸಬೇಕು. ನಂತರ ಬೆಳ್ಳಿಯ ದೀಪಗಳನ್ನು ಹಚ್ಚಿ ದೇವಿಯನ್ನು ಆವಾಹನೆ ಮಾಡಿ ಭಕ್ತಿಯಿಂದ ಪೂಜಿಸಿದರೆ ಆಕೆಯನ್ನು ತೃಪ್ತಿಗೊಳಿಸಬಹುದೆಂಬ ನಂಬಿಕೆಯೂ ಇದೆ. ಲಕ್ಷ್ಮಿದೇವಿಗೆ ಅರಿಶಿನ ಕುಂಕುಮ ಗೆಜ್ಜೆ ವಸ್ತ್ರ ಏರಿಸಿಯೂ ಪೂಜೆ ಮಾಡಲಾಗುತ್ತದೆ. ಹರಿದ್ರಾ ಕುಂಕುಮ ಶೋಭಿತಳಾದ ಲಕ್ಷ್ಮಿದೇವಿಗೆ ವಿವಿಧ ಬಗೆಯ ಪರಿಮಳದ ಪುಷ್ಪಗಳನ್ನು ಸಮರ್ಪಿಸಲಾಗುತ್ತದೆ. ಮುಡಿಯಲ್ಲಿ ಕಮಲದ ಹೂವು ರಾರಾಜಿಸುತ್ತದೆ. ದೇವಿಗೆ ತೊಡಿಸುವ ಬೆಳ್ಳಿ ಬಂಗಾರಗಳು ಇಲ್ಲಿ ಆಡಂಬರವೆನಿಸುವುದಿಲ್ಲ. ನಮಗೆ ನೀಡಿದ್ದನ್ನು ಆಕೆಗೆ ಸಮರ್ಪಿಸಿ ಧನ್ಯತಾ ಭಾವವನ್ನು ತೋರಿಸುವುದೇ ಅಲ್ಲದೆ ಅದನ್ನೇ ಪ್ರಸಾದವೆಂದು ಸ್ವೀಕರಿಸಿ ಸಂತೃಪ್ತಗೊಳ್ಳುವುದೂ ಈ ಹಬ್ಬದ ವಿಶೇಷ.

ಶ್ರಾವಣ ಮಾಸ ಬಂತೆಂದರೆ ಹಬ್ಬಗಳ ಸಾಲೇ ಸಾಲು. ಹಣ್ಣು, ಹೂವು ದುಬಾರಿ ಎನಿಸಿದರೂ ಬೇಡಿದ ವರಗಳನ್ನು ನೀಡುವ ವರಮಹಾಲಕ್ಷ್ಮಿ ಹಬ್ಬವನ್ನು ಆಚರಿಸುವುದರಲ್ಲಿ ನಮಗಿರುವ ತೃಪ್ತಿ ಬೇರೆ ಯಾವುದರಲ್ಲಿಯೂ ಇಲ್ಲ. ವರಮಹಾಲಕ್ಷ್ಮಿ ಹಬ್ಬ ಸ್ವಾಗತಿಸುವುದೇ ಒಂದು ರೀತಿಯ ಮುದವನ್ನು ನೀಡುತ್ತದೆ. ದೇವಿಗೆ ಸಕಲ ಆದರಾತಿಥ್ಯವನ್ನು ನೀಡಿ, ಸತ್ಕರಿಸಿ ಪೂಜಿಸುವುದೇ ಒಂದು ರೀತಿಯ ಸೊಬಗು. ಸರ್ವಾಲಂಕಾರ ಭೂಷಿತೆಯಾಗಿ ನಾನಾ ಹೂವು, ಒಡವೆಗಳ ಮಧ್ಯೆ ರಾರಾಜಿಸುವ ದೇವಿಗೆ ನಾನಾ ಭಕ್ಷ್ಯಗಳನ್ನು ಅರ್ಪಿಸಿ, ಶುದ್ಧ ಮನಸ್ಸಿನಿಂದ ಸ್ತುತಿಸಿ ಆಕೆಯನ್ನು ಪ್ರಸನ್ನಗೊಳಿಸಿದರೆ ತಾಯಿ ಒಲಿಯುವಳೆಂಬುದು ಅಂದಿನಿಂದಲೂ ನಡೆದು ಬಂದಿರುವ ಒಂದು ಪ್ರತೀತಿ.

ಈ ದಿನದಂದು ವರ–ಲಕ್ಷ್ಮಿ ದೇವಿಯನ್ನು ಪೂಜಿಸುವುದು ಅಷ್ಟಲಕ್ಷ್ಮಿಯನ್ನು ಪೂಜಿಸುವುದಕ್ಕೆ ಸಮಾನ ಎಂದು ನಂಬಲಾಗಿದೆ. ಸಕಲ ಸಂಪತ್ತುಗಳಿಗೂ ಅಧಿಪತಿಯಾದ ಲಕ್ಷ್ಮಿಯನ್ನು ಭಜಿಸಿ ಧನ್ಯರಾಗುವುದೇ ಎಲ್ಲರ ಪರಮ ಉದ್ದೇಶ. ಭಕ್ತರ ಕರೆಗೆ ನೀರಾಗಿ ಕರಗುವ ವಿಶಾಲ ಹೃದಯಿ ಲಕ್ಷ್ಮಿಯನ್ನು ಮನೆಗೆ ತುಂಬಿಸಿಕೊಳ್ಳುವ ಸಡಗರ–ಸಂಭ್ರಮದ ವಾತಾವರಣ ಎಲ್ಲೆಡೆಯೂ ಕಂಡು ಬರುತ್ತದೆ. ಭಕ್ತರ ಕೋರಿಕೆಯನ್ನು ಈಡೇರಿಸುವ ದೇವಿಯನ್ನು ಪೂಜಿಸಿ ಭಜಿಸುವುದೇ ವರಮಹಾಲಕ್ಷ್ಮಿ ವ್ರತದ ಮಹಾತ್ಮೆ.

ಧನಕನಕಾದಿಗಳು ಹೇರಳವಾಗಿದ್ದರೆ ದಾನ, ಧರ್ಮ, ಪರೋಪಕಾರಗಳನ್ನು ಮಾಡಲು ಸಾಧ್ಯ. ಎಲ್ಲ ಕಾರ್ಯಕ್ಕೂ ಧನವೇ ಮೂಲವಾಗಿರುವಾಗ ಬೇಡಿದ್ದನ್ನು ಕರುಣಿಸೋ ವರಮಹಾಲಕ್ಷ್ಮಿಯನ್ನು ಭಕ್ತಿಯಿಂದ ಪ್ರಾರ್ಥಿಸಿ, ಇಷ್ಟಾರ್ಥಗಳನ್ನು ಸಿದ್ಧಿಸಿಕೊಳ್ಳುವುದಕ್ಕೆ ಹೆಂಗಳೆಯರು ಮುಂದಾಗಿರುತ್ತಾರೆ. "ಕಮಲದಾ ಮೊಗದೋಳೆ... ಕಮಲದ ಕಣ್ಣೋಳೆ... ಕಮಲವಾ ಕೈಯಲ್ಲಿ ಹಿಡಿದೋಳೆ" ಎಂದು ದೇವಿಯನ್ನು ಸ್ತುತಿಸಿ ಭಕ್ತಿ ಭಾವದಿಂದ ಪೂಜೆ ಸಲ್ಲಿಸಿ ದೇವಿಯನ್ನು ಪರಿಪರಿಯಾಗಿ ಸ್ತುತಿಸುತ್ತಾ ಧನ್ಯತಾ ಭಾವವನ್ನು ತುಂಬಿಕೊಳ್ಳುವ ಹೆಂಗಳೆಯರಿಗೆ ಅಂದು ಕೈತುಂಬಾ ಕೆಲಸ. ದೇವಿಗೆ ಹಲವಾರು ವಿಧದ ಅಪ್ಲಿಕೇಷನ್‌ಗಳೂ ಅರ್ಪಿತವಾಗುತ್ತವೆ.

ವರಗಳನ್ನು ದಯಪಾಲಿಸುವುದರಿಂದ ಮತ್ತು ಶ್ರೇಷ್ಠಳಾಗಿರುವುದರಿಂದ ಆಕೆಯು ವರಮಹಾಲಕ್ಷ್ಮಿ. ಒಮ್ಮೆ ದುರ್ವಾಸಮಹರ್ಷಿಗಳ ಶಾಪದಿಂದ ಇಂದ್ರನು ರಾಜ್ಯಭ್ರಷ್ಟನಾಗಲು, ಸ್ವರ್ಗಲಕ್ಷ್ಮಿಯೂ ಸಹ ಸ್ವರ್ಗವನ್ನು ಬಿಟ್ಟು ವೈಕುಂಠವನ್ನು ಸೇರಿದಳು. ಆಗ ಪರಮದುಃಖಾ ಕ್ರಾಂತರಾದ ದೇವತೆಗಳೆಲ್ಲರೂ ಚತುರ್ಮುಖಬ್ರಹ್ಮನನ್ನು ಮುಂದಿಟ್ಟುಕೊಂಡು (ಪುರಸ್ಕರಿಸಿ), ವೈಕುಂಠದಲ್ಲಿ ಪರಮಾತ್ಮನನ್ನು ಶರಣು ಹೊಂದಿದರು. ಪರಮದಯಾಳುವಾದ ವಿಷ್ಣುವಿನ ಆಜ್ಞೆಯಂತೆ ದೇವತೆಗಳು ದಾನವರೊಡನೆ ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಮಥಿಸಲು, ಮಹೇಂದ್ರನ ಸಂಪತ್ಸ್ವರೂಪಿಣಿಯಾದ ಮಹಾಲಕ್ಷ್ಮಿಯು ಅಲ್ಲಿ ಆವಿರ್ಭವಿಸಿ, ದೇವತೆಗಳಿಗೆ ವರವನ್ನು ಅನುಗ್ರಹಿಸಿದಳು ಹಾಗೂ ಮಹಾವಿಷ್ಣುವಿನ ವಿವಾಹವಾದಳು.

ನಿತ್ಯ ಶುದ್ಧ–ಬುದ್ಧ–ಮುಕ್ತಸ್ವರೂಪಳೂ,ನಿತ್ಯಸಿದ್ಧಳೂ ಆದ ಈ ಮಂಗಲ ದೇವತೆಯ ಮಹಿಮೆಯನ್ನು ವರ್ಣಿಸುವ ಶಾಸ್ತ್ರಗಳಲ್ಲೇ ಆಕೆಯನ್ನು ಕ್ಷೀರಸಮುದ್ರಸಂಭವೆ, ಸಮುದ್ರರಾಜನ ಪುತ್ರಿ, ಚಂದ್ರನ ತಂಗಿ, ಯಜ್ಞಕುಂಡದಲ್ಲಿ ಉದ್ಭವವಾದವಳು, ಕಮಲದಲ್ಲಿ ಆವಿರ್ಭವಿಸಿದವಳು ಎನ್ನಲಾಗಿದೆ.

ವ್ರತ ಆಚರಿಸುವ ವಿಧಾನ: ಶುಕ್ರವಾರದ ದಿನ, ಸಾಯಂಕಾಲದವರೆವಿಗೂ ಉಪವಾಸ ಇರಬೇಕು. ವ್ರತ ಮಾಡುವವರು ಸಂಕಲ್ಪ ಮಾಡಿ ದೇವಿಯನ್ನು ಕಲಶ ಮತ್ತು ವಿಗ್ರಹಗಳಲ್ಲಿ ಆವಾಹನೆ ಮಾಡಿ ಪೂಜಿಸುವರು. ಕಲಶದಲ್ಲಿ ಅಕ್ಕಿ ತುಂಬಿಸಿ ಖರ್ಜೂರ, ಗೋಡಂಬಿ, ದ್ರಾಕ್ಷಿ, ಬಾದಾಮಿ, ಕಲ್ಲುಸಕ್ಕರೆ ಮತ್ತು ಕೆಲವು ಹಣ್ಣುಗಳನ್ನು ಇರಿಸುವರು. ಈ ಕಳಸಕ್ಕೆ ಲಕ್ಷ್ಮೀ ಕಳಸ ಎನ್ನುತ್ತಾರೆ. ಅದರ ಮೇಲೆ ಚಿನ್ನ ಅಥವಾ ಬೆಳ್ಳಿಯಿಂದ ತಯಾರಿಸಿದ ಮುಖವಾಡವನ್ನಿಟ್ಟು ಅಥವಾ ತೆಂಗಿನ ಕಾಯಿಗೆ ಹಳದಿಯ ಹಿಟ್ಟಿನಿಂದ ಮೂಗು ಕಣ್ಣು ಕಿವಿ ಮಾಡಿ, ಒಡವೆಗಳನ್ನು ಏರಿಸಿ, ಸೀರೆ ಉಡಿಸಿ, ಅಲಂಕಾರ ಮಾಡಲಾಗುತ್ತದೆ. ಈ ಪೂಜೆಯಲ್ಲಿ ವಿಶೇಷವಾದ ದಾರಗಳಿಗೆ ಪೂಜೆಯನ್ನು ಸಲ್ಲಿಸುವರು. ಈ ದಾರವನ್ನು ದೋರವೆಂದು ಕರೆವರು. ಹೊಸದಾದ 12 ದಾರಗಳಿಗೆ 12 ಗಂಟುಗಳನ್ನು ಹಾಕಿ, ಅದನ್ನು ಸ್ವಲ್ಪ ನೀರಿನಲ್ಲಿ ನೆನೆಸಿ ಅರಿಶಿನ ಹಚ್ಚಿ ದೇವಿಯ ಪಕ್ಕದಲ್ಲಿರಿಸಿ ಆರಾಧಿಸಿ ಪೂಜಿಸುವರು. ಈ ದಾರಗಳಿಗೆ ಅರಿಶಿನ, ಕುಂಕುಮ, ಹೂವು, ಪತ್ರೆ ಗಳಿಂದ ಪೂಜಿಸಿ, ನೈವೇದ್ಯ ಮಾಡುವರು. ಹನ್ನೆರಡು ಹೆಸರುಗಳನ್ನು ಉಚ್ಚರಿಸಿ ದ್ವಾದಶನಾಮಾವಳಿಯೆಂದು ಪೂಜಿಸುವರು. ಆ ನಾಮಾವಳಿಗಳು–ರಮೆ, ಸರ್ವಮಂಗಳೆ, ಕಮಲವಾಸಿನೆ, ಮನ್ಮಥಜನನಿ, ವಿಷ್ಣು ವಲ್ಲಭೆ, ಕ್ಷೀರಾಬ್ಧಿಕನ್ಯಕೆ, ಲೋಕಮಾತೆ, ಭಾರ್ಗವಿ, ಪದ್ಮಹಸ್ತೆ, ಪುಷ್ಟೆ, ತುಷ್ಟೆ ಮತ್ತು ವರಲಕ್ಷ್ಮಿ. ಈ ದಾರಕ್ಕಾಗಿ ವಿಶೇಷವಾದ ನೈವೇದ್ಯವಾದ ಸಜ್ಜಪ್ಪವನ್ನು ಅರ್ಪಿಸುವರು. ಅಂದು ಶ್ರೀಸೂಕ್ತವನ್ನು ಪಠಿಸುವುದೂ ಒಳ್ಳೆಯದು.

ದೇವಿಯ ಮೂರ್ತಿಗೂ ಅರಿಶಿನ, ಕುಂಕುಮ,ಹೂವು, ಪತ್ರೆ ಮತ್ತು ಅಕ್ಷತೆಯಿಂದ ಪೂಜೆಯನ್ನು ಸಲ್ಲಿಸಿದ ಬಳಿಕ, ಪೂಜಿಸಿದ ಹೆಣ್ಣುಮಕ್ಕಳು ಆ ದಾರಗಳಿಗೆ ಹೂವನ್ನು ಕಟ್ಟಿ, ಹಿರಿಯರಿಂದ ಕಂಕಣದಂತೆ ಬಲಗೈಗೆ ಕಟ್ಟಿಸಿಕೊಳ್ಳುವರು. ಹಾಗೆ ಕಟ್ಟಿಸಿಕೊಂಡ ನಂತರ ಆ ಹಿರಿಯರಿಗೆ ನಮಸ್ಕರಿಸಿ ದಕ್ಷಿಣೆಯೊಂದಿಗೆ ದಾನವನ್ನು ಕೊಡುವರು ಈ ಸಮಯದಲ್ಲಿ ಹೇಳುವ ಶ್ಲೋಕ, **"ದ್ವಾದಶ ಗ್ರಂಥಿ ಸಂಯುಕ್ತಂ ಕೃತಂ ದ್ವಾದಶ ತಂತುಭಿಃ ಧಾರಯಾಮಿ ಮಹಾದೇವಿ ಸೂತ್ರಂ ತೇ ಸರ್ವಮಂಗಳೇ॥**

ಮನೆಗೆ ಐಶ್ವರ್ಯ ಬರುವಂತೆ ವರವನ್ನು ನೀಡು ನಮ್ಮಮ್ಮ ಎಂದು ಲಕ್ಷ್ಮಿದೇವಿಯನ್ನು ಭಕ್ತಿಭಾವದಿಂದ ಪೂಜಿಸಿ ವ್ರತ ಮಾಡಲಾಗುವುದು. ಈ ವ್ರತವನ್ನು ಶ್ರಾವಣ ಮಾಸದ ಶುಕ್ಲ ಪಕ್ಷದ ಶುಕ್ರವಾರ ಮಾಡಲಾಗುವುದು. ಈ ಸಮಯದಲ್ಲಿ ಮನೆಯನ್ನು ತಳಿರು ತೋರಣಗಳಿಂದ ಕಂಗೊಳಿಸಿ ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿಯಿಂದ ಅಲಂಕರಿಸುವುದರಲ್ಲಿ ಮಹಿಳೆಯರಿಗೆ ಮಹದಾನಂದ. ಹೆಣ್ಣು ಮಕ್ಕಳು ಅಂದು ಬೆಳಗಿನ ಜಾವವೇ ಎದ್ದು ಮನೆಯನ್ನೆಲ್ಲ ಒಪ್ಪ ಓರಣ ಮಾಡಿ ಅಭ್ಯಂಜನ ಮುಗಿಸಿ ರೇಷಿಮೆ ಬಟ್ಟೆ ಧರಿಸಿಕೊಂಡು ಅತ್ತಿಂದಿತ್ತ ಓಡಾಡುತ್ತಾ ಪೂಜಾ ಸಾಮಗ್ರಿಗಳನ್ನು ತಯಾರು ಮಾಡಿಕೊಂಡು ಪೂಜೆಗೆ ಸಿದ್ಧವಾಗುತ್ತಾರೆ. ಬಾಳೆ ಕಂದು ಮಾವಿನ ಎಲೆಗಳಿಂದ ಸಿಂಗರಿಸಿ ಅಷ್ಟದಳ ಪದ್ಮದ ರಂಗೋಲಿ ಹಾಕಬೇಕು. ಇದರ ಮೇಲೆ ಕಲಶವನ್ನು ಪ್ರತಿಷ್ಠಾಪಿಸಬೇಕು. ಒಂದು ಚೊಂಬಿನಲ್ಲಿ ನೀರು, ಅಕ್ಕಿ ಜೊತೆಗೆ ಅರಿಶಿನದ ಕೊಂಬು, ಅಡಿಕೆ, ಬೆಳ್ಳಿ ನಾಣ್ಯಗಳನ್ನು ಇಟ್ಟು ಅದರ ಮೇಲೆ ಅರಿಶಿನ ಕುಂಕುಮ ಸವರಿದ ತೆಂಗಿನಕಾಯಿ ಇಟ್ಟು ಅದರ ಮೇಲೆ ಮುಖದ ಆಕಾರ ಬರೆಯಬಹುದು. ಅಥವಾ ಲಕ್ಷ್ಮಿದೇವಿಯ ಬೆಳ್ಳಿಯ ಮುಖವಾಡವನ್ನು ತೆಂಗಿನಕಾಯಿಗೆ ತೊಡಿಸಬಹುದು.

ನಾಣ್ಯಗಳ ಜೋಡಣೆ: ಸರ್ವಸಂಪತ್ತಿನ ಒಡತಿಯಾಗಿರುವ ದೇವಿಯನ್ನು ಬರಮಾಡಿಕೊಳ್ಳಲು ನಾಣ್ಯಗಳಿಂದಲೇ ರಂಗೋಲಿ ರಚಿಸಬಹುದು. ನೆಲದ ಮೇಲೆ ಹಾಗೂ ದೇವಿಯ ಮೇಲೆ ಮಾಡುವ ನಾಣ್ಯದ ಅಲಂಕಾರದಿಂದ ಪೂಜಾಕೋಣೆ ಮಿನುಗುತ್ತದೆ. ಇತ್ತೀಚೆಗೆ ಸಿಗುವ ಚಿನ್ನದ ಬಣ್ಣದಲ್ಲಿರುವ 5 ಹಾಗೂ 10 ರೂ.ಗಳ ನಾಣ್ಯಗಳಿಂದ ಅಲಂಕರಿಸಿದರೆ ಮತ್ತಷ್ಟು ಸೊಬಗು ಮೂಡುತ್ತದೆ.

ನೋಟುಗಳ ಅಲಂಕಾರ: ಪೂಜಾ ಕೋಣೆಯಲ್ಲಿ ದೇವರ ಮುಂದೆ ಅಥವಾ ಕಲಶದ ತಟ್ಟೆಯಲ್ಲಿ ನೋಟುಗಳನ್ನು ಅಂದವಾಗಿ ವೃತ್ತಾಕಾರವಾಗಿ ಜೋಡಿಸಿದರೆ ಅದೇ ಒಂದು ರೀತಿಯ ಮೆರುಗನ್ನು ನೀಡುತ್ತದೆ. ನೋಟುಗಳನ್ನು ತೋರಣದಂತೆಯೂ ಕಟ್ಟಬಹುದು. ಪಿನ್‌ಗಳನ್ನು ಹೊಡೆದು ಅಲಂಕರಿಸಬಹುದು. ನೋಟಿನ ಹಾರವನ್ನೂ ಹಾಕಬಹುದು.

ಕಮಲದ ಹೂವಿನ ಜೋಡಣೆ: ಲಕ್ಷ್ಮಿ ಮೊದಲೇ ಕಮಲ ಪ್ರಿಯೆ. ತಾವರೆ ಹೂವೆಂದರೆ ಆಕೆಗೆ ಬಲು ಇಷ್ಟ. ಮಂಟಪದ ಬದಿಯಲ್ಲಿ ನೀರನ್ನಿಟ್ಟು ಅದರಲ್ಲಿ ಕಮಲದ ಹೂವುಗಳನ್ನು ತೇಲಿಬಿಟ್ಟರೆ ಕಣ್ಣಿಗೆ ಹಬ್ಬ. ದೀಪದ ಕೆಳಭಾಗದಲ್ಲಿ ತಾವರೆಯ ಎಲೆಗಳನ್ನು ಅಂದವಾಗಿ ಜೋಡಿಸಿಟ್ಟರೆ ಇನ್ನೂ ಸೊಬಗು. ಕಮಲವನ್ನು ತಾಯಿಯ ಮುಡಿಗೇರಿಸಿ ಶೃಂಗರಿಸಿದರೆ ನೋಡಲು ಎರಡೂ ಕಣ್ಣು ಸಾಲದು.

ಅಷ್ಟ ಲಕ್ಷ್ಮಿಯರು: ಲಕ್ಷ್ಮಿಯನ್ನು ಅಷ್ಟ ರೂಪದಲ್ಲಿ ಪೂಜಿಸುವುದು ವಾಡಿಕೆ. ಆದಿ ಲಕ್ಷ್ಮಿ ಧನ ಲಕ್ಷ್ಮಿ ಧೈರ್ಯ ಲಕ್ಷ್ಮಿ ವಿದ್ಯಾ ಲಕ್ಷ್ಮಿ ಸಂತಾನ ಲಕ್ಷ್ಮಿ ವಿಜಯ ಲಕ್ಷ್ಮಿ ಧಾನ್ಯ ಲಕ್ಷ್ಮಿ ಮತ್ತು ಗಜ ಲಕ್ಷ್ಮಿ–ಹೀಗೆ ಎಂಟು ರೂಪಗಳುಳ್ಳ ವಿಗ್ರಹವನ್ನೋ ಅಥವಾ ಚಿಕ್ಕ ಚಿಕ್ಕ ಫೋಟೋಗಳನ್ನು ಇಟ್ಟು ಪೂಜೆ ಸಲ್ಲಿಸಬಹುದು. ಅಷ್ಟ ಲಕ್ಷ್ಮಿಗೂ ಅಲಂಕರಿಸಿ ಸಿಂಗಾರ ಮಾಡಿದಾಗ ಅದೊಂದು ರೀತಿ ಪರಿಪೂರ್ಣತೆಯನ್ನು ಬಿಂಬಿಸುವಂತಿರುತ್ತದೆ.

ಕೆಂಪು ಬಣ್ಣ: ಲಕ್ಷ್ಮಿ ದೇವಿಗೆ ಕೆಂಪು ಬಣ್ಣ ಬಹಳ ಪ್ರಿಯ. ಅದಕ್ಕಾಗಿಯೇ ಆದಷ್ಟು ದೇವರ ಕೋಣೆಯು ಕೆಂಪುಮಯವಾಗಿದ್ದರೆ ಅದೊಂದು ರೀತಿ ಭಕ್ತಿಭಾವವನ್ನು ಇಮ್ಮಡಿಸಿದಂತಾಗುತ್ತದೆ. ಕೆಂಪು ಹೂವುಗಳು, ಕೆಂಪು ಮಿಶ್ರಿತ ರಂಗೋಲಿ, ಕೆಂಪು ಸೀರೆ, ಕೆಂಪು ಬಳೆ, ಕೆಂಪು ಕುಂಕುಮ, ಹೀಗೆ ಎಲ್ಲವೂ ಕೆಂಪಾಗಿದ್ದರೂ ಅದು ಕಣ್ಣು ಕುಕ್ಕುವಂತಿರದೆ ಕಣ್ಣಿಗೆ ಆಹ್ಲಾದ ನೀಡುವಂತಿರಬೇಕು.

ಸಿಂಗಾರಕ್ಕೆ ಬೇಕಾಗುವ ಸಾಮಾನುಗಳು: ಲಕ್ಷ್ಮಿ ಮುಖವಾಡ * ಸೀರೆ, ಬ್ಲೌಸ್ ಪೀಸ್ * ಆಭರಣಗಳು * ದೊಡ್ಡ ಕಲಶದ ಬಿಂದಿಗೆ * ದುಂಡಗಿನ ತೆಂಗಿನಕಾಯಿ * ಮಾವಿನ ಎಲೆಗಳು * ವಿಧ ವಿಧವಾದ ಹೂವುಗಳು * ಪೇಂಟ್, ದಾರ, ನ್ಯೂಸ್ ಪೇಪರ್, ಫೆವಿಕಾಲ್

ವಿಸರ್ಜನೆ: ಸಂಕಲ್ಪ ಮಾಡಿ ಕಳಶವನ್ನು ಹೇಗೆ ಪ್ರತಿಷ್ಠಾಪಿಸುವ ವಿಧಿವಿಧಾನವಿದೆಯೊ, ಕಳಶ ವಿಸರ್ಜನೆಯೂ ಕ್ರಮಬದ್ಧವಾಗಿರಬೇಕು. ಪೂಜೆ ಆಯಿತು ಎಂದು ಒಟ್ಟಾರೆಯಾಗಿ ವಿಲೇವಾರಿ ಮಾಡಕೂಡದು. ಸಂಕಲ್ಪ ಮುದ್ರೆಯಲ್ಲಿ ಕುಳಿತುಕೊಂಡು ಕೈಯ ನಡುಬೆರಳಿನಿಂದ ನೆಲದಲ್ಲಿ ಬರೆದಿರುವ ಚೌಕದ ಗೆರೆಯನ್ನು ಛಿನ್ನಗೊಳಿಸಬೇಕು. ಪ್ರತಿಷ್ಠಾಪನೆ ಉತ್ತರಾಭಿಮುಖವಾಗಿದ್ದಿದ್ದರೆ ಉತ್ತರದ ಗೆರೆಯನ್ನು ಭಿನ್ನ ಮಾಡಬೇಕು. ಪೂರ್ವಭಿಮುಖವಾಗಿದ್ದರೆ ಪೂರ್ವದ ಗೆರೆಯನ್ನು ಛಿನ್ನಗೊಳಿಸಬೇಕು. ಆನಂತರ ಕಳಶವನ್ನು ಸ್ವಲ್ಪ ಅಲುಗಾಡಿಸಬೇಕು. ಇದೆಲ್ಲ ಮಾಡಿದ ನಂತರ ಒಳ್ಳೆಯ ಸಮಯದಲ್ಲಿ ಪರಿಕರಗಳನ್ನೆಲ್ಲಾ ತೆಗೆಯಬೇಕು.

ಚೌಕ ಬರೆದ ರಂಗೋಲಿ ಪುಡಿ, ಹೂವು ಕಡ್ಡಿ ಇತ್ಯಾದಿ ಎಲ್ಲವನ್ನೂ ಎಲ್ಲೆಂದರಲ್ಲಿ ಬಿಸಾಡದೆ ಗಲೀಜು ಇಲ್ಲದ ಜಾಗದಲ್ಲಿ ಕೊಂಡೊಯ್ದು ಸುರಿಯಬೇಕು. ಅಥವಾ ಯಾವುದೇ ನದಿ ದಂಡೆಯಲ್ಲಿ ಇಟ್ಟುಬಿಡಬೇಕು. ನದಿಗೆ ಎಸೆಯುವುದು ಕೂಡ ಸಲ್ಲದು. ಎಸೆದವರಿಗೆ ದೋಷ ಉಂಟು. ನದಿಗೆ ಯಾವುದೇ ಕಸ ಬಿಸಾಡುವುದು ತಪ್ಪಾಗುತ್ತದೆ. ಪರಿಸರ ಮಾಲಿನ್ಯವನ್ನು ಉಂಟು ಮಾಡಿದಂತಾಗುತ್ತದೆ. ವರಮಹಾಲಕ್ಷ್ಮೀ ಪೂಜ ವ್ರತದಲ್ಲಿ ವಿಶೇಷ ಆಡಂಬರಕ್ಕೆ ಮಹತ್ವವಿಲ್ಲ. ವಿಧಿವಿಧಾನ ಸಂಪೂರ್ಣ ಅನುಷ್ಠಾನ ಮಾತ್ರ ಸಾರ್ಥಕವಾಗುತ್ತದೆ. ಪೂಜೆ ಪರಿಪೂರ್ಣವಾಗುತ್ತದೆ. ವ್ರತ ಪೂಜೆ ಯಾರೇ ಮಾಡಲಿ ಲೋಕಕಲ್ಯಾಣವಾಗಲಿ ಎಂದು ಆಶಿಸೋಣ.

● ಮ.ನ. ಲತಾ ಮೋಹನ್,
ಮೈಸೂರು. ಮೊ.94818 31434

ನಿಗದಿತ ಅಕ್ಟೋಬರ್ 15ರಿಂದಲೇ ದಸರಾ ವಸ್ತುಪ್ರದರ್ಶನ ಪ್ರಾರಂಭ


ಪೂರ್ಣ ಪ್ರದರ್ಶನಕ್ಕೆ ಉಸ್ತುವಾರಿ ತಂಡ ರಚನೆ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಆ.24– ಮೈಸೂರು ದಸರಾ ವಸ್ತುಪ್ರದರ್ಶನ ಮೇಲುಸ್ತುವಾರಿಗೆ ವಿಶೇಷ ತಂಡ ರಚಿಸಲಾಗುತ್ತಿದೆ. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ದಸರಾ ವೇಳೆ ವಸ್ತು ಪ್ರದರ್ಶನ ಆಯೋಜಿಸಲಾಗುತ್ತದೆ. ದಸರಾ ಉದ್ಘಾಟನೆ ದಿನ ಖಾಲಿ ಮಳಿಗೆಗಳ ಪ್ರದರ್ಶನಕ್ಕೇ ಚಾಲನೆ ನೀಡಲಾಗುತ್ತದೆ. ಆದರೆ ಈ ಬಾರಿ ಮೊದಲ ದಿನದಿಂದಲೇ ಮಳಿಗೆಗಳು ಪೂರ್ಣ ಪ್ರಮಾಣದಲ್ಲಿ ವಸ್ತು ಪ್ರದರ್ಶನ ಆರಂಭಿಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಹೊರ ಜಿಲ್ಲೆಗಳ ಮಳಿಗೆಗಳನ್ನು ಸಕಾಲಕ್ಕೆ ಸಜ್ಜುಗೊಳಿಸುವ ಮೇಲುಸ್ತುವಾರಿಯನ್ನು ಇದೇ ಮೊದಲ ಬಾರಿಗೆ ಅಧಿಕಾರಿಗಳ ವಿಶೇಷ ತಂಡಕ್ಕೆ ವಹಿಸಲಾಗಿದೆ.

ದಸರೆಯೊಂದಿಗೆ ವಸ್ತು ಪ್ರದರ್ಶನಕ್ಕೂ ಚಾಲನೆ ನೀಡುತ್ತಾ ಬಂದಿದ್ದರೂ ಸರ್ಕಾರಿ ಮಳಿಗೆಗಳು ಎರಡು ತಿಂಗಳಾದರೂ ಆರಂಭವಾಗುತ್ತಿರಲಿಲ್ಲ. ಜಿಲ್ಲಾಡಳಿತ ಖಡಕ್ ಸೂಚನೆ ನೀಡಿದರೂ ವಿವಿಧ ಜಿಲ್ಲಾ ಪಂಚಾಯ್ತಿ ಹಾಗೂ ನಿಗಮ ಮಂಡಳಿಗಳ ಮಳಿಗೆಗಳನ್ನು ನಿಗದಿತ ವೇಳೆಗೆ ಪೂರ್ಣಗೊಳಿಸುವಲ್ಲಿ ಅಧಿಕಾರಿಗಳು ವಿಫಲರಾಗುತ್ತಿದ್ದರು. ಪರಿಣಾಮ ವಸ್ತುಪ್ರದರ್ಶನ ಮುಕ್ತಾಯಗೊಳ್ಳುವ ಹಂತದಲ್ಲಿ ಕೆಲವು ಮಳಿಗೆಗಳಷ್ಟೇ ಪ್ರವಾಸಿಗರ ವೀಕ್ಷಣೆಗೆ ಲಭ್ಯವಾಗುತ್ತಿದ್ದವು. ಆದರೆ ಹಿಂದಿನ ಪ್ರಮಾದ ಮರುಕಳಿಸದಂತೆ ಅಧಿಕಾರಿಗಳೇ ಸ್ವಯಂಪ್ರೇರಣೆಯಿಂದ ಮುನ್ನೆಚ್ಚರಿಕೆ ವಹಿಸಿದ್ದಾರೆ.

ದಸರಾ ವಸ್ತು ಪ್ರದರ್ಶನ ಆರಂಭದ ದಿನದಂದೇ ಪೂರ್ಣ ಪ್ರಮಾಣದಲ್ಲಿ ಮಳಿಗೆಗಳು ಭರ್ತಿಯಾಗಿರಬೇಕು. ಸರ್ಕಾರಿ ಇಲಾಖೆ, ನಿಗಮ ಮಂಡಳಿಗಳ ಮಳಿಗೆಗಳನ್ನು ನಿಗದಿತ ಸಮಯಕ್ಕೆ ಪೂರ್ಣಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ ನೀಡಿದ್ದು, ಈ ಮೂಲಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ಚುರುಕು ಮುಟ್ಟಿಸಿದಂತಾಗಿದೆ. ಪ್ರಾಧಿಕಾರದಿಂದ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳ ಜಿ.ಪಂ ಕಚೇರಿಗೆ ಪತ್ರ ಬರೆದು, ಈ ಬಾರಿ ದಸರಾ ವಸ್ತುಪ್ರದರ್ಶನದಲ್ಲಿ ಮಳಿಗೆ ಸ್ಥಾಪಿಸಲು ಎಷ್ಟು ಅಳತೆಯ ಜಾಗ ಬೇಕು? ಎಂದು ನಿಗದಿಪಡಿಸುವುದರ ಜೊತೆಗೆ ಅ.15ರೊಳಗೆ ಮಳಿಗೆ ಸ್ಥಾಪನೆ ಮಾಡಲೇಬೇಕು ಎಂದು ಸೂಚಿಸಲಾಗಿದೆ.



8.90 ಕೋಟಿ ರೂ. ಟೆಂಡರ್

ಅ.15ರಂದು ಈ ಬಾರಿಯ ದಸರಾ ವಸ್ತುಪ್ರದರ್ಶನ ಉದ್ಘಾಟನೆಗೊಳ್ಳಲಿದ್ದು, 90 ದಿನಗಳ ಕಾಲ ಇರುತ್ತದೆ. ಇದಕ್ಕಾಗಿ ಈ ಬಾರಿ 8.90 ಕೋಟಿ ರೂ.ಗೆ ಜಾಗತಿಕ ಟೆಂಡರ್ ಕರೆಯಲಾಗಿದೆ. ಪ್ರವೇಶ ಶುಲ್ಕ ಸಂಗ್ರಹ, ಅಮ್ಯೂಸ್‌ಮೆಂಟ್ ಪಾರ್ಕ್, ಖಾಸಗಿ ಮಳಿಗೆ ಹಾಗೂ ವಾಹನ ನಿಲುಗಡೆ ಶುಲ್ಕ ಸಂಗ್ರಹ ಮಾಡುವ ಹೊಣೆಗಾರಿಕೆಯನ್ನು ಟೆಂಡರ್ ಪಡೆದವರಿಗೆ ನೀಡಲಾಗುತ್ತದೆ. ಇ–ಟೆಂಡರ್ ಪ್ರಕ್ರಿಯೆ ತಿಂಗಳಾಂತ್ಯಕ್ಕೆ ಪೂರ್ಣಗೊಳ್ಳಲಿದ್ದು, ಆ ನಂತರವಷ್ಟೇ ಎಷ್ಟು ಮಂದಿ ಟೆಂಡರ್‌ದಾರರು ಪಾಲ್ಗೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಲಿದೆ.

ಮುಖ್ಯವಾಗಿ ಮಳಿಗೆ ಸ್ಥಾಪಿಸಲು ಇಚ್ಛಿಸುವ ಜಿಪಂ ಹಾಗೂ ನಿಗಮ ಮಂಡಳಿಗಳ ಅಧಿಕಾರಿಗಳಿಗೆ ಎರಡು ದಿನಕ್ಕೊಮ್ಮೆ ಕರೆ ಮಾಡಿ, ಮಾಹಿತಿ ಪಡೆದುಕೊಳ್ಳಲು ಇದೇ ಮೊದಲ ಬಾರಿಗೆ ಮೇಲ್ವಿಚಾರಣೆ ತಂಡವೊಂದನ್ನು ರಚಿಸಲಾಗಿದೆ. ಇದರಿಂದ ಮಳಿಗೆಗಳ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆದು, ದಸರಾ ಉದ್ಘಾಟನೆ ದಿನದೊಳಗೆ ಸಂಪೂರ್ಣವಾಗಿ ಸಿದ್ಧತೆ ಮಾಡಿಕೊಳ್ಳಬಹುದು ಎಂಬ ಲೆಕ್ಕಾಚಾರ ಪ್ರಾಧಿಕಾರದ್ದಾಗಿದೆ.

ವೈವಿಧ್ಯಮಯ ಮಳಿಗೆ: ಸರ್ಕಾರಿ ಮಳಿಗೆಗಳ ಜೊತೆಗೆ ವಿವಿಧ ಬಗೆಯ ವಸ್ತುಗಳು ಹಾಗೂ ತಿನಿಸುಗಳ ಮಾರಾಟಕ್ಕೆ ಸಮರ್ಪಕ ರೀತಿಯಲ್ಲಿ ಮಳಿಗೆಗಳ ವ್ಯವಸ್ಥೆ ಮಾಡಲಾಗುತ್ತದೆ. ಈ ಬಾರಿ ಒಂದೇ ರೀತಿಯ ಬದಲು ವೈವಿಧ್ಯಮಯ ಮಳಿಗೆ ನಿರ್ಮಾಣಕ್ಕೆ ಸೂಚನೆ ನೀಡಲಾಗಿದೆ. ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸುವ ವಸ್ತುಗಳ ಮಾರಾಟ, ಮೈಸೂರು ವೀಳ್ಯದೆಲೆ, ನಂಜನಗೂಡು ರಸಬಾಳೆ ಸೇರಿದಂತೆ ಮೈಸೂರು ಬ್ರಾಂಡ್‌ಗಳ ಪ್ರದರ್ಶನ ಮತ್ತು ಮಾರಾಟದ ಮಳಿಗೆಗಳ ಸ್ಥಾಪನೆಗೂ ಚಿಂತನೆ ನಡೆಸಲಾಗಿದೆ. ಒಟ್ಟಾರೆ ಈ ಬಾರಿ ದಸರಾ ಉದ್ಘಾಟನೆ ದಿನದಂದೇ ತುಂಬಿದ ಆಕರ್ಷಕ ವಸ್ತು ಪ್ರದರ್ಶನಕ್ಕೂ ಚಾಲನೆ ನೀಡಬೇಕೆಂಬ ಗುರಿಯೊಂದಿಗೆ ಅಧಿಕಾರಿಗಳು ಶ್ರಮಿಸುತ್ತಿದ್ದಾರೆ.

ಐದು ಗ್ಯಾರಂಟಿ ಕಾರ್ಯಕ್ರಮದ ಮಳಿಗೆ: ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವ ನಿಧಿ ಬಗ್ಗೆ ಹೆಚ್ಚು ಪ್ರಚಾರ ಮಾಡುವುದಕ್ಕೂ ಮುಖ್ಯಮಂತ್ರಿಗಳು ಈಗಾಗಲೇ ಕಟ್ಟಾಜ್ಞೆ ಮಾಡಿರುವುದರಿಂದ ಈ ಸಂಬಂಧವೂ ಮಳಿಗೆ ಸ್ಥಾಪಿಸಲಾಗುತ್ತಿದೆ. ಇದರೊಂದಿಗೆ ಸಮಾಜ ಕಲ್ಯಾಣ ಇಲಾಖೆ, ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ನಿಗಮಗಳ ಮಳಿಗೆಗಳೂ ತಲೆ ಎತ್ತಲಿವೆ.

ಲಗೇಜ್ ರೂಮ್ ಸ್ಥಾಪನೆ: ದಸರಾ ವಸ್ತುಪ್ರದರ್ಶನ ವೀಕ್ಷಣೆಗೆ ಬರುವ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಇದೇ ಮೊದಲ ಬಾರಿಗೆ ವಸ್ತುಪ್ರದರ್ಶನದ ದ್ವಾರದ ಬಳಿಯೇ ಲಗೇಜ್ ರೂಮ್ ಸ್ಥಾಪಿಸಲಾಗುತ್ತಿದೆ. ಸಿಸಿ ಕ್ಯಾಮರಾ ಕಣ್ಗಾವಲು ಹಾಗೂ ಭದ್ರತಾ ಸಿಬ್ಬಂದಿಗಳ ಭದ್ರತೆಯಲ್ಲಿ ಇದು ಕಾರ್ಯ ನಿರ್ವಹಿಸಲಿದೆ.



ಈ ಬಾರಿ ದಸರಾ ವಸ್ತುಪ್ರದರ್ಶನದ ಆರಂಭದ ದಿನದಿಂದಲೇ ಎಲ್ಲಾ ಮಳಿಗೆಗಳು ಭರ್ತಿಯಾಗಿ, ವೀಕ್ಷಣೆಗೆ ಲಭ್ಯವಾಗಿರಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸೂಚನೆ ನೀಡಿದ್ದು, ಅದಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಪ್ರಾಧಿಕಾರದ ವತಿಯಿಂದ ಪತ್ರ ಬರೆಯಲಾಗಿದೆ. ಅಲ್ಲದೆ, ಮೇಲುಸ್ತುವಾರಿ ತಂಡವನ್ನು ರಚಿಸಲಾಗಿದ್ದು, ಈ ತಂಡವು ನಿರಂತರವಾಗಿ ಎಲ್ಲಾ ಜಿಲ್ಲಾ ಪಂಚಾಯ್ತಿ ಹಾಗೂ ನಿಗಮ ಮಂಡಳಿಗಳ ಸಂಪರ್ಕಿಸಿ ಮಳಿಗೆ ಸ್ಥಾಪನೆ ಬಗ್ಗೆ ಮಾಹಿತಿ ಪಡೆಯಲಿದೆ. ಇದರಿಂದ ಸಕಾಲಕ್ಕೆ ಮಳಿಗೆ ಆರಂಭಗೊಳ್ಳಲು ಸಹಕಾರಿಯಾಗಲಿದೆ. ಇದೇ ಮೊದಲ ಬಾರಿಗೆ ಲಗೇಜ್ ರೂಮ್ ಆರಂಭಿಸಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಸಭೆ ನಡೆಸಿ, ವಸ್ತು ಪ್ರದರ್ಶನದ ರೂಪುರೇಷೆ ಬಗ್ಗೆ ಚರ್ಚಿಸಲಾಗುತ್ತದೆ.
–ರಾಜೇಶ್ ಜಿ.ಗೌಡ, ಸಿಇಓ, ವಸ್ತುಪ್ರದರ್ಶನ ಪ್ರಾಧಿಕಾರ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶಾಸಕರೂ ಆದ ಜಿ.ಡಿ.ಹರೀಶ್‌ಗೌಡರ ಅವಿರತ ಸೇವೆಯ ಫಲ

ಎಂಸಿಡಿಸಿಸಿ ಬ್ಯಾಂಕ್ ಐದು ವರ್ಷದಲ್ಲಿ ಮೂರು ಪಟ್ಟು ಸಾಧನೆ

● ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸಾಧನೆ ಸಾಕ್ಷೀಕರಿಸಿದ ಅಧ್ಯಕ್ಷರು ● ವಾಣಿಜ್ಯ ಬ್ಯಾಂಕ್‌ಗಳ ಪೈಪೋಟಿ ನಡುವೆಯೂ ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ಎಂಸಿಡಿಸಿಸಿ ಬ್ಯಾಂಕ್‌ನಿಂದ ಉತ್ತಮ ಸೇವೆ



ಮೈಸೂರು, ಆ.24 (ಎಸ್‌ಬಿಡಿ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್(ಎಂಸಿಡಿಸಿಸಿ) ಕಳೆದ ಐದು ವರ್ಷಗಳಲ್ಲಿ ಮಾದರಿಯಾಗಿ ಬೆಳೆದಿದೆ ಎಂದು ಬ್ಯಾಂಕ್‌ನ ಅಧ್ಯಕ್ಷರೂ ಆದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಸಂತಸ ವ್ಯಕ್ತಪಡಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಗುರುವಾರ ನಡೆದ ಎಂಸಿಡಿಸಿಸಿ ಬ್ಯಾಂಕ್‌ನ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಂಸಿಡಿಸಿಸಿ ಬ್ಯಾಂಕ್ ಇತಿಹಾಸದಲ್ಲೇ ಕಳೆದ 5 ವರ್ಷದಲ್ಲಿ ಠೇವಣಿ ಸಂಗ್ರಹಣೆ, ಸಾಲ ವಿತರಣೆ ಸೇರಿದಂತೆ ಎಲ್ಲಾ ವಲಯದಲ್ಲೂ ಮೂರು ಪಟ್ಟು ಸಾಧನೆ ಮಾಡಿ, ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ರಾಜ್ಯದಲ್ಲೇ ಮಾದರಿ ಡಿಸಿಸಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ತಿಳಿಸಿದರು.

ಎಂಸಿಡಿಸಿಸಿ ಬ್ಯಾಂಕ್ ಕಳೆದ 62 ವರ್ಷದಲ್ಲಿ ಹಲವು ಏಳು ಬೀಳುಗಳನ್ನು ಕಂಡಿದೆ. ಐದು ವರ್ಷದ ಹಿಂದಿನ ಭಾರಿ ಅವ್ಯವಹಾರದಿಂದಾಗಿ ಬ್ಯಾಂಕ್ ಮುಚ್ಚಿ ಹೋಗುವ ಸ್ಥಿತಿ ತಲುಪಿತ್ತು. ಪರಿಸ್ಥಿತಿ ಕೈಮೀರಿ, ನೌಕರರು ಬೀದಿಪಾಲಾಗುವ ಆತಂಕವೂ ನಿರ್ಮಾಣವಾಗಿತ್ತು. ಅಂತಹ ದುಸ್ಥಿತಿಯಲ್ಲಿ ನಾನು ಬ್ಯಾಂಕಿನ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದಾಗ ಹಲವು ಸವಾಲು ಹಾಗೂ ಸಮಸ್ಯೆಗಳನ್ನು ಎದುರಿಸಬೇಕಾಯ್ತು. ಸಹಕಾರ ಕ್ಷೇತ್ರದ ಬಗೆಗಿನ ಕಾಳಜಿ, ಹಿರಿಯರ ಮಾರ್ಗದರ್ಶನದಿಂದ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, 5 ವರ್ಷಗಳ ಕಾಲ ರೈತರ ಧ್ವನಿಯಾಗಿ ಶ್ರಮವಹಿಸಿ ದುಡಿದಿದ್ದೇನೆ ಎಂದರು.

ಕೋವಿಡ್ ಸಂದಿಗ್ಧ ಪರಿಸ್ಥಿತಿಯನ್ನು ನಿಭಾಯಿಸುವುದರ ಜೊತೆಗೆ ಬ್ಯಾಂಕ್‌ನ ಪ್ರಗತಿಗಾಗಿ ಎಲ್ಲರೊಟ್ಟಿಗೆ ಕೆಲಸ ಮಾಡಿದೆ. ಎರಡು ಜಿಲ್ಲೆಯ ಆಶಾ ಕಾರ್ಯಕರ್ತೆಯರಿಗೆ ಸಹಾಯಧನ ಮತ್ತು ಸುರಕ್ಷಾ ಪರಿಕರಗಳನ್ನು ವಿತರಿಸಿದೆವು. ಸಹಕಾರ ಸಂಘಗಳ ಅಭಿವೃದ್ಧಿಗೆ ಪೂರಕವಾಗಿ ಕಟ್ಟಡ ನಿರ್ಮಾಣಕ್ಕಾಗಿ ಅಪೆಕ್ಸ್ ಬ್ಯಾಂಕ್‌ನಿಂದ ಸಹಾಯಧನ ಕಲ್ಪಿಸಿದ್ದು ಒಂದು ಇತಿಹಾಸ. ಮೊದಲ ಬಾರಿಗೆ ಸಹಾಯಧನ ಕೊಡಿಸಿದ್ದರ ಬಗ್ಗೆ ನನಗೆ ಸಂತಸವಿದೆ ಎಂದು ಹೇಳಿದರು.

ಎಂಸಿಡಿಸಿಸಿ ಬ್ಯಾಂಕ್‌ನ ಬಿಳಿಕೆರೆ, ಹುಣಸೂರು, ಪಿರಿಯಾಪಟ್ಟಣ, ಸಾತಗಳ್ಳಿ, ಹೆಬ್ಬಾಳು, ತಲಕಾಡು, ಬನ್ನೂರು, ಸಂತೆಮಾರನಹಳ್ಳಿ, ಭೇರ್ಯ, ಹುಲ್ಲಹಳ್ಳಿ, ತಿ.ನರಸೀಪುರ, ಕೊಳ್ಳೇಗಾಲ ಹಾಗೂ ಯಳಂದೂರು ಶಾಖೆಗಳನ್ನು ವಿನೂತನವಾಗಿ ನವೀಕರಿಸಲಾಗಿದೆ. ಖಾಸಗಿ ಬ್ಯಾಂಕ್‌ಗಳ ಮಾದರಿಯಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನೂ ಗಣಕೀಕರಣಗೊಳಿಸಿದ್ದೇವೆ. ವಾಣಿಜ್ಯ ಬ್ಯಾಂಕುಗಳ ಪೈಪೋಟಿ ನಡುವೆಯೂ ಡಿಸಿಸಿ ಬ್ಯಾಂಕ್ ಅಭಿವೃದ್ಧಿ ಸಾಧ್ಯ ಎನ್ನುವುದು ಸಾಬೀತಾಗಿದೆ. ಉತ್ತಮ ಕಟ್ಟಡ, ಮೂಲಸೌಕರ್ಯ, ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ಅತ್ಯುತ್ತಮ ಸೇವೆ ನೀಡುವ ಎಂಸಿಡಿಸಿಸಿ ಬ್ಯಾಂಕ್ ಮಾದರಿ ಬ್ಯಾಂಕ್ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಪೆಕ್ಸ್ ಬ್ಯಾಂಕ್ ನಿರ್ದೇಶಕನಾಗಿ, ಉಪಾಧ್ಯಕ್ಷನಾಗಿ ಕಳೆದ ಮೂರು ವರ್ಷದಲ್ಲಿ ಎಂಸಿಡಿಸಿಸಿ ಬ್ಯಾಂಕ್ ವ್ಯಾಪ್ತಿಯ 47 ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ 3.74 ಕೋಟಿ ರೂ. ಸಹಾಯ ಧನವನ್ನು ಪ್ರಥಮ ಬಾರಿಗೆ ಕೊಡಿಸಿದ ಸಮಾಧಾನ ನನಗಿದೆ ಎಂದರು.

ಸಮಾರಂಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಹಕಾರಿಗಳು ಹಾಗೂ ಸಹಕಾರಿಗಳ ಕುಟುಂಬದ ಪ್ರತಿಭಾನ್ವಿತ ಮಕ್ಕಳನ್ನು ಅಭಿನಂದಿಸಲಾಯಿತು. ಬ್ಯಾಂಕಿನ ಉಪಾಧ್ಯಕ್ಷ ಎಂ.ಪಿ.ಸುನೀಲ್, ನಿರ್ದೇಶಕರಾದ ಅಮಿತ್ ದೇವರ ಹಟ್ಟಿ, ಬಿ.ಎನ್.ಸದಾನಂದ, ಕೆ.ಎಸ್.ಕುಮಾರ್, ಡಾ.ಎಂ.ಬಿ.ಮಂಜೇಗೌಡ, ಎಂ.ಕುಮಾರ್, ಕೆ.ಜಿ. ಮಹೇಶ್, ಕೆಂಪಣ್ಣ, ಸಿ.ಎನ್.ರವಿ, ಹೆಚ್. ಸುಬ್ಬಯ್ಯ, ಹೆಚ್.ಜಿ.ನಾಗಪ್ರಸಾದ್, ನಾಗೇಂದ್ರ ಕುಮಾರ್, ಜಯರಾಮು, ಹೆಚ್.ಜಿ.ಶಿವರಾಜ್, ಸಹಕಾರ ಸಂಘಗಳ ಉಪನಿಬಂಧಕ ಮಂಜು ನಾಥ್ ಸಿಂಗ್, ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆ.ಸಿ.ಜನಾರ್ಧನ್, ಪ್ರಧಾನ ವ್ಯವಸ್ಥಾಪಕ ಶಶಿಧರ್, ವ್ಯವಸ್ಥಾಪಕ ರವಿ ಮತ್ತಿತರರು ಉಪಸ್ಥಿತರಿದ್ದರು.

ಮಹಾಲಿಂಗಂ ಮೈಸೂರು ಗುತ್ತಿಗೆದಾರರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ



ಮೈಸೂರು, ಆ.24(ಎಸ್‌ಬಿಡಿ)– ಮೈಸೂರಿನ ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಮಹಾಲಿಂಗಂ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ಇವರು ಸತತ ಐದನೇ ಬಾರಿ ಅಧ್ಯಕ್ಷರಾದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿಂಭಾಗದಲ್ಲಿರುವ ಸೊಸೈಟಿ ಆವರಣದಲ್ಲಿ ಗುರುವಾರ ನಡೆದ ನಿರ್ದೇಶಕರ ಸಭೆಯಲ್ಲಿ ಅಧ್ಯಕ್ಷರಾಗಿ ಮಹಾಲಿಂಗಂ ಹಾಗೂ ಉಪಾಧ್ಯಕ್ಷರಾಗಿ ವಿ.ಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನಿರ್ದೇಶಕರಾದ ಕೆ.ರವಿ, ಸಿ.ಡಿ.ಕೃಷ್ಣ, ಜಿ.ಅಶೋಕ್, ಎಂ.ಎಸ್.ರೇವಣ್ಣ, ಕೆ.ದಶರಥ್, ಜಯಲಕ್ಷ್ಮಿ, ಸಿ.ವೆಂಕಟಪ್ಪ ಎ.ಕುಮಾರ್, ಕೆ.ನಾಗರಾಜು, ದೇವೇಂದ್ರ, ಕೆ.ವಿ.ಚಿನ್ನಯ್ಯ, ರೇವನಾಯಕ, ಹೆಚ್.ಎಂ.ಪರಶಿವಮೂರ್ತಿ, ರಾಚೇಗೌಡ, ಟಿ.ಅನಸೂಯ, ಸೊಸೈಟಿಯ ಸಿಇಓ ಕುಮಾರ್ ಉಪಸ್ಥಿತರಿದ್ದರು.

ಏರ್‌ಪೋರ್ಟ್‌ನಲ್ಲಿ ಬೆಂಬಲಿಗರಿಗಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ಬಿಗಿ ಪಟ್ಟು!

ಮೈಸೂರು,ಆ.24(ಬಿಎಲ್‌ಯು)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸ್ವಾಗತಿಸಲು ಏರ್‌ಪೋರ್ಟ್ ಒಳಗೆ ನನ್ನೊಂದಿಗೆ ಇರುವ ಕಾರ್ಯಕರ್ತರನ್ನು ಬಿಡದಿದ್ದರೆ ನಾನೂ ಒಳಗೆ ಹೋಗುವುದಿಲ್ಲ...!



ಹೀಗೆ ಪೊಲೀಸರ ಬಳಿ ಬಿಗಿ ಪಟ್ಟು ಹಿಡಿದವರು ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದ ಡಿ.ಕೆ.ಶಿವಕುಮಾರ್ ಅವರನ್ನು ಸ್ವಾಗತಿಸಲು ಶಾಸಕ ದರ್ಶನ್ ಧ್ರುವನಾರಾಯಣ್ ಏರ್‌ಪೋರ್ಟ್‌ಗೆ ಆಗಮಿಸಿದ್ದರು. ಪೊಲೀಸರು ದರ್ಶನ್ ಅವರ ಕಾರು ಒಳಗೆ ಹೋಗಲು ಬಿಟ್ಟರು. ಆದರೆ, ಕಾರ್ಯಕರ್ತರ ವಾಹನ ಒಳಗೆ ಹೋಗದಂತೆ ತಡೆದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು, ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಈ ವಿಚಾರ ತಿಳಿದು ಮತ್ತೆ ವಾಪಸು ಬಂದ ದರ್ಶನ್, ನನ್ನ ಕಾರ್ಯಕರ್ತರನ್ನು ಬಿಡದಿದ್ದರೆ ನಾನೂ ಒಳಗೆ ಹೋಗುವುದಿಲ್ಲ ಎಂದು ಹಠ ಹಿಡಿದರು. ಈ ವೇಳೆ ಹಿರಿಯ ಪೊಲೀಸ್ ಅಧಿಕಾರಿಗಳು ಆಗಮಿಸಿ ದರ್ಶನ ಅವರ ಜೊತೆಗೆ ಅವರ ಕಾರ್ಯಕರ್ತರನ್ನು ಏರ್‌ಪೋರ್ಟ್ ಒಳಗೆ ಹೋಗಲು ಬಿಟ್ಟರು.

ಮೈಸೂರಿನ ಜಿಪಂ ಕಚೇರಿಯಲ್ಲಿ ಡಿ.ಕೆ.ಶಿವಕುಮಾರ್ ಅವರು ಗೃಹಲಕ್ಷ್ಮಿ ಯೋಜನೆಯ ಬಗ್ಗೆ ಅಧಿಕಾರಿಗಳ ಸಭೆ ನಡೆಸುತ್ತಿದ್ದರು. ಶಾಸಕರು ಹಾಗೂ ಅಧಿಕಾರಿಗಳನ್ನು ಹೊರತುಪಡಿಸಿ ಯಾರೂ ಸಭೆಯಲ್ಲಿ ಇರಬಾರದು ಎಂದು ಸ್ವತಃ ಡಿ.ಕೆ.ಶಿವಕುಮಾರ್ ತಾಕೀತು ಮಾಡಿದ್ದರು. ಆದರೆ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ನಲಪಾಡ್ ಮಾತ್ರ ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಗೆ ಸಂಬಂಧಪಡದ ನಲಪಾಡ್ ಅವರನ್ನು ಹೊರಗೆ ಕಳುಹಿಸುವ ಧೈರ್ಯವನ್ನು ಯಾರೂ ಮಾಡಲಿಲ್ಲ.

ಅಧಿಕಾರಿಗಳ ಸಭೆಯಲ್ಲಿ ನಲಪಾಡ್; ಕಾಂಗ್ರೆಸ್ ಸೇರಲು ಮಾಧ್ಯಮದವರಿಗೆ ಡಿಕೆಶಿ ಆಹ್ವಾನ!!

ವ್ಯಕ್ತಿ ನಾಪತ್ತೆ

ನಂಜನಗೂಡು, ಆ.24–ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಘಟನೆ ನಂಜನಗೂಡು ತಾಲೂಕು ಹೆಗ್ಗಡಹಳ್ಳಿ ಗ್ರಾಮದಿಂದ ವರದಿಯಾಗಿದೆ.



ಗ್ರಾಮದ ರವಳಯ್ಯ (44) ಎಂಬಾತ ಆ.19ರಂದು ಮನೆಯಿಂದ ಹೊರ ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದು ಪತ್ನಿ ಲಕ್ಷ್ಮಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಈತನ ಬಗ್ಗೆ ಮಾಹಿತಿ ಇರುವವರು ನಂಜನಗೂಡು ಗ್ರಾಮಾಂತರ ಠಾಣೆ ದೂ.ಸಂ.08221–226259ನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.



ಎಡಿಸಿಯಾಗಿ ಪಿ.ಶಿವರಾಜು ಅಧಿಕಾರ ಸ್ವೀಕಾರ

ಮೈಸೂರು,ಆ.24–ಮೈಸೂರು ಜಿಲ್ಲೆಯ ನೂತನ ಅಪರ ಜಿಲ್ಲಾಧಿಕಾರಿಯಾಗಿ ಪಿ.ಶಿವರಾಜು ಗುರುವಾರ ಡಿಸಿ ಕಚೇರಿಯಲ್ಲಿ ನಿರ್ಗಮಿತ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ಅವರಿಂದ ಅಧಿಕಾರ ಸ್ವೀಕರಿಸಿದರು. ಪಿ.ಶಿವರಾಜು ಈ ಹಿಂದೆ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಸಹಾಯಕ ಪ್ರಾದೇಶಿಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದರು.

ಅಖಿಲ ಭಾರತ ಕಾಂಗ್ರೆಸ್ ಸಾಮಾಜಿಕ ಸಂಘಟನೆ ರಾಜ್ಯ ಉಪಾಧ್ಯಕ್ಷರಾಗಿ ವಿನೋದ್ ನೇಮಕ



ಮೈಸೂರು,ಆ.24–ಅಖಿಲ ಭಾರತ ಕಾಂಗ್ರೆಸ್ ಸಾಮಾಜಿಕ ಸಂಘಟನೆಯ ರಾಜ್ಯ ಉಪಾಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ಮೈಸೂರು ವಿಜಯನಗರ ನಿವಾಸಿ ಆರ್.ವಿನೋದ್ ಅವರನ್ನು ರಾಷ್ಟ್ರೀಯ ಅಧ್ಯಕ್ಷ ಡಾ.ಮೊಹಮದ್ ರಿಯಾಜ್ ನೇಮಕ ಮಾಡಿದ್ದಾರೆ. ಬಡತನ ನಿರ್ಮೂಲನೆ, ಬಡವರಿಗೆ ಮೂಲಸೌಕರ್ಯಗಳಾದ ಶಿಕ್ಷಣ, ಆರೋಗ್ಯ, ಆಹಾರ, ಬಟ್ಟೆ ಹಾಗೂ ಸೂರು ಕಲ್ಪಿಸಲು ನೆರವಾಗುವುದು ಈ ಸಂಘಟನೆ ಧ್ಯೇಯವಾಗಿದೆ.

ಹಸಿರು ನಮ್ಮ ಉಸಿರು

ಹಕ್ಕುಪತ್ರಕ್ಕೆ ಆಗ್ರಹಿಸಿ ಸ್ಲಂ ನಿವಾಸಿಗಳ ಪ್ರತಿಭಟನೆ



ಮಂಡ್ಯ, ಆ.24– ಮದ್ದೂರಿನ ಕೆಇಬಿ ಮುಂಭಾಗದ ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ ವಸತಿ ಕಲ್ಪಿಸುವಂತೆ ಆಗ್ರಹಿಸಿ ಶ್ರಮಿಕ ನಿವಾಸಿಗಳು ಮಂಡ್ಯದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಆಶ್ರಯದಲ್ಲಿ ನೂರಾರು ಮಂದಿ ಧರಣಿ ಆರಂಭಿಸಿದ್ದು, ದೇಶ ಸ್ವಚ್ಛಗೊಳಿಸುವ ಜನತೆಗೆ, ನಗರ ಕಟ್ಟಲು ದುಡಿಯುವ ಜನತೆಗೆ ವಾಸಕ್ಕೊಂದು ಸೂರಿಲ್ಲ. ಈ ದೇಶದ ಪ್ರಜೆಗಳು ನಾವು. ನಮಗೂ ಎಲ್ಲರಂತೆ ಬದುಕುವ ಸಂವಿಧಾನಬದ್ಧ ಹಕ್ಕು ಬೇಕೆಂದು ಆಗ್ರಹಿಸಿದರು.

ಮದ್ದೂರಿನ ಕೆಇಬಿ ಮುಂಭಾಗದ ಪ್ರದೇಶ ಸರ್ಕಾರದ ಜಾಗವಾಗಿದ್ದು, ಈ ಜಾಗವನ್ನು ಕರ್ನಾಟಕ ಕೊಳಚೆ ಪ್ರದೇಶಗಳ ಕಾಯ್ದೆ 1973ರ ಅಧಿನಿಯಮದ (3)ರ ಅಡಿ ಸ್ಲಂ ಪ್ರದೇಶ ಎಂದು ಘೋಷಿಸಿದ್ದು, ಸ್ಥಳೀಯ ತಾಲೂಕು ಆಡಳಿತ ಸ್ಥಳವನ್ನು ಹಸ್ತಾಂತರ ಮಾಡಿಕೊಂಡು ಹಕ್ಕುಪತ್ರ ನೀಡಿ ವಸತಿ ಯೋಜನೆ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾಡಳಿತ ತಕ್ಷಣ ಮದ್ದೂರು ತಮಿಳು ಕಾಲೋನಿ ಜಾಗವನ್ನು ಕೊಳಚೆ ಅಭಿವೃದ್ಧಿ ಮಂಡಳಿಗೆ ಹಸ್ತಾಂತರ ಮಾಡಬೇಕು. ಕಾಲೋನಿಯ 114 ಕುಟುಂಬಗಳನ್ನು ಸಮೀಕ್ಷೆ ಮಾಡಿ ಕೂಡಲೇ ಹಕ್ಕುಪತ್ರಗಳನ್ನು ನೀಡಬೇಕು. ಸಂಘ ಸಂಸ್ಥೆಗಳಿಂದ, ಭೂ–ವಿರೋಧಿ ಶಕ್ತಿಗಳಿಂದ, ಬಲಾಢ್ಯರಿಂದ ನಿವಾಸಿಗಳಿಗೆ ತೊಂದರೆ ಆಗದಂತೆ ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾಡಳಿತ ತುರ್ತು ಕ್ರಮ ವಹಿಸದಿದ್ದರೆ ವಸತಿ ಸಚಿವರನ್ನು ಭೇಟಿಯಾಗಿ ಸಮಸ್ಯೆ ಇತ್ಯರ್ಥಕ್ಕೆ ಮನವಿ ಮಾಡಲಾಗುವುದು. ಅಲ್ಲಿಯೂ ನ್ಯಾಯ ದೊರಕದಿದ್ದರೆ ಸೆ.1ರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಕಚೇರಿವರೆಗೆ ಪಾದಯಾತ್ರೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಸಿದ್ದರಾಜು, ಚಂದ್ರು ಕುಮಾರಿ, ಪುಟ್ಟಮ್ಮ ವೀರಮ್ಮ ಆನಂದ್‌ರಾಜ್, ಮಂಜು ಇತರಿದ್ದರು.

ಬೆದರಿಕೆ ಹಾಕುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಧರಣಿ



ಮಂಡ್ಯ, ಆ.24– ಸಾರ್ವಜನಿಕ ಸ್ಮಶಾನ ಉಳಿಸಲು ಹೋರಾಟ ಮಾಡುತ್ತಿರುವವರನ್ನು ನಿಂದಿಸಿ, ಬೆದರಿಕೆ ಹಾಕಿರುವವರ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಗೆಜ್ಜಲಗೆರೆ ಕಾಲೋನಿ ನಿವಾಸಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದ ನಿವಾಸಿಗಳು, ಗೆಜ್ಜಲಗೆರೆ ಕಾಲೋನಿಯಲ್ಲಿ ಸಾರ್ವಜನಿಕ ಸ್ಮಶಾನ ಕಬಳಿಸಲು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಸರ್ವೆ ನಂ.203 ಸ್ಮಶಾನದ ಬಗ್ಗೆ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಸರ್ವೇ ನಂ.139ರ ಸರ್ಕಾರಿ ಕಟ್ಟೆ ಜಾಗ ಉಳಿಸುವ ಬಗ್ಗೆ ತಹಸೀಲ್ದಾರ್‌ಗೆ ಮನವಿ ಮಾಡಲಾಗಿದೆ. ಈ ಎರಡೂ ಜಾಗ ಕಬಳಿಸಲು ಮುಂದಾಗಿರುವ ಕೆಲ ಪಟ್ಟಭದ್ರರು ಬೆದರಿಕೆ ಹಾಕಿ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಕಳೆದ 23 ರಂದು ಜಾಗ ಉಳಿಸಲು ಹೋರಾಡುತ್ತಿರುವ ಜಿ.ಪಿ.ಶಿವಲಿಂಗಯ್ಯ, ಮಂಜುನಾಥ್, ಜಯವೀರೇಗೌಡರಿಗೆ ನ್ಯಾಯಾಲಯಕ್ಕೆ ಹೋಗಬೇಡಿ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆ ಹಾಕಿದ್ದು ಈ ಬಗ್ಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ಗ್ರಾಮದ ಅಶೋಕ, ಸತೀಶ್, ಹರೀಶ್, ಸುರೇಶ್, ಆದಿ ಪ್ರಸಾದ್ ಮತ್ತು ನಾಗರಾಜ್ ವಿರುದ್ಧ ದೂರು ದಾಖಲಿಸಿದ್ದು, ಇವರುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು, ಗ್ರಾಮದ ಮುಖಂಡರು ಮತ್ತು ಜನತೆಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಜಿ.ಪಿ.ಶಿವಲಿಂಗಯ್ಯ, ಜಿ.ಎನ್.ಮಂಜುನಾಥ್, ದೇವರಾಜ್, ಜಯ ವೀರೇಗೌಡ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಹೊರಗಿನವರಿಗೆ ಮೀನುಗಾರಿಗೆ ಗುತ್ತಿಗೆ ಖಂಡಿಸಿ ಪ್ರತಿಭಟನೆ

ಮಂಡ್ಯ, ಆ.24– ಶ್ರೀರಂಗಪಟ್ಟಣ ತಾಲೂಕು ಅರಕೆರೆ ಗ್ರಾಮದ ದೊಡ್ಡಕೆರೆ ಮೀನುಗಾರಿಕೆ ಗುತ್ತಿಗೆಯನ್ನು ಸ್ಥಳೀಯರಿಗೆ ನೀಡದೆ ಹೊರ ಜಿಲ್ಲೆಯವರಿಗೆ ನೀಡಿರುವ ಕ್ರಮ ವಿರೋಧಿಸಿ ಅರಕೆರೆ ಮೀನುಗಾರರ ಸಹಕಾರ ಸಂಘದ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.



ಗುರುವಾರ ನಗರದ ಮೀನುಗಾರಿಕೆ ಇಲಾಖೆ ಎದುರು ಪ್ರತಿಭಟಿಸಿ ಜಿಲ್ಲಾ ನಿರ್ದೇಶಕ ಬಾಬಾ ಸಾಹೇಬ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳೀಯ ವೃತ್ತಿಪರ ಮೀನುಗಾರರು ಸದಸ್ಯರಾಗಿರುವ ಸಂಘಕ್ಕೆ ಮೀನುಗಾರಿಕೆ ಗುತ್ತಿಗೆ ನೀಡದೆ ಮೈಸೂರಿನ ಒಳನಾಡು ಮೀನುಗಾರರ ಅಭಿವೃದ್ಧಿ ಸಂಘಕ್ಕೆ ಗುತ್ತಿಗೆ ನೀಡಲಾಗಿದೆ. ಆ ಮೂಲಕ ಕಳೆದ ದಶಕದಿಂದ ಗುತ್ತಿಗೆ ಮಾಡುತ್ತಿದ್ದ ಮೀನುಗಾರರನ್ನು ಕಡೆಗಣಿಸಿದ್ದಾರೆ ಎಂದು ಆರೋಪಿಸಿದರು.

ಸಹಕಾರ ಇಲಾಖೆ ನಿಯಮಾವಳಿಯಂತೆ ಅರಕೆರೆ ಮೀನುಗಾರರ ಸಹಕಾರ ಸಂಘ ನಡೆದುಕೊಂಡು ಬರುತ್ತಿದೆ. ಆದರೆ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಇಲಾಖೆಗೆ ಪತ್ರ ಬರೆದು ಅರಕೆರೆ ಮೀನುಗಾರರ ಸಹಕಾರ ಸಂಘದವರು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿಯಿಂದ 20 ವರ್ಷಗಳಿಂದ 9 ಲಕ್ಷ ರೂ. ಸಾಲ ಪಡೆದು ಸಂಘದ ನಗದು ಪುಸ್ತಕದಲ್ಲಿ ನಮೂದಿಸದೇ ಸಂಘ ಲಾಭದಾಯಕವಾಗಿದೆ ಎಂದು ಸುಳ್ಳು ಲೆಕ್ಕಪತ್ರ ಬರೆದುಕೊಂಡು ಮೀನುಗಾರಿಕೆ ಇಲಾಖೆಯಿಂದ ಅರಕೆರೆ ಕೆರೆ ಪಡೆದುಕೊಂಡಿರುವುದರಿಂದ, ಸಂಘದ ಕಳೆದ 10 ವರ್ಷಗಳ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಿಸುವಂತೆ ಕೋರಿದ್ದಾರೆ. ಅದರಂತೆ ಸದರಿ ಸಂಘಕ್ಕೆ ಯಾವುದೇ ಸೌಲಭ್ಯ ನೀಡದಂತೆ ಮೀನುಗಾರಿಕೆ ಇಲಾಖೆ ಅಧಿಕಾರಿಗಳಿಗೆ ನಿರ್ಬಂಧ ಹಾಕಿದ್ದಾರೆ ಎಂದು ದೂರಿದರು.

ಸಹಕಾರ ಸಂಘದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಬಂದಿರುವ ಸ್ಥಳೀಯ ಸಂಘ ಬಿಟ್ಟು ವೃತ್ತಿಪರ ಮೀನುಗಾರರಲ್ಲದ ಸದಸ್ಯರನ್ನು ಹೊಂದಿರುವ ಸಂಘಕ್ಕೆ ಗುತ್ತಿಗೆ ನೀಡುವ ಮೂಲಕ ಗಂಗಾಮತಸ್ಥ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ. ಹೊರ ಜಿಲ್ಲೆಯ ಸಂಘಕ್ಕೆ ಗುತ್ತಿಗೆ ನೀಡಿರುವುದನ್ನು ರದ್ದುಪಡಿಸಿ ಸ್ಥಳೀಯ ಮೀನುಗಾರರಿಗೆ ಅನುಕೂಲವಾಗುವಂತೆ ಸ್ಥಳೀಯ ಸಂಘಕ್ಕೆ ಗುತ್ತಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷ ಚಿಕ್ಕಣ್ಣ, ಮುಖಂಡರಾದ ಜಿ.ಎಸ್.ಸಿದ್ದಯ್ಯ, ಈರಯ್ಯ, ಉಮೇಶ್ ಹಾಡ್ಯ ಇತರರಿದ್ದರು.

ಆ.27ಕ್ಕೆ ಕೆ.ಆರ್.ಪೇಟೆಗೆ ಲಕ್ಷ್ಮಿ ಹೆಬ್ಬಾಳ್ಕರ್ ಭೇಟಿ

ಕೆ.ಆರ್.ಪೇಟೆ, ಆ.24– ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಆ.27 ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣಕ್ಕೆ ಭೇಟಿ ನೀಡಿ, ಗೃಹ ಲಕ್ಷ್ಮಿ ಯೋಜನೆ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ



ಎಂದು ಕಾಂಗ್ರೆಸ್ ಮುಖಂಡ ವಿಶ್ವನಾಥ್ ತಿಳಿಸಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಐಸಿಸಿ ನಾಯಕ ರಾಹುಲ್ ಗಾಂಧಿ ಆ.30ರಂದು ಮೈಸೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಲಿದ್ದಾರೆ. ಈ ಬಗ್ಗೆ ಜಾಗೃತಿ ಮೂಡಿಸಲು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕೆ.ಆರ್.ಪೇಟೆಗೆ ಆಗಮಿಸುತ್ತಿದ್ದಾರೆ. ಮೈಸೂರಿನ ಕಾರ್ಯಕ್ರಮದಲ್ಲಿ ತಾಲೂಕಿನ ಸಾವಿರಾರು ಮಹಿಳೆಯರು ಭಾಗವಹಿಸಬೇಕೆಂದು ಮನವಿ ಮಾಡಿದರು.

3 ತಿಂಗಳಲ್ಲಿ ಅಬಕಾರಿ ಇಲಾಖೆಯಿಂದ 259 ಪ್ರಕರಣ ದಾಖಲು

ಮಂಡ್ಯ, ಆ.24– ಅಕ್ರಮ ಮದ್ಯ ಸಾಗಾಣೆ, ಮಾರಾಟ ಹಾಗೂ ಗಾಂಜಾ ಮಾರಾಟಕ್ಕೆ ಸಂಬಂಧಿಸಿದಂತೆ ಕಳೆದ ಜೂ.1ರಿಂದ ಆ.23ರವರೆಗೆ ಜಿಲ್ಲಾ ಅಬಕಾರಿ ಇಲಾಖೆ ಜಿಲ್ಲಾದ್ಯಂತ 259 ಪ್ರಕರಣ ದಾಖಲಿಸಿದೆ ಎಂದು ಜಿಲ್ಲಾ ಅಬಕಾರಿ ಉಪ ಆಯುಕ್ತೆ ಡಾ. ಮಹಾದೇವಿ ಬಾಯಿ ತಿಳಿಸಿದರು.



ಗುರುವಾರ ಜಿಲ್ಲಾ ಅಬಕಾರಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 259 ಪ್ರಕರಣಗಳ ಪೈಕಿ 3 ಘೋರ ಪ್ರಕರಣಗಳಾಗಿದ್ದರೆ, 69 ಗಂಭೀರ ಪ್ರಕರಣಗಳಾಗಿವೆ. ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ 184 ಪ್ರಕರಣ ದಾಖಲಿಸಿದ್ದು, ಒಟ್ಟಾರೆ ಪ್ರಕರಣದಲ್ಲಿ 185 ಮಂದಿಯನ್ನು ಬಂಧಿಸಲಾಗಿದೆ ಎಂದು ವಿವರಿಸಿದರು. ಅಕ್ರಮ ಮದ್ಯ ಮಾರಾಟ, ಸಾಗಾಣಿಕೆಗೆ ಸಂಬಂಧಿಸಿದಂತೆ 112 ಲೀಟರ್ ಮದ್ಯ ಮತ್ತು 16 ಲೀಟರ್ ಬಿಯರ್ ನಾಶ ಪಡಿಸಲಾಗಿದೆ. ಜೊತೆಗೆ ಗಾಂಜಾ ಮಾರಾಟ ಪ್ರಕರಣ ದಲ್ಲಿ 15 ಮಂದಿಯನ್ನು ಬಂಧಿಸಲಾಗಿದೆ ಎಂದರು.

ಅಕ್ರಮ ಮದ್ಯ ಸಾಗಾಣೆ ಹಾಗೂ ಮಾರಾಟ ತಡೆಯಲು ಅಬಕಾರಿ ಇಲಾಖೆ ಹದ್ದಿನ ಕಣ್ಣಿಟ್ಟಿದ್ದು, ಜಿಲ್ಲೆಯ 6 ಕಡೆ ವಿಭಾಗೀಯ ಕಚೇರಿ ತೆರೆದು 9 ತಂಡಗಳು ಅಕ್ರಮ ತಡೆಯಲು ಹಗಲು– ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅಕ್ರಮ ಕಂಡು ಬಂದರೆ ಕಠಿಣ ಕಾನೂನು ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಎಚ್ಚರಿಸಿದರು.

ಮದ್ಯದ ದರ ಏರಿಕೆಯಾದ ಮೇಲೆ ಜಿಲ್ಲೆಯಲ್ಲಿ ಮದ್ಯ ಖರೀದಿಗೆ ಪೆಟ್ಟು ಬಿದ್ದಿದ್ದು, ತಿಂಗಳಿಗೆ 69 ಸಾವಿರದಷ್ಟು ಬಾಕ್ಸ್ ಮಾರಾಟವಾಗುತ್ತಿದ್ದ ಮದ್ಯದಲ್ಲಿ ಕುಂಠಿತವಾಗಿದೆ. ಕಳೆದ ವರ್ಷ 1,73,055 ಬಾಕ್ಸ್ ಮಾರಾಟವಾಗಿತ್ತು. ಆದರೆ ಈ ವರ್ಷ ಕೇವಲ 1,4,197 ಬಾಕ್ಸ್ ಅಷ್ಟೇ ಮಾರಾಟವಾಗಿದೆ. ತಿಂಗಳಿಗೆ ಕನಿಷ್ಟ ಅಂದಾಜು 7ರಿಂದ 8 ಕೋಟಿ ನಷ್ಟವಾಗುತ್ತಿದೆ ಎಂದು ವಿವರಿಸಿದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ

ಮಂಡ್ಯ, ಆ.24– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಹಾಗೂ ರೋಟರಿ ಕ್ಲಬ್ ಮಂಡ್ಯ ಸಂಯುಕ್ತಾಶ್ರಯದಲ್ಲಿ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಜನ್ಮದಿನದಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕ್ರೀಡಾಕೂಟವನ್ನು ಆ.29 ರಂದು ಬೆಳಗ್ಗೆ 8.30ಕ್ಕೆ ನಗರದ ಸರ್.ಎಂ. ವಿಶ್ವೇಶ್ವರಯ್ಯ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ. ಶಾಸಕರಾದ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ಹಾಗೂ ಇನ್ನಿತರರ ಗಣ್ಯರು ಭಾಗವಹಿಸಲಿದ್ದಾರೆ.

ಗುಮ್ಮನಹಳ್ಳಿ ಗ್ರಾಪಂ ಅಧ್ಯಕ್ಷರಿಗೆ ಸಿಎಸ್‌ಪಿ ಅಭಿನಂದನೆ

ಚಿನಕುರಳಿ, ಆ.24– ಗುಮ್ಮನಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಾಗಿಮುದ್ದನಹಳ್ಳಿ ರಾಜೇಗೌಡ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.



ಬಳಿಕ ಮಾತನಾಡಿದ ಮಾಜಿ ಸಚಿವರು, ಗ್ರಾಪಂಗಳು ಸ್ಥಳೀಯ ಸರ್ಕಾರವಾಗಿದ್ದು ಜನರಿಗೆ ಅನುಕೂಲ ಕಲ್ಪಿಸುವ ಸಾಕಷ್ಟು ಕಾರ್ಯಕ್ರಮಗಳಿವೆ. ಗ್ರಾಪಂ ಅಧ್ಯಕ್ಷರು, ಸದಸ್ಯರು ಪಂಚಾಯಿತಿ ಮೂಲಕ ಸಿಗುವ ಸೌಲಭ್ಯಗಳನ್ನು ಜನರಿಗೆ ಒದಗಿಸಿಕೊಟ್ಟು ಗ್ರಾಮಗಳನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಬೇಕು. ರಾಜಕೀಯ ಹೊರತುಪಡಿಸಿ ಎಲ್ಲರೂ ಜೊತೆಗೂಡಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಅಭಿವೃದ್ಧಿ ಪಡಿಸಬೇಕು ಎಂದರು.

ಈ ವೇಳೆ ನಿವೃತ್ತ ಪ್ರಾಂಶುಪಾಲ ಎಂ.ಎನ್.ಶಿವಣ್ಣ, ಆರ್.ಎಂ. ಪುಟ್ಟರಾಜು, ಮಾದೇಗೌಡ, ಸಿದ್ದೇಗೌಡ, ಸುನೀಲ್, ಶಿವಕುಮಾರ್, ಜಯರಾಮು, ಗಿರೀಶ್, ಪರಮೇಶ್, ಜಗದೀಶ್, ದೇವರಾಜು, ಆದಿತ್ಯ, ಗ್ರಾಪಂ ಮಾಜಿ ಅಧ್ಯಕ್ಷೆ ಭವಾನಿ ಸುನೀಲ್, ಸದಸ್ಯರಾದ ಎಂ.ಎಸ್. ರಘು, ವರದರಾಜು, ಚಂದ್ರು, ಶ್ರೀನಿವಾಸ್, ಜಯರಾಮು, ಲಕ್ಷ್ಮಮ್ಮ, ರಾಧ, ಶಕುಂತಲ, ಅಶ್ವಿನಿ ಪುರುಷೋತ್ತಮ್, ಸ್ವಾಮಿ ಸೇರಿದಂತೆ ಹಲವರಿದ್ದರು.

ಕಾಂಗ್ರೆಸ್ ಶಾಸಕ ಡಾ. ಅಜಯ್ ಸಿಂಗ್ ಮನೆಯ ಆವರಣದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ವಾಚ್‌ಮನ್ ಶವ ಪತ್ತೆ

ಕಲಬುರಗಿ, ಆ.24– ಇಲ್ಲಿನ ಶರಣನಗರ ಬಡಾವಣೆಯಲ್ಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅಧ್ಯಕ್ಷರೂ ಆಗಿರುವ ಜೇವರ್ಗಿ ಕಾಂಗ್ರೆಸ್ ಶಾಸಕ ಡಾ. ಅಜಯ್ ಸಿಂಗ್ ಅವರ ನಿವಾಸದ ಆವರಣದಲ್ಲಿ ಗುರುವಾರ ಮರಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ವ್ಯಕ್ತಿಯ ಶವ ಪತ್ತೆಯಾಗಿದೆ.

ಮೃತರನ್ನು ಅಜಯ್ ಸಿಂಗ್ ಅವರ ಮನೆಯ ವಾಚ್‌ಮನ್ ಆಗಿದ್ದ 32 ವರ್ಷದ ದೇವೇಂದ್ರ ಎಂದು ಗುರುತಿಸಲಾಗಿದೆ. ತಾಲೂಕಿನ ಪಟ್ಟಣ ಗ್ರಾಮದ ನಿವಾಸಿಯಾದ ದೇವೇಂದ್ರ ಅವರು ಕಳೆದ ನಾಲ್ಕೈದು ವರ್ಷಗಳಿಂದ ಡಾ. ಅಜಯ್ ಸಿಂಗ್ ಅವರ ಮನೆಯಲ್ಲಿ ವಾಚ್‌ಮನ್ ಆಗಿ ಕೆಲಸ ಮಾಡುತ್ತಿದ್ದರು ಎನ್ನಲಾಗುತ್ತಿದೆ.

ಬುಧವಾರ ತಡ ರಾತ್ರಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಗುರುವಾರ ಬೆಳಿಗ್ಗೆ ಅಜಯ್ ಸಿಂಗ್ ಅವರ ಮನೆಯ ಅಡುಗೆ ತಯಾರಕ ಮರದಲ್ಲಿನ ಶವ ಕಂಡು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ಬ್ರಿಕ್ಸ್ ಶೃಂಗಸಭೆ 2023: 'ಬ್ರಿಕ್ಸ್' ವಿಸ್ತರಣೆ, ಇರಾನ್, ಸೌದಿ ಅರೇಬಿಯಾ ಸೇರಿದಂತೆ ಆರು ದೇಶಗಳಿಗೆ ಖಾಯಂ ಸದಸ್ಯತ್ವ!

ಜೋಹಾನ್ಸ್‌ಬರ್ಗ್, ಆ.24– ಇಲ್ಲಿಯವರೆಗೆ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾದ ಐದು ದೇಶಗಳ ಸದಸ್ಯತ್ವ ಹೊಂದಿರುವ 'ಬ್ರಿಕ್ಸ್' ಕೂಟ ಈಗ ಮತ್ತಷ್ಟು ದೊಡ್ಡದಾಗಲಿದೆ. ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ 15ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಅರ್ಜೆಂಟೀನಾ, ಈಜಿಪ್ಟ್, ಇರಾನ್, ಸೌದಿ ಅರೇಬಿಯಾ, ಇಥಿಯೋಪಿಯಾ ಮತ್ತು ಯುಎಇ ಬ್ರಿಕ್ಸ್ ಖಾಯಂ ಸದಸ್ಯರನ್ನಾಗಿ ಮಾಡಲು ಒಪ್ಪಿಕೊಂಡಿವೆ. ಇದನ್ನು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಘೋಷಿಸಿದರು.



2001ರಲ್ಲಿ ಬ್ರಿಕ್ಸ್ ಕೂಟ ಅಸ್ತಿತ್ವಕ್ಕೆ ಬಂದಿತ್ತು. ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ ಒಟ್ಟಾಗಿ 'BRIC' ಅನ್ನು ಸ್ಥಾಪಿಸಿಕೊಂಡಿದ್ದವು. ಭವಿಷ್ಯದ ಆರ್ಥಿಕ ಸಾಮರ್ಥ್ಯದೊಂದಿಗೆ ಉದಯೋನ್ಮುಖ ಮಾರುಕಟ್ಟೆಗಳ ಸಾಮೂಹಿಕ ಪ್ರಾತಿನಿಧ್ಯವಾಗಿ ಇದನ್ನು ಪ್ರಸ್ತುತಪಡಿಸಲಾಗಿದೆ. 2010ರಲ್ಲಿ ಮಹತ್ವದ ಬೆಳವಣಿಗೆಯೊಂದರಲ್ಲಿ ದಕ್ಷಿಣ ಆಫ್ರಿಕಾ ಕೂಟವನ್ನು ಸೇರಿ ಕೊಂಡಿತು. ಅಂದಿನಿಂದ 'BRIC' ಹೆಸರನ್ನು 'BRICS' ಆಗಿ ಬದಲಾಯಿತು.

ಬ್ರಿಕ್ಸ್ ಆರ್ಥಿಕತೆ ಆಶಾವಾದದ ಸಂಕೇತವಾಗಿದೆ. ಸಾಂಪ್ರದಾಯಿಕ ಸಂಸ್ಥೆಗಳ ಪ್ರಾಬಲ್ಯವನ್ನು ಪ್ರಶ್ನಿಸಲು ಪರ್ಯಾಯ ಜಾಗತಿಕ ಕ್ರಮವನ್ನು ನೀಡುತ್ತದೆ ಎಂದು ನಂತರ ಹೇಳಲಾಯಿತು. ಈಗ ಮುಂದಿನ ವರ್ಷದಿಂದ ಅದನ್ನು 11 ಸದಸ್ಯರ ಗುಂಪಿಗೆ ವಿಸ್ತರಿಸಲಾಗಿದೆ. 15ನೇ ಬ್ರಿಕ್ಸ್ ಶೃಂಗಸಭೆಯ ಆತಿಥ್ಯ ವಹಿಸುತ್ತಿರುವ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರು ಬ್ರಿಕ್ಸ್‌ಗೆ ಹೊಸ ಸದಸ್ಯರ ಪ್ರವೇಶದ ಅನುಮೋದನೆಯ ಬಗ್ಗೆ ಗುರುವಾರ ಮಾಹಿತಿ ನೀಡಿದರು. ಬ್ರಿಕ್ಸ್‌ನ ಮೊದಲ ಹಂತದ ವಿಸ್ತರಣೆಯಲ್ಲಿ ಅರ್ಜೆಂಟೀನಾ, ಈಜಿಪ್ಟ್, ಇರಾನ್, ಸೌದಿ ಅರೇಬಿಯಾ, ಇಥಿಯೋಪಿಯಾ ಮತ್ತು ಯುಎಇಗೆ ಸಂಸ್ಥೆಯ ಶಾಶ್ವತ ಸದಸ್ಯತ್ವ ನೀಡಲು ಒಪ್ಪಿಗೆ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

2024ರ ಜನವರಿ 1ರಿಂದ ಅವರ ಸದಸ್ಯತ್ವವು ಜಾರಿಗೆ ಬರಲಿದೆ ಎಂದು ಅವರು ಹೇಳಿದರು. ಅಸ್ತಿತ್ವದಲ್ಲಿರುವ ಎಲ್ಲಾ ಐದು ಬ್ರಿಕ್ಸ್ ಸದಸ್ಯರು ವಿಸ್ತರಣೆಯ ನಿಯತಾಂಕಗಳನ್ನು ಒಪ್ಪಿಕೊಂಡಿದ್ದಾರೆ. ಮೊದಲ ಹಂತದ ವಿಸ್ತರಣೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಮುಂದೆಯೂ ಮುಂದುವರಿಯಲಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಸಹ ಬ್ರಿಕ್ಸ್ ವಿಸ್ತರಣೆಗೆ ಸಹ ದೇಶಗಳ ನಡುವೆ ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

ನಾಳೆ ಗುರು ಅಭಿವಂದನೆ

ಮೈಸೂರು, ಆ.24(ಜಿಎ)– ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ಶಾಲೆಯ ಸ್ಥಾಪಕರಾದ ತಬಲಾ ವಾದಕ ಭೀಮಾಶಂಕರ ಬಿದನೂರ ಆ.26ರಂದು ಗುರು ಅಭಿವಂದನೆ ಏರ್ಪಡಿಸಲಾಗಿದೆ.



ಅಂದು ಸಂಜೆ 5.30ಕ್ಕೆ ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ಸಭಾಂಗಣದಲ್ಲಿ ಭೀಮಾಶಂಕರ ಬಿದನೂರ ಅವರ ಶಿಷ್ಯ ರೋಹಿತ್ ಕಳಲೆ ಅವರಿಂದ ಗುರು ಅಭಿವಂದನೆ ಕಾರ್ಯಕ್ರಮ ಆಯೋಜಿಸಿದ್ದು, ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವಿದ್ಯಾರ್ಥಿಗಳಿಂದ ತಬಲಾ ವಾದನ, ಪಂ.ರವಿಶಂಕರ್ ಮಿಶ್ರಾ ಅವರಿಂದ ಕೊಳಲು ವಾದನ, ಭೀಮಾಶಂಕರ ಬಿದನೂರ ಹಾಗೂ ಕು.ರೋಹಿತ್ ಕಳಲೆ ಅವರಿಂದ ತಬಲಾ ಜುಗಲ್ ಬಂದಿ ನಡೆಯಲಿದೆ. ನಂತರ ಪಂ.ವೀರಭದ್ರಯ್ಯ ಹಿರೇಮಠ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಕ್ಕೆ ಮೃತ್ಯುಂಜಯ ಹಿರೇಮಠ ಹಾಗೂ ವಿಘ್ನೇಶ್ ಭಾಗ್ವತ್ ಹಾರ್ಮೋನಿಯಂ ಸಾಥ್ ನೀಡಲಿದ್ದಾರೆ.

ಮೂರನೇ ಪುಟದಿಂದ

ರಾಷ್ಟ್ರೀಯ ಪ್ರಶಸ್ತಿ

ಗಾಯಕಿ ಪ್ರಶಸ್ತಿ (ಇರವಿನ್ ನಿಜಲ್– ಚಿತ್ರದ ಮಾಯವ ಛಾಯವ ಹಾಡು). ಕಾಲ ಭೈರವ – ಅತ್ಯುತ್ತಮ ಪುರುಷ ಹಿನ್ನೆಲೆ ಗಾಯಕ ಪ್ರಶಸ್ತಿ (ಆರ್‌ಆರ್‌ಆರ್ ಸಿನಿಮಾದ ಕೋಮುರಂ ಭೀಮುಡೋ). ಬಾಲಿವುಡ್‌ನ ಲವೆಬಲ್ ಸಿದ್ಧಾರ್ಥ್ ಮಲ್ಹೋತ್ರಾ–ಕಿಯಾರಾ ಅಡ್ವಾಣಿ ಮುಖ್ಯಭೂಮಿಕೆಯ ಸೂಪರ್ ಹಿಟ್ ಸಿನಿಮಾ ಸ್ಪೆಷಲ್ ಜ್ಯೂರಿ ಅವಾರ್ಡ್ ಪಡೆದುಕೊಂಡಿದೆ. 'ದಿ ಕಾಶ್ಮೀರ್ ಫೈಲ್ಸ್' ರಾಷ್ಟ್ರೀಯ ಏಕೀಕರಣದ ಸಲುವಾಗಿ ಬೆಸ್ಟ್ ಫೀಚರ್ ಫಿಲ್ಮ್ ಎನಿಸಿಕೊಂಡಿದ್ದು, ಅತ್ಯುತ್ತಮ ಚಲನಚಿತ್ರಕ್ಕಾಗಿ ನರ್ಗೀಸ್ ದತ್ ಪ್ರಶಸ್ತಿ ಗೆದ್ದಿದೆ.

ಮೈಸೂರಲ್ಲಿ 'ಸ್ವದೇಶಿ' ಕೇಂದ್ರ

ಮಾಡಿದ್ದಾರೆ. ಇದರ ಸರ್ವೇ ಮಾಡಿಸಿ ಎಲ್ಲಾ ಒತ್ತುವರಿ ತೆರವಿಗೆ ಕ್ರಮ ಜರುಗಿಸಲಾಗುವುದು ಎಂದರು. ಕೈಗಾರಿಕೆ ಸ್ಥಾಪನೆಗಾಗಿ ನಿರ್ಮಿಸಿರುವ ಶೆಡ್‌ಗಳು ಶೇ.77ರಷ್ಟು ಬಳಕೆಯಾಗುತ್ತಿವೆ. ಕೈಗಾರಿಕಾ ನಿವೇಶನ ಕೇವಲ 54ರಷ್ಟು ಮಾತ್ರ ಬಳಕೆಯಾಗಿವೆ. ಅದರಲ್ಲೂ ಕೆಲವರು ಮಂಜೂರಾದ ನಿವೇಶನವನ್ನು ಬಾಡಿಗೆ ನೀಡಿದ್ದಾರೆ. ಅನ್ಯ ಉದ್ದೇಶಕ್ಕೂ ಬಳಸಿಕೊಂಡಿದ್ದಾರೆ. ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ ಸೇರಿದಂತೆ ಪ್ರಮುಖ ನಗರಗಳಲ್ಲಿ ಮಾತ್ರ ಸಣ್ಣ ಕೈಗಾರಿಕೆಗಳ ನಿವೇಶನ ಮತ್ತು ಶೆಡ್‌ಗಳಿಗೆ ಬೇಡಿಕೆ ಇದೆ. ಉಳಿದ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಕೇಳುವವರೇ ಇಲ್ಲದಂತಾಗಿದೆ ಎಂದರು. ಬೇಡಿಕೆ ಇರುವ ಕಡೆಗಳಲ್ಲಿ ಮಾತ್ರ ಕೆಐಎಡಿಬಿಯಿಂದ ಜಾಗ ಪಡೆದು ವಸಾಹತು ಸ್ಥಾಪಿಸುತ್ತೇವೆ. ಕೋವಿಡ್ ನಂತರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಮತ್ತು ತಯಾರಾದ ಉತ್ಪನ್ನಗಳು ಮಾರಾಟವಾಗದೆ, ಬಹುತೇಕ ಸಣ್ಣ ಕೈಗಾರಿಕೆಗಳು ಅವಸಾನದ ಹಾದಿ ಹಿಡಿದಿವೆ.

ದಾಖಲೆಯೊಂದಿಗೆ ಅರ್ಜಿ ಸಲ್ಲಿಸಿ

ಭಾವಚಿತ್ರ, ಅರ್ಜಿದಾರರ ಬಿಪಿಎಲ್ ಪಡಿತರ ಚೀಟಿ, ಅರ್ಜಿದಾರರ ಆಧಾರ್ ಗುರುತಿನ ಚೀಟಿ(ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಆಗಿರಬೇಕು), ಬ್ಯಾಂಕ್ ಪಾಸ್ ಪುಸ್ತಕದ ಮೊದಲ ಪುಟದ ಪ್ರತಿ, ಅರ್ಜಿದಾರರು ಚಿಕಿತ್ಸೆ ಪಡೆದಿರುವ ಆಸ್ಪತ್ರೆಯ ಸೀಲು ಸಹಿ ಇರುವ ಅಂತಿಮ ಮೂಲ ಬಿಲ್ಲುಗಳು, ಆಸ್ಪತ್ರೆಯ ಬಿಡುಗಡೆ ಸಾರಾಂಶ(ಡಿಸ್ಚಾರ್ಜ್ ಸಮ್ಮರಿ) ಪತ್ರದ ಪ್ರತಿ, ಅರ್ಜಿದಾರರು ಚಿಕಿತ್ಸೆ ಪಡೆಯಬೇಕಾದಲ್ಲಿ ಆಸ್ಪತ್ರೆಯ ಚಿಕಿತ್ಸಾ ವೆಚ್ಚದ ಮೂಲ ಅಂದಾಜು ಪಟ್ಟಿ ಸಲ್ಲಿಸಬೇಕು. ಹಾಗೆಯೇ ಅರ್ಜಿದಾರರ ಅಥವಾ ಅವರ ಕುಟುಂಬ ವರ್ಗದವರ ಬಳಕೆಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ತಿಳಿಸಿದ್ದಾರೆ.

ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ

ತಂತ್ರಜ್ಞಾನ ಇಲಾಖೆ ನಿರ್ದೇಶಕ ದರ್ಶನ್, ಕೇನ್ಸ್ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಂಜೀವ್ ಹಾಜರಿದ್ದರು.

ಐಬಿಸಿ ಜೊತೆ ಒಪ್ಪಂದ: ಮರುಬಳಕೆ ಎಲೆಕ್ಟ್ರಿಕ್ ಬ್ಯಾಟರಿ ತಯಾರಿಸುವ ಇಂಟರ್ ನ್ಯಾಷನಲ್ ಬ್ಯಾಟರಿ ಕಂಪನಿಯಲ್ಲಿ (ಐಬಿಸಿ) ರಾಜ್ಯ ಸರ್ಕಾರ 8,000 ಕೋಟಿ ರೂ. ಹೂಡಿಕೆಗೆ ಅವಕಾಶ ಮಾಡಿಕೊಡಲು ಆ.8ರಂದು ಒಡಂಬಡಿಕೆ ಮಾಡಿಕೊಂಡಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸಮ್ಮುಖದಲ್ಲಿ ಒಪ್ಪಂದಕ್ಕೆ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ಐಬಿಸಿ ಇಂಡಿಯಾ ಪರವಾಗಿ ಅದರ ಭಾರತದ ವ್ಯವಹಾರಗಳ ಮುಖ್ಯಸ್ಥ ವೆಂಕಟೇಶ ವಲ್ಲೂರಿ ಸಹಿ ಹಾಕಿದ್ದಾರೆ. ಮರುಬಳಕೆಗೆ ಬರುವಂತಹ ಲಿಥಿಯಾನ್ ಬ್ಯಾಟರಿಗಳ ಉತ್ಪಾದನೆಯನ್ನು ಈ ಕಂಪನಿಯು ಇನ್ನೊಂದು ವರ್ಷದಲ್ಲಿ ರಾಜ್ಯದಲ್ಲಿ ಪ್ರಾರಂಭಿಸಲಿದೆ. ಈ ಉದ್ದೇಶಕ್ಕಾಗಿ ಕಂಪನಿಯ ಕೋರಿಕೆಯಂತೆ ಬೆಂಗಳೂರು ಗ್ರಾಮಾಂತರ ವಲಯದಲ್ಲಿ 100 ಎಕರೆ ಜಮೀನು ಕೊಡಲು ಸರ್ಕಾರ ತೀರ್ಮಾನಿಸಿದೆ.

ನಾರ್ವೆಯ ಮ್ಯಾಗ್ನಸ್ ಮುಡಿಗೆ ಚೊಚ್ಚಲ ಚೆಸ್ ವಿಶ್ವಕಪ್ ಕಿರೀಟ

ವಿರೋಚಿತ ಸೋಲು ಕಂಡ ಪ್ರಜ್ಞಾನಂದ



ಬಾಕು (ಅಜರ್‌ಬೈಜಾನ್), ಆ.24– ತೀವ್ರ ಕುತೂಹಲ ಕೆರಳಿಸಿದ್ದ ಫಿಡೆ ಚೆಸ್ ವಿಶ್ವಕಪ್‌ನಲ್ಲಿ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಚಾಂಪಿಯನ್ ಆಗಿ ಹೊರಹೊಮ್ಮಿದರು. ಗುರುವಾರ ನಡೆದ ಟೈ–ಬ್ರೇಕ್ ಪಂದ್ಯದಲ್ಲಿ ಭಾರತದ ಆರ್.ಪ್ರಜ್ಞಾನಂದ ವೀರೋಚಿತ ಸೋಲು ಕಂಡಿದ್ದು, ಫಿಡೆ ಚೆಸ್ ವಿಶ್ವಕಪ್ ರನ್ನರ್ ಅಪ್ ಪ್ರಶಸ್ತಿಯಾದ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟರು.

ಭಾರತದ ಭರವಸೆಯ ಆಟಗಾರ, 18 ವರ್ಷದ ಆರ್. ಪ್ರಜ್ಞಾನಂದ ಎರಡು ದಿನಗಳಿಂದ ನಾರ್ವೆಯ ಅಗ್ರ ಶ್ರೇಯಾಂಕಿತ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ತೀವ್ರ ಪೈಪೋಟಿ ನೀಡಿದ್ದರು. ಪರಿಣಾಮ ಸತತ ಎರಡು ದಿನಗಳ ಕಾಲ ಫೈನಲ್ ಪಂದ್ಯ ಡ್ರಾನಲ್ಲಿ ಅಂತ್ಯವಾಗಿತ್ತು. ಹೀಗಾಗಿ ವಿಜೇತರನ್ನು ನಿರ್ಧರಿಸಲು ಇಂದು ಅಲ್ಪಾವಧಿಯ ಟೈ–ಬ್ರೇಕ್ ಪಂದ್ಯ ನಡೆಸಲಾಯಿತು.

ಮೊದಲ ಎರಡು ಪಂದ್ಯಗಳಲ್ಲಿ ಆಟಗಾರರು ತಲಾ 25 ನಿಮಿಷಗಳ ಸಮಯ ಹೊಂದಿದ್ದರು. ಈ ವೇಳೆ, ಪ್ರತಿ 10 ಸೆಕೆಂಡ್‌ಗಳಿಗೆ ಕಾಯಿಗಳನ್ನು ಮೂವ್ ಮಾಡಬೇಕಾಗಿತ್ತು. ಟೈ–ಬ್ರೇಕ್‌ನ ಮೊದಲ ಪಂದ್ಯದಲ್ಲಿ ಕಪ್ಪು ಕಾಯಿಗಳೊಂದಿಗೆ ಆಡಿದ ಮ್ಯಾಗ್ನಸ್ ಕಾರ್ಲ್‌ಸನ್ ಮೇಲುಗೈ ಸಾಧಿಸಿದರು. ಇದರಿಂದ ಪ್ರಜ್ಞಾನಂದ ಒತ್ತಡಕ್ಕೆ ಸಿಲುಕಿದ್ದರು. ಅಂತಿಮವಾಗಿ, 1.5–0.5 ಅಂತರದಿಂದ ಕಾರ್ಲ್‌ಸನ್ ಗೆದ್ದು ಸಂಭ್ರಮಿಸಿದರು.

ವಿಶ್ವದ 2ನೇ ಶ್ರೇಯಾಂಕಿತ ಆಟಗಾರ ಹಿಕರು ನಕಮುರಾ ಹಾಗೂ 3ನೇ ಶ್ರೇಯಾಂಕಿತ ಆಟಗಾರ ಫ್ಯಾಬಿಯಾನೊ ಕರುವಾನಾ ಅವರನ್ನು ಮಣಿಸಿ ಪ್ರಜ್ಞಾನಂದ ಫೈನಲ್‌ಗೆ ಲಗ್ಗೆ ಇಟ್ಟಿದ್ದರು. ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಹಾಗೂ 5 ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ಪ್ರಶಸ್ತಿ ಗೆಲ್ಲಲು ತೀವ್ರ ಹಣಾಹಣಿ ನಡೆಸಿದ್ದರು. ಎರಡು ದಿನಗಳ ಕಾಲ ಫೈನಲ್ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದ್ದೇ ಪ್ರಜ್ಞಾನಂದ ವೀರೋಚಿತ ಆಟಕ್ಕೆ ಸಾಕ್ಷಿಯಾಗಿತ್ತು.

ಇದೇ ಕಾರಣದಿಂದ ಮೂರನೇ ದಿನ ಟೈ–ಬ್ರೇಕ್‌ಗೆ ಪಂದ್ಯ ಸಾಗಿತ್ತು. ಈ ಪಂದ್ಯದಲ್ಲಿ ಗೆದ್ದಿದ್ದರೆ ಚೆಸ್ ವಿಶ್ವಕಪ್ ಗೆದ್ದ ಅತೀ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪ್ರಜ್ಞಾನಂದ ಪಾತ್ರರಾಗುತ್ತಿದ್ದರು. ಆದರೆ, 18 ವರ್ಷದ ಪ್ರಜ್ಞಾನಂದ ಒಡ್ಡಿದ್ದ ಕಠಿಣ ಸವಾಲನ್ನು 32 ವರ್ಷದ ಕಾರ್ಲ್‌ಸನ್ ಮೆಟ್ಟಿ ನಿಲ್ಲುವಲ್ಲಿ ಯಶಸ್ವಿಯಾದರು. ಟೈ–ಬ್ರೇಕ್‌ನ ಮೊದಲ ಪಂದ್ಯದಲ್ಲಿ 45 ನಡೆಗಳಿಂದ ಕಾರ್ಲ್‌ಸನ್ ಗೆದ್ದಿದ್ದರು. ಎರಡನೇ ಪಂದ್ಯ 22 ನಡೆಗಳೊಂದಿಗೆ ಡ್ರಾ ಕಂಡಿತ್ತು. ಆದರೆ, ಮೊದಲ ಪಂದ್ಯ ಗೆದ್ದಿದ್ದ ಕಾರ್ಲ್‌ಸನ್ ಎಚ್ಚರಿಕೆಯಿಂದ ಆಡುವ ಮೂಲಕ ಮೊದಲ ಚೆಸ್ ವಿಶ್ವಕಪ್ ಗೆದ್ದರು.

ಈ ಫಲಿತಾಂಶದ ಮೂಲಕ, ಪ್ರಜ್ಞಾನಂದ ಕೆನಡಾದಲ್ಲಿ ಮುಂದಿನ ವರ್ಷ ನಡೆಯುವ ಕ್ಯಾಂಡಿಡೇಟ್ಸ್ 2024 ಚೆಸ್ ಟೂರ್ನಮೆಂಟ್‌ಗೆ ಅರ್ಹತೆ ಪಡೆದರು. ಈ ಪಂದ್ಯಾವಳಿಗೆ ಅರ್ಹತೆ ಪಡೆದ ಜಗತ್ತಿನ 3ನೇ ಅತೀ ಕಿರಿಯ ಆಟಗಾರನೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಇದಕ್ಕೂ ಮೊದಲು, ಬಾಬಿ ಫಿಶರ್ ಮತ್ತು ಕಾರ್ಲ್‌ಸನ್ ಅರ್ಹತೆ ಪಡೆದ ಕಿರಿಯ ಆಟಗಾರರಾಗಿದ್ದರು.

ವಚನ ಸಾಹಿತ್ಯ ಕನ್ನಡದ ಸ್ವಯಾರ್ಜಿತ ಸ್ವತ್ತು

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ



ಮೈಸೂರು, ಆ. 24– ವಚನ ಸಾಹಿತ್ಯ ಕನ್ನಡದ ಸ್ವಯಾರ್ಜಿತ ಸ್ವತ್ತು ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಹೆಗ್ಗಡದೇವನಕೋಟೆ ತಾಲೂಕು ಚಾಮನಹಳ್ಳಿ ಹುಂಡಿ ಸ.ಹಿ.ಪ್ರಾ.ಶಾಲೆಯಲ್ಲಿ ಲಿಂಗೈಕ್ಯ ಸಿ.ಪಿ.ಸಿದ್ಧಲಿಂಗಪ್ಪ ಅವರ ಪುಣ್ಯಸ್ಮರಣೆ ಅಂಗವಾಗಿ ಹಮ್ಮಿಕೊಂಡಿದ್ದ 74ನೇ ಶಾಲೆಗಳೆಡೆಗೆ ವಚನಗಳ ನಡಿಗೆ ಹಾಗೂ 21ನೇ ಸರ್ಕಾರಿ ಶಾಲೆಗಳ ಬಲವರ್ಧನೆಗೆ ನೋಟ್‌ಬುಕ್ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಹಳಗನ್ನಡ ಸಾಹಿತ್ಯದವರೆಗೆ ಅನೇಕ ವಿಷಯಗಳು ಸಂಸ್ಕೃತದ ಪುರಾಣ ಮತ್ತು ಪುಣ್ಯಕಥೆಗಳನ್ನು ಒಳಗೊಂಡಿದ್ದವು. 12ನೇ ಶತಮಾನದಲ್ಲಿ ನಿರ್ಮಾಣವಾದ ವಚನ ಸಾಹಿತ್ಯ ದೇಶದ ಬಹುಸಂಖ್ಯಾತ ಜನರು ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯಿಂದ ಬದುಕಲು ಬೇಕಾಗುವ ಜೀವನ ಸಿದ್ಧಾಂತಗಳ ವಿಷಯಗಳನ್ನು ಒಳಗೊಂಡು ಜನರ ಕಲ್ಯಾಣಕ್ಕೆ ಕಾರಣವಾಯಿತು. ಶರಣರು ದಾನ ಎಂಬ ಪದದ ಬದಲಾಗಿ ದಾಸೋಹ ಪದ ಬಳಸಿದರು. ಏಕೆಂದರೆ ಭೂಮಿ, ಬೆಳೆ, ಗಾಳಿ ಮುಂತಾದವೆಲ್ಲವೂ ಆ ಪರಶಿವನ ದಾನವಾಗಿದ್ದು, ಆ ಭೂಮಿಯ ಮೇಲೆ ವಾಸವಾಗಿರುವ ನಾವೆಲ್ಲರೂ ಏನೇ ಇತರರಿಗೆ ಕೊಟ್ಟರೂ ಆ ಪರಶಿವನ ಕಾರುಣ್ಯದ ದಾಸೋಹವಾಗಿದೆ ಎಂಬುದನ್ನು ಅರಿಯಬೇಕು ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ವಚನಗಳು ಅಂತರಂಗದ ಮತ್ತು ಬಹಿರಂಗದ ಆಚರಣೆಗಳು ಒಂದೇ ರೀತಿ ಇರಲು ಮನುಷ್ಯನಿಗೆ ಸಹಾಯಕವಾಗಿದ್ದು, ಅವುಗಳನ್ನು ಅಧ್ಯಯನ ಮತ್ತು ಅನ್ವಯ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಬಸವಣ್ಣನವರ ಸಪ್ತಸೂತ್ರಗಳ ವಚನ ಎಲ್ಲಾ ಧರ್ಮಗಳ ಸಾರವಾಗಿದ್ದು ಅದರಂತೆ ನಡೆದರೆ ಮರ್ತ್ಯಲೋಕವು ಸ್ವರ್ಗವಾಗುತ್ತದೆ ಎಂದರು.

ನಂತರ 60 ವಿದ್ಯಾರ್ಥಿಗಳಿಗೆ ನೋಟ್ ಬುಕ್, ವಚನದೀವಿಗೆ ಪ್ರಮಾಣಪತ್ರ, ವಚನ ಪುಸ್ತಕ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಮುಖ್ಯಶಿಕ್ಷಕ ಶಿವೇಗೌಡ, ಶಿಕ್ಷಕರುಗಳಾದ ಅಪ್ಪಾಜಿ, ಜಿ.ಆರ್. ಸರಸ್ವತಿ ಅತಿಥಿ ಶಿಕ್ಷಕ ಮನು, ದೇವಮ್ಮ ಸಿದ್ಧಲಿಂಗಪ್ಪ, ಸುಶೀಲ ಶಿವಕುಮಾರ್, ಸಿ.ಕೆ. ಗಿರಿಜೇಶ್, ವಚನ, ಜಯಲಕ್ಷ್ಮಿ, ಅಡುಗೆ ಸಹಾಯಕಿ ದೇವಮಣಿ ಉಪಸ್ಥಿತರಿದ್ದರು.

ಶುಕ್ರವಾರ
25 -08-2023
ಬೆಳ್ಳಿ ಬೆಳಕು
ಸಿನಿಮಾ ಪುರವಣಿ
ಮೈಸೂರು ಮಿತ್ರ
● ಸತ್ಯಮೂರ್ತಿ ತೋಳಹುಣಸೆ

ನಿಖಿಲ್ ನೂತನ ಚಿತ್ರ ಆರಂಭ

ನಿಖಿಲ್‌ಕುಮಾರ್ ನಾಯಕರಾಗಿ ನಟಿಸುತ್ತಿರುವ ನೂತನ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನೆರವೇರಿತು. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ನೂತನ ಚಿತ್ರಕ್ಕೆ ಚಾಲನೆ ನೀಡಿದರು. ದಕ್ಷಿಣ ಭಾರತದ ಹೆಸರಾಂತ ನಿರ್ಮಾಣ ಸಂಸ್ಥೆ ಲೈಕಾ ಪ್ರೊಡಕ್ಷನ್ಸ್ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದೆ. ಇನ್ನೂ ಹೆಸರಿಡದ ಈ ಚಿತ್ರಕ್ಕೆ ಲಕ್ಷ್ಮಣ್ ಅವರು ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಹಿಂದೆ ನಮ್ಮ ಬ್ಯಾನರ್‌ನಲ್ಲಿ ತಯಾರಾದ 'ಸೀತಾ ರಾಮ ಕಲ್ಯಾಣ' ಚಿತ್ರದ ಆಡಿಯೋ ಸಮಾರಂಭಕ್ಕೆ ಬಂದಿದ್ದ ಲೈಕಾ ಸಂಸ್ಥೆಯ ಸುಭಾಸ್ಕರನ್ ಅವರು, ನಮ್ಮ ಸಂಸ್ಥೆಯ ಚಿತ್ರದಲ್ಲಿ ನೀವು ನಾಯಕರಾಗಿ ನಟಿಸಬೇಕು ಎಂದು ಹೇಳಿದ್ದರು. ಈಗ ಆ ಚಿತ್ರ ಆರಂಭವಾಗುತ್ತಿದೆ. ಚಿತ್ರಕ್ಕಾಗಿ ನಿರ್ದೇಶಕರು ಒಂದು ವರ್ಷದಿಂದ ಬೆಂಗಳೂರಿನಲ್ಲೇ ಇದ್ದು ಕೆಲಸ ಮಾಡುತ್ತಿದ್ದಾರೆ. ಸದ್ಯದಲ್ಲೇ ಚಿತ್ರದ ಕುರಿತು ಹೆಚ್ಚಿನ ಮಾಹಿತಿ ನೀಡುವುದಾಗಿ ನಾಯಕ ನಿಖಿಲ್‌ಕುಮಾರ್ ತಿಳಿಸಿದರು. ತಮ್ಮ ತಂಡವನ್ನು ಪರಿಚಯಿಸುತ್ತಾ ಮಾತು ಪ್ರಾರಂಭಿಸಿದ ನಿರ್ದೇಶಕ ಲಕ್ಷ್ಮಣ್, ಕನ್ನಡದಲ್ಲಿ ಇದು ನನ್ನ ಮೊದಲ ಚಿತ್ರ. ನಾನು ಬರೆದ ಕಥೆಯನ್ನು ಒಪ್ಪಿ ಚಿತ್ರ ನಿರ್ಮಾಣಕ್ಕೆ ಮುಂದಾಗಿರುವ ನಿರ್ಮಾಪಕರಿಗೆ ಹಾಗೂ ನಾಯಕ ನಿಖಿಲ್‌ಕುಮಾರ್ ಅವರಿಗೆ ಧನ್ಯವಾದ. ಒಳ್ಳೆಯ ತಂಡದೊಂದಿಗೆ ಒಳ್ಳೆಯ ಚಿತ್ರ ನೀಡುವ ನಂಬಿಕೆ ಇದೆ. ಮುಂದಿನ ದಿನಗಳಲ್ಲಿ ಚಿತ್ರದ ಕುರಿತು ಹೆಚ್ಚಿನ ವಿವರಣೆ ನೀಡುತ್ತೇನೆ ಎಂದರು.

ನಟ ಕೋಮಲ್ ಮಾತನಾಡುತ್ತಾ, ಈ ಚಿತ್ರದಲ್ಲಿ ನಟಿಸುವಂತೆ ನಿಖಿಲ್ ಅವರು ನನಗೆ ಹೇಳಿದರು. ನಾನು ಕಥೆ ಕೇಳಿ ಒಪ್ಪಿಕೊಂಡೆ. ಕಥೆಯನ್ನು ತುಂಬಾ ಇಂಟರೆಸ್ಟಿಂಗ್ ಆಗಿ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ಲೈಕಾ ಪ್ರೊಡಕ್ಷನ್ಸ್ ಸಂಸ್ಥೆಯ ಮೂಲಕ ನಿರ್ಮಾಣವಾಗುತ್ತಿರುವ ಮೊದಲ ಕನ್ನಡ ಚಿತ್ರವಿದು. ಚಿತ್ರಕ್ಕೆ ಕನ್ನಡ ಜನತೆಯ ಆಶೀರ್ವಾದ ಬೇಕು ಎಂದು ಲೈಕಾ ಪ್ರೊಡಕ್ಷನ್ಸ್ ಮುಖ್ಯಸ್ಥ ಸುಭಾಸ್ಕರನ್ ಹೇಳಿದರು.



ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿರುವ ಯುಕ್ತಿತರೇಜ ಮಾತನಾಡುತ್ತಾ, ಚಿತ್ರದ ಹಾಗೂ ತನ್ನ ಪಾತ್ರದ ಕುರಿತು ಹೇಳಿಕೊಂಡರು. ಪಂಚತಾರಾ ಹೋಟೆಲಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಚಿತ್ರದ ತಂತ್ರಜ್ಞರು ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.



'ಘೋಸ್ಟ್' ಆಯ್ತು ಈಗ 'ಜಿಎಸ್‌ಟಿ' ಸಂದೇಶ್‌ಗೆ ದೆವ್ವಗಳ ಕಾಟ!

ಕನ್ನಡ ಚಿತ್ರರಂಗಕ್ಕೆ ಮಣ್ಣಿನ ದೋಣಿ, ಐರಾವತ, ಪ್ರಿನ್ಸ್ ಹೀಗೆ ಹಲವಾರು ಯಶಸ್ವೀ ಚಿತ್ರಗಳನ್ನು ನೀಡಿದ ಸಂದೇಶ್ ಪ್ರೊಡಕ್ಷನ್ಸ್ ಈಗಷ್ಟೇ 'ಜಿಎಸ್‌ಟಿ' ಕಟ್ಟಲು ಹೊರಟಿದೆ. ಆಶ್ಚರ್ಯವಾಯಿತೇ? ಹೌದು ಸಂದೇಶ್ ನಾಗರಾಜ್ ಪುತ್ರ ಎನ್.ಸಂದೇಶ್ 'ಜಿಎಸ್‌ಟಿ' ಶೀರ್ಷಿಕೆಯಡಿ ಈ ಚಿತ್ರವನ್ನು ಆರಂಭಿಸಿದ್ದಾರೆ. ಸಂದೇಶ್ ಸಂಸ್ಥೆಯ 34ನೇ ಚಿತ್ರಕ್ಕೆ ನಟ, ನಿರೂಪಕ ಸೃಜನ್ ಲೋಕೇಶ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇತ್ತೀಚೆಗೆ ಬಂಡೆಮಹಾಕಾಳಿ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ನೆರವೇರಿತು. ಪ್ರಥಮ ದೃಶ್ಯಕ್ಕೆ ಸಂದೇಶ್ ನಾಗರಾಜ್ ಆರಂಭ ಫಲಕ ತೋರಿಸಿದರೆ, ಹಿರಿಯ ನಟಿ ಗಿರಿಜಾ ಲೋಕೇಶ್ ಕ್ಯಾಮರಾ ಚಾಲನೆ ಮಾಡಿದರು. ಈ ಸಂದರ್ಭದಲ್ಲಿ ಸಂದೇಶ್ ನಾಗರಾಜ್ ಮಾತನಾಡುತ್ತ ಸಂದೇಶ್ ಪ್ರೊಡಕ್ಷನ್, ಲೋಕೇಶ್ ಪ್ರೊಡಕ್ಷನ್ ಬೇರೆ ಅಲ್ಲ. ಸೃಜನ್ ನನ್ನ ಮಗನಿದ್ದ ಹಾಗೆ. ಹಾರರ್ ಜೊತೆಗೆ ಕಾಮಿಡಿ ಸೇರಿಸಿ ಈ ಸಿನಿಮಾ ಮಾಡುತ್ತಿದ್ದಾರೆ. ನಾನೀಗ ರಿಟೈರ್ಡ್ ಆಗಿದ್ದೇನೆ. ನನ್ ಮಗನೇ ಎಲ್ಲಾ ನೋಡಿಕೊಳ್ತಿದ್ದಾನೆ. ಆತನಿಗೆ ಸಿನಿಮಾ ಮಾಡ್ತಾನೇ ಇರು ಎಂದಿದ್ದೇನೆ. ಅದರಿಂದ ಒಂದಷ್ಟು ಕಲಾವಿದರಿಗೆ, ಕಾರ್ಮಿಕರಿಗೆ ಜೀವನ ಆಗುತ್ತೆ ಅಲ್ಲದೆ ಹೊಸಬರಿಗೂ ಅವಕಾಶ ಸಿಗುತ್ತೆ. ನಾನು ಸಿನಿಮಾಗೆ ಬರಲು ಅಂಬರೀಶ್ ಕಾರಣ. ಪಿಯುಸಿ ಓದುವಾಗಲೇ ನಾವು ಸ್ನೇಹಿತರಾಗಿದ್ದೆವು. ದಪ್ಪ ಆಗಿದ್ದಾರೆಂದು ಮನೆಯಲ್ಲಿ ಕೂತಿದ್ದ ಅಂಬರೀಶ್‌ಗೆಂದೇ 'ಮಣ್ಣಿನದೋಣಿ' ನಿರ್ಮಿಸಿದೆ. ಆಗ ಸಿನಿಮಾ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಅಂಬರೀಶನೇ ಎಲ್ಲಾ ನೋಡಿಕೊಂಡರು, ಸಿನಿಮಾ ಸೂಪರ್ ಹಿಟ್ ಆಯ್ತು. ನಂತರ 3 ಸಿನಿಮಾ ಒಟ್ಟಿಗೇ ಮಾಡಿದೆವು ಈಗ ನಾವು 'ಜಿಎಸ್‌ಟಿ' ಕಟ್ಟಿದ್ದೇವೆ. ನಾಡಿನ ಜನತೆಗೆ ರಿಟರ್ನ್ ಮಾಡಿ ಕೊಡಿ ಅಂತ ಕೇಳಿಕೊಳ್ಳುತ್ತಿದ್ದೇವೆ ಎಂದರು.

ನಿರ್ದೇಶಕ ಸೃಜನ್ ಮಾತನಾಡುತ್ತಾ, ತಾತನ ಚಿತ್ರದಲ್ಲಿ ನಮ್ಮ ತಂದೆ ಬಾಲ ಕಲಾವಿದನಾಗಿ, ನಮ್ಮಪ್ಪನ ಚಿತ್ರದಲ್ಲಿ ನಾನು ಬಾಲ ಕಲಾವಿದನಾಗಿ ಅಭಿನಯಿಸಿದ್ದೆ ಈಗ ನನ್ನ ಚಿತ್ರದಲ್ಲಿ ನನ್ನಮಗ 'ಸುಕೃತ್' ಬಾಲ ಕಲಾವಿದನಾಗಿ ನಟಿಸುತ್ತಿದ್ದಾನೆ. ನಾಲ್ಕನೇ ಜನರೇಶನ್‌ವರೆಗೆ ಅಭಿನಯ ಮುಂದುವರೆಸಿರುವುದು ನಮ್ಮ ಕುಟುಂಬವೇ. ಮತ್ತೊಂದು ವಿಶೇಷವೆಂದರೆ ಪ್ರಥಮ ನಿರ್ದೇಶನದಲ್ಲೇ ನನ್ನ ತಾಯಿಗೆ ಆಕ್ಷನ್‌ಕಟ್ ಹೇಳುತ್ತಿದ್ದೇನೆ. ಇನ್ನು 'ಜಿಎಸ್‌ಟಿ' ಬಗ್ಗೆ ಹೇಳಬೇಕೆಂದರೆ, ಚಿತ್ರಕ್ಕೆ ಘೋಸ್ಟ್ ಇನ್ ಟ್ರಬಲ್ ಎಂಬ ಅಡಿಬರಹವಿದೆ. ಇದರಂತೆ ದೆವ್ವಗಳಿಗೂ ಸಮಸ್ಯೆಯಿದೆ ಎಂದು ಚಿತ್ರದಲ್ಲಿ ಹೇಳಹೊರಟಿದ್ದೇವೆ, ಆ ಸಮಸ್ಯೆ ಏನೆಂದು ಚಿತ್ರದಲ್ಲೇ ನೋಡಬೇಕು. ಇಂದಿನಿಂದಲೇ ಚಿತ್ರೀಕರಣ ಪ್ರಾರಂಭಿಸುತ್ತಿದ್ದೇವೆ, ಸಂದೇಶ್ ಪ್ರೊಡಕ್ಷನ್ಸ್‌ನಂಥ ದೊಡ್ಡ ಬ್ಯಾನರ್ ಜೊತೆ ಕೆಲಸ ಮಾಡುತ್ತಿರುವುದಕ್ಕೆ ನನಗೆ ಹೆಮ್ಮೆಯಿದೆ ಎಂದು ಹೇಳಿದರು. ಸೃಜನ್ ನನ್ನ ಆತ್ಮೀಯ ಗೆಳೆಯ. ಗೆಳೆಯನಿಗಾಗಿ ಮಾಡುತ್ತಿರುವ ಸಿನಿಮಾವಿದು, ಈಗಾಗಲೇ 'ಘೋಸ್ಟ್' ಹಾರರ್ ಸಿನಿಮಾ ಮಾಡಿದ್ದೇವೆ ಇದುಲ್ಲಿ ಹಾರ್ ಜೊತೆ ಕಾಮಿಡಿಯೂ ಇದೆ ಎಂದು ನಿರ್ಮಾಪಕ ಸಂದೇಶ್ ಎನ್. ತಿಳಿಸಿದರು. ನಾಯಕಿ ರಜನಿ ಭಾರದ್ವಾಜ್, ಗಿರಿಜಾ ಲೋಕೇಶ್, ಪ್ರಮೋದ್‌ಶೆಟ್ಟಿ, ನಿವೇದಿತಾ, ತುಲಾನಾಣಿ ಅರವಿಂದರಾವ್, ರವಿಶಂಕರಗೌಡ, ಸಂಗೀತ ನಿರ್ದೇಶಕ ಚಂದನ್‌ಶೆಟ್ಟಿ, ಛಾಯಾಗ್ರಾಹಕ ಸುರೇಶ್ ಚಿತ್ರದ ಕುರಿತಂತೆ ಮಾತನಾಡಿದರು. ಟಿಎಸ್. ನಾಗಾಭರಣ, ಪಿ.ಶೇಷಾದ್ರಿ ಸುಂದರರಾಜ್, ತಾರಾ, ಶೃತಿ ಅತಿಥಿಗಳಾಗಿ ಆಗಮಿಸಿದ್ದರು.

ಶಿವಣ್ಣ–ಪ್ರಭುದೇವ 'ಕರಟಕ ದಮನಕ'

ನಟ ಶಿವರಾಜಕುಮಾರ್ ಹಾಗೂ ಪ್ರಭುದೇವ ಅಭಿನಯದ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಹಾಗೂ ಯೋಗರಾಜ್ ಭಟ್ ನಿರ್ದೇಶನದ 'ಕರಟಕ ದಮನಕ' ಚಿತ್ರದ ಚಿತ್ರೀಕರಣ ಮುಕ್ತಾಯ ಹಂತ ತಲುಪಿದ್ದು, ಸದ್ಯ ರಾಕ್‌ಲೈನ್ ಸ್ಟುಡಿಯೋದಲ್ಲಿ ಶೂಟಿಂಗ್ ನಡೆಯುತ್ತಿದೆ. ಶೂಟಿಂಗ್ ವೀಕ್ಷಣೆಗೆ ಪತ್ರಕರ್ತರನ್ನು ಆಹ್ವಾನಿಸಿದ್ದ ಚಿತ್ರತಂಡ ಮಾಹಿತಿಗಳನ್ನು ಹಂಚಿಕೊಂಡಿತು.

ನಿರ್ದೇಶಕ ಯೋಗರಾಜ್ ಭಟ್ ಮಾತಾಡುತ್ತಾ, 'ಕರಟಕ ದಮನಕ' ಎಂದರೆ ಎರಡು ಕುತಂತ್ರಿ ನರಿಗಳ ಹೆಸರು. ಸಾಮಾನ್ಯವಾಗಿ ಇಬ್ಬರನ್ನು ಹೆಚ್ಚು ಸಲ ಒಟ್ಟಾಗಿ ನೋಡಿದಾಗ 'ಕರಟಕ ದಮನಕ' ಎನ್ನುವುದೂ ಉಂಟು. ಚಿತ್ರದಲ್ಲಿ ಇಂಥ ಪಾತ್ರಗಳನ್ನು ಶಿವಣ್ಣ ಹಾಗೂ ಪ್ರಭುದೇವ ಮಾಡಿದ್ದಾರೆ. ಅವರಿಬ್ಬರ ಎನರ್ಜಿ ನೋಡಿದರೆ ನಿಜಕ್ಕೂ ಖುಷಿಯಾಗುತ್ತದೆ. ರಾಕ್‌ಲೈನ್ ವೆಂಕಟೇಶ್ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ವಿ.ಹರಿಕೃಷ್ಣ ಸಂಗೀತ ಸಂಯೋಜನೆಯ ಏಳು ಹಾಡುಗಳು ಚಿತ್ರದಲ್ಲಿದೆ. ಸಂತೋಷ್ ರೈ ಪಾತಾಜೆ ಅವರು ಚಿತ್ರದ ಕ್ಯಾಮರಾ ವರ್ಕ್ ನಿಭಾಯಿಸುತ್ತಿದ್ದಾರೆ. ನಾನು ಹಾಗೂ ರಾಕ್‌ಲೈನ್ ವೆಂಕಟೇಶ್ ಸಹ ಚಿತ್ರದಲ್ಲಿ ನಟಿಸಿದ್ದೇವೆ. ಹಾಡುಗಳ ಚಿತ್ರೀಕರಣ ಮಾತ್ರವೇ ಬಾಕಿಯಿದೆ ಎಂದರು.

ನಮ್ಮ ಸಂಸ್ಥೆಯಿಂದ ಶಿವರಾಜ್‌ಕುಮಾರ್ ಅವರ ಚಿತ್ರ ಬಂದು ಬಹಳ ವರ್ಷಗಳಾಗಿತ್ತು. ಪ್ರಭುದೇವ ಜೊತೆ ಚಿತ್ರ ನಿರ್ಮಾಣ ಮಾಡುವುದು ನನ್ನ ಕನಸಾಗಿತ್ತು. ಇವರಿಬ್ಬರೂ ಒಂದೇ ಚಿತ್ರದಲ್ಲಿ ಅಭಿನಯಿಸುತ್ತಿರುವುದು ಖುಷಿಯ ವಿಚಾರ. ಯೋಗರಾಜ್ ಭಟ್ ಒಳ್ಳೆಯ ಕಥೆ ಮಾಡಿಕೊಂಡಿದ್ದಾರೆ ಎಂದು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ತಿಳಿಸಿದರು.

ರಾಕ್‌ಲೈನ್ ಪ್ರೊಡಕ್ಷನ್ಸ್ ನನ್ನ ಕುಟುಂಬವಿದ್ದಂತೆ. ಯೋಗರಾಜ್‌ಭಟ್ ಅವರ ಚಿತ್ರಗಳು ಎಂದರೆ ನನಗಿಷ್ಟ, ಅವರ ಎಷ್ಟೋ ಚಿತ್ರಗಳನ್ನು ಚಿತ್ರಮಂದಿರಕ್ಕೆ ಹೋಗಿ ನೋಡಿದ್ದೇನೆ. ಪ್ರಭುದೇವ ನನ್ನ ಆತ್ಮೀಯ ಗೆಳೆಯ. ಈ ಚಿತ್ರದಲ್ಲಿ ನಾವಿಬ್ಬರೂ ಸ್ನೇಹಿತರಾಗೇ ಅಭಿನಯಿಸುತ್ತಿದ್ದೇವೆ ಎಂದು ಶಿವರಾಜ್‌ಕುಮಾರ್ ತಿಳಿಸಿದರು.

ಶಿವರಾಜ್‌ಕುಮಾರ್ ಅವರ ಎನರ್ಜಿ ನೋಡಿದರೆ ತುಂಬಾ ಖುಷಿಯಾಗುತ್ತದೆ. ಅವರ ಜೊತೆ ನಟಿಸುತ್ತಿರುವುದು ಹೆಚ್ಚಿನ ಸಂತಸ ನೀಡಿದೆ ಎಂದು ನಟ ಪ್ರಭುದೇವ ಹೇಳಿದರು. ನಾಯಕಿಯರಾದ ನಿಶ್ವಿಕಾ ನಾಯ್ಡು, ಪ್ರಿಯ ಆನಂದ್, ಮುಖ್ಯಮಂತ್ರಿ ಚಂದ್ರು, ತನಿಕೆಲ್ಲ ಭರಣಿ ಮತ್ತಿತರರು ತಮ್ಮ ಪಾತ್ರಗಳ ಬಗ್ಗೆ ಮಾತನಾಡಿದರು. ಛಾಯಾಗ್ರಹಣದ ಬಗ್ಗೆ ಸಂತೋಷ್ ರೈ ಪಾತಾಜೆ ವಿವರಿಸಿದರು.



'ಮಾರಕಾಸ್ತ್ರ'ದಲ್ಲಿ ಮಸ್ತ್ ಮಸ್ತ್ ಹಾಡು!


ಪತ್ರಕರ್ತನ ಕೈಲಿರುವ ಲೇಖನಿ ಕತ್ತಿಗಿಂತಲೂ ಹರಿತ, ನಯವಂಚಕರಿಗದುವೇ ಮಾರಕಾಸ್ತ್ರ ಎಂದು ಹೇಳಹೊರಟಿರುವ ಚಿತ್ರ 'ಮಾರಕಾಸ್ತ್ರ'. ಗುರುಮೂರ್ತಿ ಸುನಾಮಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ ಹೊಂದಿದ ಈ ಚಿತ್ರದ ಗ್ಲಾಮರು ಗಾಡಿ ಎಂಬ ಹಾಡನ್ನು ಇತ್ತೀಚೆಗೆ ಬಿಡುಗಡೆಗೊಳಿಸಲಾಯಿತು. ಕೋಮಲ ನಿರ್ಮಾಣದ ಈ ಚಿತ್ರದಲ್ಲಿ ಹಿರಿಯ ನಟಿ ಮಾಲಾಶ್ರೀ ಅವರು ಬಹಳ ದಿನಗಳ ನಂತರ ಲೇಡಿ ಪೊಲೀಸ್ ಆಗಿ ಕಾಣಿಸಿಕೊಂಡಿದ್ದಾರೆ. ಆನಂದ್ ಆರ್ಯ, ಹರ್ಷಿಕಾ ಪೂಣಚ್ಚ ಪ್ರಮುಖ ಪಾತ್ರ ನಿರ್ವಹಿಸಿರುವ ಈ ಚಿತ್ರದಲ್ಲಿ ನಾಯಕ ಒಬ್ಬ ಸಮಾಜ ಸೇವಕನಾದರೆ, ನಾಯಕಿ ಕ್ರೈಮ್ ರಿಪೋರ್ಟರ್ ಆಗಿ ನಟಿಸಿದ್ದಾರೆ. ಮಂಜುಕವಿ ಸಂಗೀತ ಸಂಯೋಜಿಸಿರುವ, ಈ ಹಾಡಿಗೆ ಅನನ್ಯಭಟ್ ದನಿಯಾಗಿದ್ದಾರೆ. ಹಾಡಲ್ಲಿ ಹೀನಾ ಎಂ.ಪಂಚಾಲ್ ಹೆಜ್ಜೆ ಹಾಕಿದ್ದಾರೆ. ನಿರ್ಮಾಪಕ ನಟರಾಜ್ ಮಾತನಾಡುತ್ತಾ, ನಾನು ಸಿನಿಮಾ ಮಾಡುತ್ತೇನೆ ಎಂದಾಗ, ಅದರ ಸಹವಾಸ ಬೇಡ ಅಂದವರೇ ಹೆಚ್ಚು. ಆದರೆ ಈವರೆಗೆ ನನಗೆ ಅಂಥಾ ಯಾವುದೇ ಕೆಟ್ಟ ಅನುಭವ ಆಗಿಲ್ಲ. ಒಳ್ಳೆಯ ತಂಡದ ಸಹಕಾರ ನನಗೆ ಸಿಕ್ಕಿದೆ. ಮಾಲಾಶ್ರೀ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದ್ದು, ಸದ್ಯದಲ್ಲೇ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳನ್ನು ಹಾಡಿದ್ದೇನೆ ಅಲ್ಲದೆ ಅಭಿನಯಿಸಿದ್ದೇನೆ ಎಂದು ಹೇಳಿದರು.

ಇದು ನನ್ನ ಮೊದಲ ಚಿತ್ರ ಎಂದು ಮಾತನಾಡಿದ ನಿರ್ದೇಶಕ ಗುರುಮೂರ್ತಿ, 'ಮಾರಕಾಸ್ತ್ರ' ಒಂದು ಕೌಟುಂಬಿಕ ಕಥೆಯ ಚಿತ್ರ, ಇದರಲ್ಲಿ ಆಕ್ಷನ್, ಸಸ್ಪೆನ್ಸ್, ಥ್ರಿಲ್ಲರ್ ಎಲ್ಲವೂ ಇದೆ. ಈಗಾಗಲೇ ಟೀಸರ್ ಎಲ್ಲರ ಮನಗೆದ್ದಿದೆ ಎಂದು ಹೇಳಿದರು. ಚಿತ್ರದಲ್ಲಿ ಏಳು ಹಾಡುಗಳಿದ್ದು, ಅದರಲ್ಲಿ ನಾಲ್ಕು ಹಾಡುಗಳನ್ನು ನಟರಾಜ್ ಅವರೇ ಹಾಡಿದ್ದಾರೆ. ಈ ಹಾಡಿಗೆ ನಾನೇ ಸಾಹಿತ್ಯ ಬರೆದಿದ್ದೇನೆ ಎಂದು ಸಂಗೀತ ನಿರ್ದೇಶಕ ಮಿರಾಕಲ್ ಮಂಜು (ಮಂಜುಕವಿ) ತಿಳಿಸಿದರು.

'ಮಾರಕಾಸ್ತ್ರ' ಚಿತ್ರದ ನಿರ್ಮಾಪಕರು ಈಗಾಗಲೇ ಅರ್ಧದಷ್ಟು ಸೇಫ್ ಆಗಿದ್ದಾರೆ. ಮುಂಬೈ ಮೂಲದವರೊಬ್ಬರು ಹಿಂದಿ ಡಬ್ಬಿಂಗ್ ಹಕ್ಕನ್ನು ದೊಡ್ಡಮೊತ್ತಕ್ಕೆ ಖರೀದಿಸಿದ್ದಾರೆ ಎಂದು ನೃತ್ಯ ನಿರ್ದೇಶಕ ಹಾಗೂ ಕ್ರಿಯೇಟಿವ್ ಹೆಡ್ ಧನ್‌ಕುಮಾರ್ ಮಾಹಿತಿ ನೀಡಿದರು.

ಚಿತ್ರದಲ್ಲಿ ಅಯ್ಯಪ್ಪ ಶರ್ಮ ಖಳನಾಯಕನಾಗಿಯೂ, ಶಿವಮಣಿ ಸ್ವಾಮೀಜಿಯಾಗಿಯೂ, ಉಗ್ರಂ ಮಂಜು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ಈ ಚಿತ್ರದ ಹಾಡೊಂದಕ್ಕೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ 32 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ.

ವರಮಹಾಲಕ್ಷ್ಮಿ ಹಬ್ಬದ ವಿಶೇಷ ಸಿನಿಪದಬಂಧ–488



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಶ್ರಾವಣ ಮಾಸದ ಪ್ರಸಿದ್ಧ ಹಿಂದೂ ಹಬ್ಬದ ದೇವಿಯ ಅನುಗ್ರಹ 6
4.ಆದವಾನಿ ಎಂದೊಡನೆ ಹಿರಿಯ ಪೋಷಕ ನಟಿ ಪ್ರತ್ಯಕ್ಷ ! 4
6.ಲಕ್ಷ್ಮೀ ಪೂಜೆಗೆ ತಂದ ಬಂಗಾರದ ಹೂ ಗೊಂಚಲು 3
7.ಸಂಗೀತಂ ಶ್ರೀನಿವಾಸರಾವ್ ಅಣತಿಯಂತೆ ಅದೃಷ್ಟ ದೇವತೆಯನ್ನು ಕರೆಯಿರಿ 8
9." ದೇವರ ಆಟ ಬಲ್ಲವರಾರು... ", ಹಾಡಿನ ನಟಿ 2
13.ಜೀವನ ಚೈತ್ರ ಚಿತ್ರದ ಗೀತೆಯೊಂದು ದೇವಿಯನ್ನು ಕರೆಯುತಿದೆ 9
14.ಕಮಲವುಳ್ಳ ನಟಿ ಕೊನೆಯಲ್ಲಿ ಚಿಕ್ಕವಳು 3
15.ರಮಾ _ _ _ 3
16.ಲಕ್ಷಾಧೀಶ್ವರನಲ್ಲಿ ನೂರು ಸಾವಿರವಿದೆ 2

ಮೇಲಿನಿಂದ ಕೆಳಕ್ಕೆ

1.ಪೃಥ್ವಿಯಲ್ಲಿ ವಿಷ್ಣುವಿನ ಸತಿ ಇದ್ದಾಳೆ 3
2. ಕಲ್ಯಾಣ್ ಕುಮಾರ್ – ರೇವತಿ ಅಭಿನಯದಲ್ಲಿ 'ಗೃಹ'ಕ್ಕೆ ಆಗಮಿಸಿದ 'ದೇವಿ' 9
3. ಲಕ್ಷ್ಮೀಗೆ ಹೀಗೂ ಹೇಳಿ 3
4.ಕನ್ನಡ ಸೀರಿಯಲ್ ಸಿರಿದೇವಿಯನ್ನು ಕರೆದಿದೆ 5
5. ಗೆಲುವಿನ ಅಧಿದೇವತೆ 5
7. ಲಕ್ಷ್ಮೀ ಪೂಜೆಗೆ ಮಲಾರ ಹೊತ್ತು ತಂದವನು 'ಶಿವಣ್ಣ' 7
8. ಈ ನಟಿ "ರಾಖಿ" ಕಟ್ಟುತ್ತಾಳೆ 2
10. " ಬಾಳಲಿ ಜ್ಯೋತಿಯು ಎಂದೂ ಆರದಿರಲಿ.... ", ಗೀತೆಯ ಚಿತ್ರ 5
11. ಮಂಗಳ ಪ್ರಸಂಗಗಳಲ್ಲಿ ಹೆಂಗಸರು ಹಾಡುವ ಹಾಡು 5
12. ಆರತಿ ಅಭಿನಯದಲ್ಲಿ ಹಣದೊಡತಿ ತೋರಿದ ಕೃಪೆ 5

ವಿಜೇತರು: ನಾಗರಾಜು S/O ಮಹದೇವೇಗೌಡ, ವಾರ್ಡ್ ನಂ.17, ಚರ್ಚ್ ಹಿಂಭಾಗ, ಕನಕನಗರ, ಕೆ.ಆರ್.ನಗರ



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 487ರ ಉತ್ತರ

ಪ	ಟ್ಟಾ	ಭಿ	ಷೇ	ಕ			ಅ		ರಾ	
ಲ್ಲ		ಕ್ಷಾಂ			ನಿ	ರ	ಪ	ರಾ	ಧಿ	
ವಿ		ದೇ			ಘಾ		ರಾ		ಕಾ	
ಅ		ಹಿ	ಮ	ಪಾ	ತ		ಧಿ			ಮಾ
ನು								ಧೀ		ರಿ
ಪ	ದ	ವೀ	ಧ	ರ		ಕು	ಳ್ಳ	ರ	ಲೋ	ಕ
ಲ್ಲ		ಣಾ								ಣ್ಣ
ವಿ			ಹೊ		ಅ	ನು	ರೂ	ಪ		ಹೋ
	ಅಂ		ಸ		ಜೆ			ರ		ರಿ
	ಬಿ	ವಿ	ಕಾ	ರಂ	ತ್			ಮೇ		ಮ್ಯಾ
	ಕಾ		ವ್ಯ			ಆ	ಕಾ	ಶ	ಗಂ	ಗೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015



ವಿವಿಧ ಬೇಡಿಕೆ ಮುಂದಿಟ್ಟು ಕಾರ್ಮಿಕರ ಪ್ರತಿಭಟನೆ

ಮಡಿಕೇರಿ, ಆ.24– ಕಾರ್ಮಿಕ ಇಲಾಖೆಯಲ್ಲಿ ನೈಜ ಕಾರ್ಮಿಕರನ್ನು ಮಾತ್ರ ನೋಂದಾಯಿಸಿಕೊಳ್ಳುವುದರೊಂದಿಗೆ, ಪ್ರಸ್ತುತ ಇರುವ 'ಬೋಗಸ್' ಕಾರ್ಡ್‌ಗಳನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆನ್ನುವುದು ಸೇರಿದಂತೆ ವಿವಿಧ 18 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನ ಕೊಡಗು ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಟನೆಯ ಜಿಲ್ಲಾಧ್ಯಕ್ಷ ಎ.ಸಿ.ಸಾಬು, ಸಿಐಟಿಯು ಜಿಲ್ಲಾ ಖಜಾಂಚಿ ಎನ್.ಡಿ. ಕುಟ್ಟಪ್ಪ ಅವರ ನೇತೃತ್ವದಲ್ಲಿ ಜಿಲ್ಲೆಯ ವಿವಿಧೆಡೆಗಳ ಕಾರ್ಮಿಕರು ಸಮಾವೇಶಗೊಂಡು ಘೋಷಣೆಗಳ ಸಹಿತ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಸಂಘಟನೆಯ ಜಿಲ್ಲಾಧ್ಯಕ್ಷ ಎ.ಸಿ.ಸಾಬು ಮಾತನಾಡಿ, ದೇಶವ್ಯಾಪಿ ಕಾರ್ಮಿಕ ಸಂಘಟನೆಗಳು ತಮ್ಮ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದು, ಜಿಲ್ಲೆಗೆ ಸಂಬಂಧಿಸಿದ ಕೆಲ ಪ್ರಮುಖ ಬೇಡಿಕೆಗಳನ್ನು ಒಳಗೊಂಡಂತೆ ಪ್ರತಿಭಟನೆ ನಡೆಸಿರುವುದಾಗಿ ತಿಳಿಸಿದರು. ಕಾರ್ಮಿಕರಿಗೆ ಕಾರ್ಮಿಕ ಕಾರ್ಡ್‌ಗಳ ವಿತರಣೆ ಮತ್ತು ನೋಂದಣಿ ನಡೆಯುವ ಹಂತದಲ್ಲಿ ಕಾರ್ಮಿಕ ವರ್ಗಕ್ಕೆ ಒಳಪಡದವರಿಗೂ ಗ್ರಾಮ ಒನ್, ಸೇವಾ ಸಿಂಧು ಕೇಂದ್ರಗಳಲ್ಲಿ ಕಾರ್ಡ್ ನೀಡಲಾಗಿದೆ ಎಂದು ಆರೋಪಿಸಿದರು. ಇಂತಹ ಬೆಳವಣಿಗೆಯನ್ನು ತಡೆಗಟ್ಟಿ ಅರ್ಹ ಕಾರ್ಮಿಕರಿಗೆ ಮಾತ್ರ ಕಾರ್ಡ್‌ಗಳು ದೊರಕುವಂತೆ ಮಾಡಬೇಕೆಂದು ಒತ್ತಾಯಿಸಿದರಲ್ಲದೆ, ಗ್ರಾಮ ಒನ್, ಸೇವಾ ಸಿಂಧುವಿನಲ್ಲಿ ನಡೆಯುವ ನೋಂದಣಿ, ನವೀಕರಣವನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಬಾಕಿ ಇರುವ 2021–22ನೇ ಸಾಲಿನ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಅರ್ಜಿಗಳಿಗೆ ಕೂಡಲೆ ಹಣ ಒದಗಿಸಬೇಕು, ಕಾರ್ಮಿಕ ಕಾರ್ಡ್ ನವೀಕರಣಕ್ಕೆ ವೇತನ ಚೀಟಿ ಮತ್ತು ಹಾಜರಾತಿ ಪಟ್ಟಿ ಕಡ್ಡಾಯ ಆದೇಶವನ್ನು ಹಿಂದಕ್ಕೆ ಪಡೆಯಬೇಕು, ರಾಜ್ಯ ಸರ್ಕಾರದ ಆರೋಗ್ಯ ಸಂಜೀವಿನಿ ಯೋಜನೆಯನ್ನು ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬಕ್ಕೆ ವಿಸ್ತರಿಸಬೇಕು, ಜೀವಿತಾವಧಿ ಪ್ರಮಾಣ ಪತ್ರವನ್ನು ಕಂದಾಯ ಇಲಾಖೆಯ ಬದಲಾಗಿ ಕಾರ್ಮಿಕ ಇಲಾಖೆಯೇ ನೀಡಬೇಕೆಂದು ಮನವಿ ಪತ್ರದ ಮೂಲಕ ಸರಕಾರವನ್ನು ಒತ್ತಾಯಿಸಲಾಗಿದೆ.

ಇದೇ ಸಂದರ್ಭ ಸಂಘಟನೆಯ ಪ್ರಮುಖರು ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಕಟ್ಟಡ ಕಾರ್ಮಿಕ ಸಂಘಟನೆಯ ಪದಾಧಿಕಾರಿಗಳಾದ ಕೆ.ಕೆ.ಹರಿದಾಸ್, ಸುರೇಶ್, ಪದ್ಮಿನಿ ಸೇರಿದಂತೆ ಹಲ ಸದಸ್ಯರು ಪಾಲ್ಗೊಂಡಿದ್ದರು.

ವೈವಾಹಿಕ ಜೀವನಕ್ಕೆ ಕಾಲಿಟ್ಟ ಭುವನ್ ಪೊನ್ನಣ್ಣ–ಹರ್ಷಿಕಾ ಪೂಣಚ್ಚ

ಮಡಿಕೇರಿ, ಆ.24– ಸ್ಯಾಂಡಲ್‌ವುಡ್ ನಟ ಉಳ್ಳಿಯಡ ಭುವನ್ ಪೊನ್ನಣ್ಣ ಮತ್ತು ನಟಿ ಉದ್ದಪಂಡ ಹರ್ಷಿಕಾ ಪೂಣಚ್ಚ ಅವರುಗಳು ಗುರುವಾರ ವೈವಾಹಿಕ ಜೀವನಕ್ಕೆ ಕಾಲಿರಿಸಿದರು.

ಮಡಿಕೇರಿ ನಿವಾಸಿ 'ಬ್ರಹ್ಮಗಿರಿ' ಕೊಡವ ವಾರ ಪತ್ರಿಕೆಯ ಸಂಪಾದಕರಾದ ಉಳ್ಳಿಯಡ ಪೂವಯ್ಯ ಮತ್ತು ಡಾಟಿ ಪೂವಯ್ಯ ದಂಪತಿ ಪುತ್ರ ಭುವನ್ ಪೊನ್ನಣ್ಣ, ಅಮ್ಮತ್ತಿ ನಿವಾಸಿ ಉದ್ದಪಂಡ ದಿವಂಗತ ಪೂಣಚ್ಚ ಮತ್ತು ಶಾಂಭವಿ ದಂಪತಿ ಪುತ್ರಿ ಹರ್ಷಿಕಾ ಪೂಣಚ್ಚ ಅವರುಗಳ ವಿವಾಹ ಕಾರ್ಯ ವಿರಾಜಪೇಟೆ ಬಳಿಯ ಅಮ್ಮತ್ತಿಯ ಕೊಡವ ಸಮಾಜದಲ್ಲಿ ಕೊಡಗಿನ ಶ್ರೀಮಂತ ಪದ್ಧತಿ, ಪರಂಪರೆ ಮತ್ತು ಕೊಡವ ಸಮುದಾಯದ ಸಂಪ್ರದಾಯದಂತೆ ಶಾಸ್ತ್ರೋಕ್ತವಾಗಿ ನೆರವೇರಿತು. ನವವಧು ಹರ್ಷಿಕಾ ಪೂಣಚ್ಚ, ವರ ಭುವನ್ ಪೊನ್ನಣ್ಣ ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಕಂಗೊಳಿಸುತ್ತಿದ್ದರು. ಎರಡೂ ಕುಟುಂಬಗಳ ಸದಸ್ಯರು,



ಅಪಾರ ಬಂಧು ಬಳಗ ಸಹಿತ ಸಾವಿರಾರು ಮಂದಿ ಭುವನ್ ಪೊನ್ನಣ್ಣ ಮತ್ತು ಹರ್ಷಿಕಾ ಪೂಣಚ್ಚ ಅವರ ವಿವಾಹವನ್ನು ಸಾಕ್ಷೀಕರಿಸಿದರು. ಕೊಡಗಿನ ಸಾಂಪ್ರದಾಯಿಕ ಪಂದಿಕರಿ ಖಾದ್ಯಗಳೊಂದಿಗೆ ನೂಲ್‌ಪುಟ್ಟ್, ಬಿರಿಯಾನಿ, ಚಿಕನ್ ಸೇರಿದಂತೆ ಬಾಯಲ್ಲಿ ನೀರೂರಿಸುವ ವಿಶೇಷ ಮಾಂಸಾಹಾರಿ ಹಾಗೂ ಸಸ್ಯಾಹಾರಿ ಖಾದ್ಯಗಳನ್ನು ಮದುವೆಗಾಗಿ ತಯಾರಿಸಲಾಗಿತ್ತು.



ಗಣ್ಯರ ಆಶೀರ್ವಾದ: ಚಲನಚಿತ್ರ ನಟ–ನಟಿಯರು, ರಾಜಕೀಯ ನಾಯಕರು, ಗಣ್ಯಾತಿಗಣ್ಯರು ವಿವಾಹ ಸಮಾರಂಭದಲ್ಲಿ ಪಾಲ್ಗೊಂಡು ನೂತನ ವಧುವರರಿಗೆ ಶುಭ ಹಾರೈಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬೆಂಗಳೂರು ಶಾಂತಿನಗರದ ಶಾಸಕ ಎನ್.ಎ.ಹ್ಯಾರೀಸ್, ಮಾಜಿ ಸಚಿವರುಗಳಾದ ಮುರುಗೇಶ್ ನಿರಾಣಿ, ಡಾ.ಸುಧಾಕರ್, ಶಾಸಕರಾದ ಎ.ಎಸ್. ಪೊನ್ನಣ್ಣ ಡಾ.ಮಂಥರ್‌ಗೌಡ ಅವರುಗಳು ವಿವಾಹ ಸಮಾರಂಭದಲ್ಲಿ ಪಾಲ್ಗೊಂಡು ನವ ಜೋಡಿಗೆ ಶುಭ ಹಾರೈಸಿದರು. ಸ್ಯಾಂಡಲ್‌ವುಡ್ ನಟ–ನಟಿಯರಾದ ಗೋಲ್ಡನ್ ಸ್ಟಾರ್ ಗಣೇಶ್ ತಮ್ಮ ಪುತ್ರನೊಂದಿಗೆ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಜೈಜಗದೀಶ್ ಮತ್ತು ವಿಜಯ ಲಕ್ಷ್ಮಿಸಿಂಗ್ ದಂಪತಿ, ಅನು ಪ್ರಭಾಕರ್, ರಘು ಮುಖರ್ಜಿ ದಂಪತಿ, ಪೂಜಾಗಾಂಧಿ, ತಬಲಾ ನಾಣಿ, ದೊಡ್ಡಣ್ಣ ಇನ್ನಿತರರು ವಿವಾಹ ಸಮಾರಂಭದಲ್ಲಿ ಪಾಲ್ಗೊಂಡು ನೂತನ ದಂಪತಿಗಳನ್ನು ಹರಸಿದರು.

ನಾಲ್ವರು ಕಾಫಿ ಖದೀಮರ ಬಂಧನ






ಮಡಿಕೇರಿ, ಆ.24– ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ನೆಲ್ಲಿಹುದಿಕೇರಿ ಗ್ರಾಮದಲ್ಲಿ 50 ಕೆ.ಜಿ. ತೂಕದ 4 ಕಾಫಿ ಚೀಲಗಳನ್ನು ಕಳ್ಳತನ ಮಾಡಿದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮಾಲ್ದಾರೆ ಗ್ರಾಮದ ಪ್ರಜ್ವಲ್(22), ಪಿರಿಯಾಪಟ್ಟಣ ರಾಣಿಗೇಟ್ ನಿವಾಸಿಗಳಾದ ರವಿ(34), ಗಣೇಶ(32) ಮತ್ತು ಸ್ವಾಮಿ(23) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ನೆಲ್ಲಿಹುದಿಕೇರಿ ಗ್ರಾಮದ ನಿವಾಸಿ ಲೆಸ್ಲಿ ಪಿಂಟೋ ಎಂಬವರ ತೋಟದ ಸಂಗ್ರಹಣ ಕೊಠಡಿಯಲ್ಲಿ ಇಟ್ಟಿದ್ದ ಕಾಫಿ (ಚೆರಿ) ಚೀಲಗಳನ್ನು ಕಳ್ಳತನ ಮಾಡಿರುವ ಬಗ್ಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಮಡಿಕೇರಿ ಡಿವೈಎಸ್‌ಪಿ ಎಂ.ಜಗದೀಶ್, ಮಡಿಕೇರಿ ನಗರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಹಾಗೂ ರಾಘವೇಂದ್ರ, ಸಿದ್ದಾಪುರ ಪೊಲೀಸ್ ಠಾಣೆ ಸಿಬ್ಬಂದಿಗಳ ವಿಶೇಷ ತಂಡವನ್ನು ರಚಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಿದ್ದಾರೆ.

ಲಕ್ಷ್ಮಮ್ಮ ನಿಧನ



ಕುಶಾಲನಗರ, ಆ.24– ಪಟ್ಟಣದ ಸಿದ್ದಯ್ಯ ಪುರಾಣಿಕ ಬಡಾವಣೆಯಲ್ಲಿ ವಾಸವಾಗಿದ್ದ ಮೂಲತಃ ಹೆಬ್ಬಾಲೆ ಗ್ರಾಮದ ಕನಕ ಬ್ಲಾಕ್ ನಿವಾಸಿ ದಿವಂಗತ ಶಂಕರಯ್ಯ ಅವರ ಪತ್ನಿ ಲಕ್ಷ್ಮಮ್ಮ(78) ಅವರು ಹೃದಯಾಘಾತದಿಂದ ಬುಧವಾರ ರಾತ್ರಿ ನಿಧನರಾದರು. ಮೃತರು ಓರ್ವ ಪುತ್ರ,ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಸ್ವಗ್ರಾಮ ಹೆಬ್ಬಾಲೆ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆಯಿತು.

ದುಡಿಯುವ ಮಹಿಳೆಯರಿಗೆ ಸರ್ಕಾರ ಸೌಲಭ್ಯ ನೀಡಲಿ

ವಿರಾಜಪೇಟೆ, ಆ.24– ಮಹಿಳೆಯರು ಮನೆ ಕೆಲಸ ಮಾಡಿಕೊಂಡು ಪುರುಷರಂತೆ ಎಲ್ಲ ಕ್ಷೇತ್ರಗಳಲ್ಲಿಯೂ ದುಡಿಯುತ್ತಿದ್ದಾರೆ. ಮಹಿಳೆಯರ ಸಮಸ್ಯೆಗಳನ್ನು ಅರಿತುಕೊಂಡು ಅವರ ರಕ್ಷಣೆ ಹಾಗೂ ಸೌಲಭ್ಯಗಳಿಗೆ ಸರ್ಕಾರ ಆದ್ಯತೆ ನೀಡಬೇಕು ಎಂದು ಕಟ್ಟಡ ಕಾರ್ಮಿಕರ ರಾಜ್ಯ ಮಹಿಳಾ ಸಮಿತಿಯ ಸಂಚಾಲಕರಾದ ಸಿ. ಕುಮಾರಿ ಮನವಿ ಮಾಡಿದರು.

ವಿರಾಜಪೇಟೆಯಲ್ಲಿರುವ ಉಪಾಧ್ಯಾಯರ ಸಂಘದ ಕಟ್ಟಡದ ಸಭಾಂಗಣದಲ್ಲಿ ಆಯೋಜಿಸಿದ್ದ ಕಟ್ಟಡ ನಿರ್ಮಾಣ ಕಾರ್ಮಿಕರ ಜಿಲ್ಲಾ ಮಹಿಳಾ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಸರಕಾರಗಳು ಮಹಿಳೆಗೆ ಸಮಾನತೆ ನೀಡಿದ್ದೇವೆ ಎನ್ನುತ್ತವೆ. ಆದರೆ ಇನ್ನು ಬಂದಿಲ್ಲ, ಮಹಿಳೆ ಕೆಲಸ ಮಾಡುವ ಕಡೆ ದೌರ್ಜನ್ಯಗಳು ನಡೆದಲ್ಲಿ ಪ್ರತಿಭಟಿಸಿ ದೂರು ನೀಡಬೇಕು. ಕಾರ್ಮಿಕರಿಗೆ ರಕ್ಷಣೆ ಇಲ್ಲದಂತಾಗಿದೆ. ಕೊಡಗಿನಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಕಡಿಮೆ ಇದ್ದು, ಮಹಿಳಾ ಕಾರ್ಮಿಕರಿಗೆ ಸೌಲಭ್ಯ ಸೇರಿದಂತೆ ಬೇಡಿಕೆಗಳನ್ನು ಈಡೇರಿಸುವಂತೆ ಸೆ.10 ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸಮಾವೇಶದಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.



ಕಟ್ಟಡ ಕಾರ್ಮಿಕರ ಜಿಲ್ಲಾ ಸಂಘದ ಗೌರವ ಅಧ್ಯಕ್ಷ, ವಕೀಲರಾದ ಐ.ಆರ್.ಪ್ರಮೋದ್ ಮಾತನಾಡಿ, ಕಾರ್ಮಿಕ ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗದೆ ಸಂಘಟನೆಯೊಂದಿಗೆ ಸೇರಿ ಕಟ್ಟಡ ಇತರ ನಿರ್ಮಾಣ ಕಾರ್ಯದಲ್ಲಿ ತೊಡಗುವ ಮೂಲಕ ಆದಾಯವನ್ನು ಹೆಚ್ಚಿಸುವುದರೊಂದಿಗೆ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಲು ಮುಂದಾಗಬೇಕು. ಸಂಘಟನೆ ಮೂಲಕ ಸರಕಾರದ ಸೌಲಭ್ಯವನ್ನು ಪಡೆದುಕೊಳ್ಳುವಂತಾಗಬೇಕು ಎಂದರು.

ಪತ್ರಕರ್ತರಾದ ಉಷಾ ಪ್ರೀತಮ್ ಮಾತನಾಡಿ, ದಿನನಿತ್ಯ ಮಹಿಳೆ ಪುರುಷನಿಗಿಂತ ಹೆಚ್ಚು ಕೆಲಸ ಮಾಡುತ್ತಾಳೆ. ಮಹಿಳೆಯು ಜೀವನದಲ್ಲಿ ಅಭಿವೃದ್ಧಿಯತ್ತ ಸಾಗಬೇಕು. ತಮ್ಮ ಹಕ್ಕುಗಳಿಗಾಗಿ ಹೋರಾಟದ ಅನಿವಾರ್ಯತೆ ಇದೆ ಎಂದರು.

ಜಿಲ್ಲಾ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಎ.ಸಿ.ಸಾಬು ಮಾತನಾಡಿ, ಕರ್ನಾಟಕ ಸೇರಿದಂತೆ ದೇಶದಲ್ಲಿ ಸಾವಿರಾರು ಹೆಣ್ಣು ಮಕ್ಕಳು ಕಾಣೆಯಾಗುತ್ತಿದ್ದು, ಇದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರ ಗಮನಹರಿಸುವಂತಾಗಬೇಕು. ಕಟ್ಟಡ ಕಾರ್ಮಿಕರ ಸೌಲಭ್ಯಗಳಿಗಾಗಿ ಜಿಲ್ಲಾ ಸಂಘಟನೆ ಮೂಲಕ ಹೋರಾಟ ನಡೆಸಲು ಕಟ್ಟಡ ಕಾರ್ಮಿಕರು ಮುಂದಾಗಬೇಕು ಎಂದರು.

ಸಿಐಟಿಯು ಸಂಘಟನೆಯ ಜಿಲ್ಲಾ ಅಧ್ಯಕ್ಷ ಪಿ.ಆರ್.ಭರತ್ ಮಾತನಾಡಿ, ಇತ್ತೀಚೆಗೆ ದಿನ ಬಳಕೆಯ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರಿದೆ. ಕೂಲಿ ಕಾರ್ಮಿಕರು ಸಂಕಷ್ಟದಲ್ಲಿರುವುದರಿಂದ ಸೌಲಭ್ಯಗಳಿಗಾಗಿ ಹೋರಾಟ ನಡೆಸಲು ಮುಂದಾಗಬೇಕು ಎಂದರು. ಜಿಲ್ಲಾ ಸಮಿತಿಯ ಪದ್ಮಿನಿ ಸ್ವಾಗತಿಸಿದರು. ಜಿಲ್ಲೆಯ ಇತರೆಡೆಗಳಿಂದ ಮಹಿಳಾ ಸದಸ್ಯರು ಭಾಗವಹಿಸಿದ್ದರು.

ಎಡಿಸಿಯಾಗಿ ಬಿ.ಎನ್.ವೀಣಾ ಅಧಿಕಾರ ಸ್ವೀಕಾರ



ಮಡಿಕೇರಿ, ಆ.24– ಕೊಡಗು ಜಿಲ್ಲೆಗೆ ನೂತನ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಬಿ.ಎನ್.ವೀಣಾ ಕೆಎಎಸ್ (ಹಿರಿಯ ಶ್ರೇಣಿ) ಅವರು ಗುರುವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಬಿ.ಎನ್.ವೀಣಾ ಅವರು ಈ ಹಿಂದೆ ಉಡುಪಿ ಜಿಲ್ಲೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಹಾಗೆಯೇ ತುಮಕೂರು ಜಿಲ್ಲೆಯ ಮಧುಗಿರಿ ಮತ್ತು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಉಪ ವಿಭಾಗಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ನಾಳೆ ಶರಣ ಸಂಸ್ಕೃತಿ ಕುರಿತು ಉಪನ್ಯಾಸ

ಮಡಿಕೇರಿ, ಆ.24– ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸೋಮವಾರಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕೊಡ್ಲಿಪೇಟೆ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಲಸಿನಮರ ಶ್ರೀಮತಿ ಗೌರಮ್ಮ ಶಾಂತಮಲ್ಲಪ್ಪ ಪ್ರಥಮ ದರ್ಜೆ ಕಾಲೇಜು ಕೊಡ್ಲಿಪೇಟೆ ಇವರ ಸಂಯುಕ್ತ ಆಶ್ರಯದಲ್ಲಿ ಆರೋಢ ದಾಸೋಹಿ ಧರ್ಮ ಚಿಂತಾಮಣಿ ಮಹಾಶರಣ ಲಿಂ॥ ವಾಗನೂರು ಬಸಪ್ಪ ದತ್ತಿ ಕಾರ್ಯಕ್ರಮದಂತೆ ಶರಣ ಸಂಸ್ಕೃತಿಯ ಕುರಿತು ಉಪನ್ಯಾಸ ಕಾರ್ಯಕ್ರಮವು ಕೊಡ್ಲಿಪೇಟೆಯ ಹಲಸಿನಮರ ಶ್ರೀಮತಿ ಗೌರಮ್ಮ ಶಾಂತಮಲ್ಲಪ್ಪ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಆ.26 ರಂದು ಬೆಳಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ಬೆಲೆ ಏರಿಕೆ ನಡುವೆ ವರಮಹಾಲಕ್ಷ್ಮಿ ಹಬ್ಬಕ್ಕೆ ಸಿದ್ಧತೆ



ಚಾಮರಾಜನಗರ, ಆ.24– ವರಮಹಾಲಕ್ಷ್ಮಿ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಸಿದ್ಧತೆ ಜೋರಾಗಿ ನಡೆಯುತ್ತಿದ್ದು, ಮಹಿಳೆಯರು ಮಹಾಲಕ್ಷ್ಮಿಯ ಪೂಜೆಗೆ ಸಂಭ್ರಮದಿಂದ ಸಜ್ಜುಗೊಳ್ಳುತ್ತಿದ್ದಾರೆ.

ಜಿಲ್ಲಾ ಕೇಂದ್ರ ಚಾಮರಾಜನಗರ ಸೇರಿದಂತೆ ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರಗಳಲ್ಲಿ ಮಾರುಕಟ್ಟೆಯಲ್ಲಿ ಹಬ್ಬಕ್ಕಾಗಿ ಅಗತ್ಯ ವಸ್ತುಗಳ ಖರೀದಿ ಭರಾಟೆ ಜೋರಾಗಿತ್ತು. ನಗರದ ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ತರಕಾರಿ ಮಾರುಕಟ್ಟೆ ಆವರಣ ಸೇರಿದಂತೆ ಗುರುವಾರ ಮಧ್ಯಾಹ್ನದಿಂದಲೇ ಬಹುತೇಕ ಕಡೆಗಳಲ್ಲಿ ವ್ಯಾಪಾರ ಆರಂಭವಾಗಿತ್ತು.

ಮಹಿಳೆಯರೇ ಹೆಚ್ಚು: ಬೆಲೆ ಏರಿಕೆಯನ್ನು ಲೆಕ್ಕಿಸದೆ ಜನರು ಅಗತ್ಯ ವಸ್ತುಗಳ ಖರೀದಿಯಲ್ಲಿ ನಿರತರಾಗಿದ್ದರು. ಹೂ, ಹಣ್ಣು, ತರಕಾರಿ, ಪೂಜಾ ಸಾಮಗ್ರಿಗಳು ಹಾಗೂ ಅಲಂಕಾರಕ್ಕೆ ಅಗತ್ಯ ವಸ್ತುಗಳನ್ನು ಖರೀದಿಸಲು ಮಹಿಳೆಯರೇ ಹೆಚ್ಚಾಗಿ ಬಂದಿದ್ದು ವಿಶೇಷವಾಗಿತ್ತು ವ್ಯಾಪಾರಿಗಳೊಂದಿಗೆ ಚೌಕಾಸಿ ನಡೆಸುತ್ತಿದ್ದ ದೃಶ್ಯವೂ ಕಂಡು ಬಂತು. ಬಾಳೆ ಕಂದು, ಬೇರಿ ಹಣ್ಣು, ನೈದಿಲೆ ಹಾಗೂ ಇನ್ನಿತರ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇತ್ತು.

ಗಗನಕ್ಕೇರಿದ ದರ: ಹಬ್ಬದ ಹಿನ್ನೆಲೆಯಲ್ಲಿ ಹೂ, ಹಣ್ಣುಗಳ ದರ ಗಗನಕ್ಕೇರಿತ್ತು. ತರಕಾರಿ ಬೆಲೆಯಲ್ಲಿ ಹೆಚ್ಚಿನ ವ್ಯತ್ಯಾಸವಾಗಿಲ್ಲ. ಬಾಳೆ ಕಂದು, ಮಾವಿನ ಸೊಪ್ಪು, ಕಬ್ಬಿನ ಸೋಗೆ ಜೊತೆಯಾಗಿ 30ರಿಂದ 40ಕ್ಕೆ ಮಾರಾಟ ಮಾಡುತ್ತಿದ್ದರು.

ಕನಕಾಂಬರ ಹೂವು ಮೀಟರ್‌ಗೆ 200, ಸುಗಂಧರಾಜ ಮತ್ತು ಹಾರ 50ರಿಂದ 200ರೂ.ವರೆಗೂ ಮಾರಾಟವಾಗುತ್ತಿತ್ತು. ಉಳಿದಂತೆ ಮಲ್ಲಿಗೆ 100, ಚೆಂಡು ಹೂ 30ರಿಂದ 40, ಗುಲಾಬಿ ಒಂದಕ್ಕೆ 15ರಿಂದ 20ರೂ., ಕಾಕಡ 50ರಿಂದ 60ಕ್ಕೆ ಮಾರಾಟವಾಗುತ್ತಿತ್ತು.

ವರಮಹಾಲಕ್ಷ್ಮಿ ಪೂಜೆಗೆ ಬೇಕಾದ ವೀಳ್ಯದ ಎಲೆ ಕಟ್‌ಗೆ 30ರಿಂದ 60, ಕಿತ್ತಳೆ, ಮೊಸಂಬಿ 80ರೂ., ದ್ರಾಕ್ಷಿ 200ರೂ., ದಾಳಿಂಬೆ 140ರೂ., ಸಪೋಟ 100 ರೂ., ಅನಾನಸ್ 50ರೂ., ಸೇಬು 160 ರಿಂದ 180ರೂ. ಗಡಿಗೆ ತಲುಪಿದೆ. ಉಳಿದಂತೆ ಸೀತಾಫಲ, ಸೀಬೆ ಹಣ್ಣುಗಳ ಬೆಲೆ ಕೆ.ಜಿ.ಗೆ 50 ರಿಂದ 80 ಇದೆ. ಏಲಕ್ಕಿ ಬಾಳೆ ದರ ಹೆಚ್ಚಳವಾಗಿದ್ದು, ಕೆ.ಜಿಗೆ 80ರಿಂದ 100ರೂ., ಇತ್ತು. ಪಚ್ಚೆ ಬಾಳೆ 50ರೂ. ಧಾರಣೆಯಿದೆ.

ತಾವರೆ, ನೈದಿಲೆಗೆ ಬೇಡಿಕೆ: ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ತಾವರೆ, ನೈದಿಲೆ ಹೂವಿಗೆ ಬೇಡಿಕೆ ಹೆಚ್ಚುತ್ತದೆ. ಮಾರುಕಟ್ಟೆಯಲ್ಲಿ ಜೋಡಿ ಕಮಲದ ಬೆಲೆ 40 ಇತ್ತು. ಸಾಮಾನ್ಯ ದಿನಗಳಲ್ಲಿ ಕಮಲದ ಹೂವನ್ನು ಯಾರೂ ಕೇಳುವುದಿಲ್ಲ. ಈ ಹಬ್ಬಕ್ಕೆ ಮಾತ್ರ ಮಾರಾಟ ಮಾಡುತ್ತೇವೆ ಎನ್ನುತ್ತಾರೆ ಹೂವಿನ ವ್ಯಾಪಾರಿಗಳು ತರಕಾರಿಗಳ ಪೈಕಿ ಈರುಳ್ಳಿ ಬೆಲೆ ಕೊಂಚ ಹೆಚ್ಚಳವಾಗಿದ್ದು, 30ರಿಂದ 40ರೂ. ಇದೆ. ಉಳಿದಂತೆ ಎಲ್ಲ ತರಕಾರಿಗಳ ಬೆಲೆ ಯಥಾಸ್ಥಿತಿ ಮುಂದುವರಿದಿದೆ.

ಅಲಂಕಾರಿಕ ವಸ್ತುಗಳಿಗೂ ಬೇಡಿಕೆ: ಹಬ್ಬದ ಪ್ರಯುಕ್ತ ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಸಮೀಪದ ಅಂಗಡಿ ಮಳಿಗೆಗಳಲ್ಲಿ ಹಾಗೂ ದೊಡ್ಡ ಅಂಗಡಿ ಬೀದಿಯ ಮಾರುಕಟ್ಟೆಯಲ್ಲಿ ಎಲ್ಲಿ ನೋಡಿದರೂ ವರಮಹಾಲಕ್ಷ್ಮೀ ದೇವಿಯ ಅಲಂಕಾರಿಕ ವಸ್ತುಗಳದ್ದೇ ಭರಾಟೆ. ಲಕ್ಷ್ಮೀ ದೇವಿಯ ಅಲಂಕಾರಕ್ಕೆ ಬಳೆ ಹಾಗೂ ಆಭರಣಗಳ ಖರೀದಿಯಲ್ಲಿ ಮಹಿಳೆಯರು ನಿರತರಾಗಿದ್ದರು.

ಕ್ರೂರ ಮೃಗದ ದಾಳಿಯಿಂದ ಬಾಲಕಿ ಸಾವು

ಅರಣ್ಯ ಇಲಾಖೆ ಕಚೇರಿ ಮುಂದೆ ಶವವಿಟ್ಟು ಪ್ರತಿಭಟನೆ



ಯಳಂದೂರು, ಆ.24– ಕ್ರೂರ ಮೃಗದ ದಾಳಿಯಿಂದ ತಾಲೂಕಿನ ಯರಿಯೂರು ಗ್ರಾಮದಲ್ಲಿ ಆಟವಾಡುತ್ತಿದ್ದ ಬಾಲಕಿ ಮೃತಪಟ್ಟ ಹಿನ್ನೆಲೆಯಲ್ಲಿ ಬಾಲಕಿಯ ಪೋಷಕರು ಹಾಗೂ ಯರಿಯೂರು ಗ್ರಾಮಸ್ಥರು, ಪಟ್ಟಣದ ಅರಣ್ಯ ಇಲಾಖೆ ಕಚೇರಿಯ ಮುಂದೆ ಬಾಲಕಿ ಶವವಿಟ್ಟು ಗುರುವಾರ ಪ್ರತಿಭಟನೆ ನಡೆಸಿದರು.

ಯರಿಯೂರು ಗ್ರಾಮದ ನಾಯಕರ ಬಡಾವಣೆಯ ವಸಂತ ಹಾಗೂ ಆನಂದ್ ಎಂಬುವವರ ಪುತ್ರಿ ರುಕ್ಮಿಣಿ (3) ಎಂಬ ಬಾಲಕಿ ಸುವರ್ಣಾವತಿ ನದಿ ದಡದಲ್ಲಿರುವ ತೋಟದ ಬಳಿ ಆಟವಾಡುತ್ತಿದ್ದಾಗ ಮೃಗ ದಾಳಿ ನಡೆಸಿತ್ತು. ಇದರಿಂದ ಈಕೆಯ ತಲೆಯ ಭಾಗದ ಚರ್ಮ, ಕೂದಲು ಸಮೇತ ಕಿತ್ತು ಬಂದಿದ್ದು, ಕಾಲು, ಗಲ್ಲಕ್ಕೂ ಕಚ್ಚಿ ಗಾಯಗೊಳಿಸಿತ್ತು. ಗಾಯಗೊಂಡ ಈಕೆಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ತೆರಳಿ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಬೀದಿನಾಯಿಗಳು ದಾಳಿ ನಡೆಸಿ ಗಾಯಗೊಳಿಸಿವೆ ಎಂದು ಅರಣ್ಯ ಇಲಾಖೆ ಸಿಬ್ಬಂದಿ ಹೇಳಿದ್ದರು. ಆದರೆ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಕಾಡುಪ್ರಾಣಿಗಳ ದಾಳಿ ನಡೆಸಲಾಗಿದೆ ಎಂದು ವೈದ್ಯಕೀಯ ವರದಿಯನ್ನು ನೀಡಲಾಗಿತ್ತು. ಅರಣ್ಯ ಇಲಾಖೆ ಇದನ್ನು ಒಪ್ಪುತ್ತಿಲ್ಲ. ಈ ಭಾಗದಲ್ಲಿ ಚಿರತೆ, ಸೀಳುನಾಯಿಗಳು ಓಡಾಡುತ್ತಿರುತ್ತವೆ. ಹಾಗಾಗಿ ಇವೇ ಬಾಲಕಿ ಮೇಲೆ ದಾಳಿ ಮಾಡಿವೆ ಎಂಬುದು ಗ್ರಾಮಸ್ಥರ ಆರೋಪವಾಗಿದೆ.

ಶಾಸಕ, ಮಾಜಿ ಶಾಸಕ ಭೇಟಿ: ಸ್ಥಳಕ್ಕೆ ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಮರಾಜನಗರ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಹಾಗೂ ಮಾಜಿ ಶಾಸಕ ಎನ್. ಮಹೇಶ್ ಭೇಟಿ ನೀಡಿದ್ದರು ಇವರೊಂದಿಗೆ ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಮಾಜಿ ಸದಸ್ಯ ಕೊಪ್ಪಾಳಿ ಮಹದೇವನಾಯಕ ಸೇರಿದಂತೆ ಹಲವು ರಾಜಕೀಯ ಮುಖಂಡರು, ಸ್ಥಳೀಯರು ಭೇಟಿ ನೀಡಿದ್ದರು.

50 ಸಾವಿರ ರೂ. ಪರಿಹಾರ: ಸ್ಥಳದಲ್ಲೇ ಪರಿಹಾರ ನೀಡುವಂತೆ ಪಟ್ಟು ಹಿಡಿದಿದ್ದ ಪೋಷಕರು ಹಾಗೂ ಗ್ರಾಮಸ್ಥರೊಂದಿಗೆ ಶಾಸಕರು ಹಾಗೂ ರಾಜಕೀಯ ಮುಖಂಡರು, ಗ್ರಾಮದ ಮುಖಂಡರು ಜೊತೆಗೂಡಿ ಅರಣ್ಯ ಇಲಾಖೆಯ ವತಿಯಿಂದ 50 ಸಾವಿರ ರೂ. ತಕ್ಷಣ ಪರಿಹಾರ ನೀಡುವುದು, ನಂತರ ಮರಣೋತ್ತರ ವರದಿ ಬಂದ ಮೇಲೆ ಇನ್ನುಳಿದ ಪರಿಹಾರ ನೀಡುವ ಭರವಸೆಯನ್ನು ನೀಡಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ ಮುಖ್ಯಮಂತ್ರಿಗಳ ಪರಿಹಾರಗಳ ನಿಧಿಯಿಂದ ಪರಿಹಾರವನ್ನು ಕೊಡಿಸುವ ಭರವಸೆ ನೀಡಿದ ಮೇಲೆ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಎಸಿಎಫ್ ಸುರೇಶ್, ಆರ್‌ಎಫ್‌ಒ ಲೋಕೇಶ್ ಮೂರ್ತಿ, ಡಿವೈಎಸ್‌ಪಿ ಸೋಮೇಗೌಡ, ಸಿಪಿಐ ಶಿವರಾಜ್ ಮುಧೋಳ್, ಪಿಎಸ್‌ಐ ಚಂದ್ರಹಾಸ್ ಸೇರಿದಂತೆ ಯರಿಯೂರು, ಯಳಂದೂರು ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಜನರು ಇದ್ದರು.

ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಕೌನ್ಸೆಲಿಂಗ್

ಚಾಮರಾಜನಗರ, ಆ.24– ಚಾಮರಾಜನಗರ ತಾಲೂಕಿನ ಮಲಯ್ಯನಪುರ ಗ್ರಾಮದಲ್ಲಿರುವ ಆದರ್ಶ ವಿದ್ಯಾಲಯದಲ್ಲಿ ಉಳಿದಿರುವ 6ನೇ ತರಗತಿಯ 19 ಸೀಟುಗಳ ಪ್ರವೇಶಕ್ಕೆ ಆಗಸ್ಟ್ 31ರಂದು ಬೆಳಗ್ಗೆ 10 ಗಂಟೆಗೆ ಕೌನ್ಸೆಲಿಂಗ್ ನಿಗದಿಯಾಗಿದೆ. ಈಗಾಗಲೇ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಮೊಬೈಲ್ ಮೂಲಕ ಸಂದೇಶ ರವಾನೆ ಮಾಡಲಾಗಿದೆ. ಎಲ್ಲಾ ದಾಖಲೆಗಳೊಂದಿಗೆ ಕೌನ್ಸೆಲಿಂಗ್‌ಗೆ ಹಾಜರಾಗಿ ದಾಖಲಾತಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಆದರ್ಶ ವಿದ್ಯಾಲಯದ ಮುಖ್ಯಶಿಕ್ಷಕರ ಮೊ.ಸಂ 8217008446 ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾ ಸಹಕಾರ ಒಕ್ಕೂಟ ನಿರ್ದೇಶಕ ಚುನಾವಣೆ: ಮತ್ತೆ 'ಕೈ' ಪ್ರಾಬಲ್ಯ

ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಅಧ್ಯಕ್ಷ ಮಡಿವಾಳಪ್ಪ ಸೇರಿ 6 ಮಂದಿ ಆಯ್ಕೆ



ಚಾಮರಾಜನಗರ, ಆ.24– ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಸಹಕಾರ ಒಕ್ಕೂಟದ ಆಡಳಿತ ಮಂಡಳಿಯ 6 ಸ್ಥಾನಗಳಿಗೆ ನಡೆದ ಚುನಾವಣೆ ಮತದಾನದಲ್ಲಿ ಕಾಂಗ್ರೆಸ್ ಬೆಂಬಲಿತರು ನಾಲ್ವರು ಹಾಗೂ ಬಿಜೆಪಿ ಬೆಂಬಲಿತರ ಇಬ್ಬರು ಆಯ್ಕೆಯಾಗಿದ್ದಾರೆ. ಉಳಿದಂತೆ ಅವಿರೋಧ ಆಯ್ಕೆ ಸೇರಿ 11 ಮಂದಿ ಕಾಂಗ್ರೆಸ್ ಬೆಂಬಲಿತ, ನಾಲ್ವರು ಬಿಜೆಪಿ ಬೆಂಬಲಿತರು ಒಕ್ಕೂಟದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ನಗರದ ತಾಲೂಕು ಪಂಚಾಯಿತಿ ಕಚೇರಿ ಪಕ್ಕದಲ್ಲಿರುವ ಟಿಎಪಿಸಿಎಂಎಸ್ ಕಟ್ಟಡದಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಆರು ನಿರ್ದೇಶಕ ಸ್ಥಾನಗಳಿಗೆ ಮತದಾನ ನಡೆಯಿತು. ಬಳಿಕ ನಡೆದ ಮತ ಎಣಿಕೆಯಲ್ಲಿ ಅಂತಿಮವಾಗಿ ಆಯ್ಕೆಯಾದವರ ಹೆಸರನ್ನು ಚುನಾವಣಾಧಿಕಾರಿ ದಯಾನಂದ ಘೋಷಣೆ ಮಾಡಿದರು.

ಚಾಮರಾಜನಗರ ತಾಲೂಕು ಪ್ಯಾಕ್ಸ್‌ನಿಂದ ಅಮಚವಾಡಿ ನಾಗಸುಂದರ್ 15 ಮತಗಳನ್ನು ಪಡೆದು ಆಯ್ಕೆಯಾದರೆ, ಉಡಿಗಾಲ ಶಿವಕುಮಾರ್ 13 ಮತಗಳನ್ನು ಪಡೆದರು. ಗುಂಡ್ಲುಪೇಟೆ ಪ್ಯಾಕ್ಸ್‌ನಿಂದ ಬೊಮ್ಮನಹಳ್ಳಿ ಮಡಿವಾಳಪ್ಪ 6 ಮತಗಳನ್ನು ಪಡೆದು ಆಯ್ಕೆಯಾದರೆ, ಅಂಕಹಳ್ಳಿ ರಾಜಶೇಖರಪ್ಪ 5 ಮತ ಪಡೆದುಕೊಂಡರು. ಚಾ.ನಗರ ತಾಲೂಕು ಡೇರಿಗಳ ಕ್ಷೇತ್ರದಿಂದ ಹರದನಹಳ್ಳಿ ಎಚ್.ಎನ್. ಸುಂದರರಾಜ್ 18 ಮತಗಳನ್ನು ಪಡೆದು ಆಯ್ಕೆಯಾದರೆ, ಲಿಂಗನಾಪುರ ಚನ್ನಬಸಪ್ಪ 8 ಮತಗಳನ್ನು ಪಡೆದರು. ಗುಂಡ್ಲುಪೇಟೆ ತಾ. ಡೇರಿಗಳ ಕ್ಷೇತ್ರದಿಂದ ಚಾಮುಲ್ ನಿರ್ದೇಶಕ ಎಚ್.ಎನ್. ನಂಜುಂಡಪ್ರಸಾದ್ 14 ಮತಗಳನ್ನು ಪಡೆದು ಜಯಗಳಿಸಿದರೆ, ಹಸಗೂಲಿ ಉಮೇಶ್ 11 ಮತಗಳನ್ನು ಪಡೆದುಕೊಂಡರು. ಯಳಂದೂರು ತಾಲೂಕು ಡೇರಿಗಳ ಕ್ಷೇತ್ರದಿಂದ ಮಲ್ಲಿಗಹಳ್ಳಿ ಎಂ. ಪ್ರಭುಸ್ವಾಮಿ 8 ಮತಗಳನ್ನು ಪಡೆದು ಜಯಗಳಿಸಿದರೆ, ಅಂಬಳೆ ಎಂ. ಶಿವಾನಂದಸ್ವಾಮಿ 4 ಮತಗಳನ್ನು ಪಡೆದುಕೊಂಡರು. ಚಾ.ನಗರ–ಗುಂಡ್ಲುಪೇಟೆ ತಾಲೂಕು ಡೇರಿಗಳ ಮಹಿಳಾ ಕ್ಷೇತ್ರದಿಂದ ನವಿಲೂರು ದಾಕ್ಷಾಯಿಣಿ 4 ಮತಗಳನ್ನು ಪಡೆದು ಆಯ್ಕೆಯಾದರೆ, ವಡ್ಡಗಲ್‌ಪುರ ಸುಜಾತ 3 ಮತಗಳನ್ನು ಪಡೆದುಕೊಂಡರು.

ಅವಿರೋಧವಾಗಿ ಆಯ್ಕೆಯಾದವರು: ಇನ್ನಿತರ ಸಹಕಾರ ಸಂಘಗಳ ಕ್ಷೇತ್ರದಿಂದ ಒಕ್ಕೂಟದ ಹಾಲಿ ಅಧ್ಯಕ್ಷ ಮಲೆಯೂರು ನಾಗರಾಜು, ಲ್ಯಾಂಪ್ ಸೊಸೈಟಿಗಳ ಎಸ್ಸಿ, ಎಸ್ಟಿ ಮೀಸಲು ಕ್ಷೇತ್ರದಿಂದ ಮುದ್ದಯ್ಯ, ಯಳಂದೂರು ತಾಲೂಕು ಪ್ಯಾಕ್ಸ್‌ನಿಂದ ರವಿ, ಕೊಳ್ಳೇಗಾಲ ಫ್ಯಾಕ್ಸ್‌ನಿಂದ ಪಿ. ಮಹದೇವಸ್ವಾಮಿ, ಕೊಳ್ಳೇಗಾಲ ತಾಲೂಕು ಡೇರಿಗಳ ಕ್ಷೇತ್ರದಿಂದ ರಾಯಪ್ಪ, ಕೊಳ್ಳೇಗಾಲ– ಯಳಂದೂರು ಮಹಿಳಾ ಡೇರಿಗಳ ಕ್ಷೇತ್ರದಿಂದ ಜಯಶೀಲಾ ಹಾಗೂ ಎಲ್ಲಾ ಪಿಎಲ್‌ಡಿ ಬ್ಯಾಂಕ್‌ಗಳ ಕ್ಷೇತ್ರದಿಂದ ಎಚ್.ಎಂ. ಬಸವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ಉಪ ನಿಬಂಧಕ ದಯಾನಂದ ಹಾಗೂ ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯೋಗೇಂದ್ರ ನಾಯಕ್ ಮತ್ತು ಸಿಬ್ಬಂದಿ ಕಾರ್ಯ ನಿರ್ವಹಿಸಿದರು.

ವಿಜಯೋತ್ಸವ: ಕಾಂಗ್ರೆಸ್ ಬೆಂಬಲಿತರು ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಣೆ ಮಾಡಿದರು. ವಿಜೇತರನ್ನು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಬ್ಲಾಕ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ ಮತ್ತು ಮುಖಂಡರು ಅಭಿನಂದಿಸಿ, ವಿಜಯೋತ್ಸವ ಆಚರಿಸಿದರು. ಮುಖಂಡರಾದ ರಾಜಶೇಖರ್, ಶ್ರೀಕಂಠಸ್ವಾಮಿ, ಹಿರಿಬೇಗೂರು ಗುರುಸ್ವಾಮಿ, ಸಾಗಡೆ ಸುರೇಶ್, ಎನ್.ಆರ್. ಪುರುಷೋತ್ತಮ್, ಎಚ್.ಎನ್. ನಾಗರಾಜಮೂರ್ತಿ, ನಂಜುಂಡನಾಯಕ, ನಾಗವಳ್ಳಿ ನಾಗಯ್ಯ, ಬಸುಮರಿ, ಮುತ್ತಿಗೆ ದೊರೆ ಮೊದಲಾದವರು ಇದ್ದರು.

ವಿದ್ಯಾರ್ಥಿಗಳಿಗೆ ಓದಿನಷ್ಟೆ ಕಲಾ ಚಟುವಟಿಕೆಗಳು ಮುಖ್ಯ

ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿಮತ



ಕೊಳ್ಳೇಗಾಲ, ಆ.24– ಓದಿನಷ್ಟೆ ಕಲೆ ಮತ್ತು ಕ್ರೀಡಾ ಚಟುವಟಿಕೆಗಳು ಸಹಾ ಮುಖ್ಯ, ಇಂತಹ ಚಟುವಟಿಕೆಗಳು ಓದಿನ ಜೊತೆ ಜೀವನ ರೂಪಿಸಿಕೊಳ್ಳಲು ಪೂರಕವಾಗಿ ಸಹಕಾರಿಯಾಗಲಿದೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ಅವರು ತಾಲೂಕಿನ ಚಿಲಕವಾಡಿ ಶಂಭುಲಿಂಗೇಶ್ವರ ಪ್ರೌಢಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ, ಕಲೋತ್ಸವ ಮತ್ತು ಪೂರಕ ಪೌಷ್ಟಿಕ ಆಹಾರ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಪೌಷ್ಟಿಕಾಂಶದ ಕಾರ್ಯಕ್ರಮವನ್ನು ಮಕ್ಕಳೆಲ್ಲರೂ ಒಂದೇ ಎಂಬ ಭಾವನೆ ಹೊಂದಬೇಕು ಎಂಬ ಕಾರಣದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಯೋಜನೆ ಜಾರಿಗೊಳಿಸಿದ್ದಾರೆ. ಪ್ರೋಟಿನ್ ಅಂಶವಿರುವ ಮೊಟ್ಟೆಯನ್ನು ಸೇವಿಸಿ ಎಂದು ವೈದ್ಯರು ಹೇಳುತ್ತಾ ಮಾಹಿತಿಯಂತೆ ನೂರಕ್ಕೆ 75ರಷ್ಟು ಮೊಟ್ಟೆ ಸೇವಿಸುವ ಮಕ್ಕಳಿದ್ದಾರೆ ಎಂದು ಹೇಳಲಾಗಿದ್ದು ಮೊಟ್ಟೆಯಲ್ಲಿ ಪ್ರೋಟಿನ್ ಅಂಶವಿರುವ ಕಾರಣ ಮಕ್ಕಳು ಇದರ ಬಳಕೆಗೆ ಮುಂದಾಗಬೇಕು, ಇಂದಿನ ಸಮಾರಂಭದಲ್ಲಿ ವಿದ್ಯಾರ್ಥಿಗಳು ಓಬವ್ವ, ಕಿತ್ತೂರು ರಾಣಿಚನ್ನಮ್ಮ ಸೇರಿದಂತೆ ಅನೇಕ ಗಣ್ಯರ ವೇಷತೊಟ್ಟು ಗಮನ ಸೆಳೆದಿದ್ದಾರೆ.

ಇಂತಹ ಕಾರ್ಯಕ್ರಮಗಳು ಮಕ್ಕಳ ಪ್ರತಿಭೆ ಪ್ರೋತ್ಸಾಹಕ್ಕೆ ಹೆಚ್ಚಿನ ಸಹಕಾರಿಯಾಗಲಿವೆ ಎಂದರು. ಈ ಸಂದರ್ಭದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ ಮಂಜುಳಾ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ಕುಂತೂರು ಗ್ರಾಪಂ ಅಧ್ಯಕ್ಷ ಗಂಗಮ್ಮಣಿ, ಉಪಾಧ್ಯಕ್ಷೆ ನಾಗರತ್ನಮ್ಮ, ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ತೋಟೇಶ್, ನಿರ್ದೇಶಕರಾದ ತೋಟದಪ್ಪ, ರೂಪ ತೋಟೇಶ್ ಇನ್ನಿತರರಿದ್ದರು.

ಮೈಸೂರು ಮಿತ್ರ

ಮೂರನೇ ಪುಟದಿಂದ

ಫಲಾನುಭವಿಗಳ ಕೈ ಸೇರಲಿದೆ ಹಣ

ಕೂಡಲೇ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಲಿದ್ದು, ಆ ಕ್ಷಣದಲ್ಲೇ ಫಲಾನುಭವಿಗಳು ಬ್ಯಾಂಕ್ ಮೂಲಕ ಹಣ ಡ್ರಾ ಮಾಡಿಕೊಳ್ಳಬಹುದು ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ಒಟ್ಟಾರೆ, ಎಲ್ಲಾ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡುವ ಕಾರಣ ಕೆಲವೊಂದು ಬ್ಯಾಂಕ್‌ಗಳಲ್ಲಿ ಸರ್ವರ್ ಸಮಸ್ಯೆ ಎದುರಾಗಬಹುದು. ಹಾಗಾಗಿ ಕೆಲವೆಡೆ ಹಣ ದೊರೆಯುವುದು ಸ್ವಲ್ಪ ತಡವಾಗ ಬಹುದು. ಇದರಿಂದ ಹಣ ಇನ್ನು ದೊರೆತಿಲ್ಲ ಎಂದು ಫಲಾನುಭವಿಗಳು ಆತಂಕಗೊಳ್ಳಬಾರದು ಎಂದು ಡಿ.ಕೆ.ಶಿವಕುಮಾರ್ ಹೇಳಿದರು. ಗೃಹಲಕ್ಷ್ಮಿ ಯೋಜನೆಗೆ ಬೆಳಗಾವಿ ಬದಲು ಮೈಸೂರಿನಲ್ಲಿ ಚಾಲನೆ ನೀಡುತ್ತಿರುವುದರ ಹಿಂದೆ ಯಾವುದೇ ರಾಜಕಾರಣದ ಉದ್ದೇಶವಿಲ್ಲ. ಬೆಳಗಾವಿಯಲ್ಲಿ ಮತ್ತೊಂದು ಕಾರ್ಯಕ್ರಮ ನಡೆಸುವ ಚಿಂತನೆ ಇದೆ. ಅನ್ನಭಾಗ್ಯ ಯೋಜನೆಯನ್ನು ಕಲ್ಬುರ್ಗಿ ಬದಲು ಮೈಸೂರಿನಲ್ಲಿ ಮಾಡಲು ನಿರ್ಧರಿಸಲಾಗಿತ್ತು ಆದರೆ ಅಕ್ಕಿ ವಿಚಾರದಲ್ಲಿ ಒಂದಿಷ್ಟು ಅಡೆತಡೆ ಉಂಟಾದ ಕಾರಣ ಮೈಸೂರಿನಲ್ಲಿ ಮಾಡಲಿಲ್ಲ. ಈಗ ಗೃಹಲಕ್ಷ್ಮಿ ಯೋಜನೆಗೆ ಮೈಸೂರಿನಲ್ಲಿ ಚಾಲನೆ ನೀಡಲಾಗುತ್ತಿದೆ. ಇನ್ನು ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭವನ್ನು ಬೆಂಗಳೂರಿನಲ್ಲಿ ಮಾಡೋಣವೆಂದರೆ ಅಲ್ಲಿ ಟ್ರಾಫಿಕ್ ಸಮಸ್ಯೆ ಆದ ಕಾರಣ ಎಲ್ಲವನ್ನೂ ವಿಚಾರ ಮಾಡಿ ಮೈಸೂರಿನಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಸಮಾರಂಭ ನಡೆಸುತ್ತಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ವಿಮಾನ ನಿಲ್ದಾಣದಿಂದ ನೇರವಾಗಿ ಮೈಸೂರಿನ ಜಿಲ್ಲಾ ಪಂಚಾಯಿತಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್ ಸುಮಾರು ಎರಡು ಗಂಟೆಗಳ ಕಾಲ ನಾಲ್ಕು ಜಿಲ್ಲೆಯ ಜಿಲ್ಲಾಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳ ಸಭೆ ನಡೆಸಿದರು. ವಿಡಿಯೋ ಕಾನ್ಫರೆನ್ಸ್ ಮೂಲಕ ಗೃಹಲಕ್ಷ್ಮಿ ಯೋಜನೆಯನ್ನು ಅಚ್ಚುಕಟ್ಟಾಗಿ ನಡೆಸುವ ಕುರಿತಂತೆ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದರು. ತರುವಾಯ ಡಿ.ಕೆ.ಶಿವಕುಮಾರ್ ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭ ನಡೆಯುವ ಮೈಸೂರಿನ ಮಹಾರಾಜ ಕಾಲೇಜು ಮೈದಾನಕ್ಕೆ ಆಗಮಿಸಿ ಅಲ್ಲಿನ ಪೆಂಡಾಲ್ ನಿರ್ಮಾಣ ಸೇರಿದಂತೆ ಇತರೆ ಸಿದ್ಧತಾ ಕಾರ್ಯಕ್ರಮಗಳ ಬಗ್ಗೆ ಖುದ್ದು ಪರಿಶೀಲನೆ ನಡೆಸಿದರು.

ತರುವಾಯ ಮಾತನಾಡಿದ ಡಿ.ಕೆ.ಶಿವಕುಮಾರ್, ಗೃಹಲಕ್ಷ್ಮಿ ಯೋಜನೆ ಇಡೀ ದೇಶದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದು, 1.10 ಕೋಟಿ ಕುಟುಂಬಗಳ ಯಜಮಾನಿಗೆ ಇದರಿಂದ ಎರಡು ಸಾವಿರ ರೂಪಾಯಿ ಹಣ ದೊರೆಯುತ್ತದೆ. ನಾಡದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಆಗಸ್ಟ್ 30 ರಂದು ಗೃಹಲಕ್ಷ್ಮಿ ಯೋಜನೆಗೆ ವಿಧ್ಯುಕ್ತ ಚಾಲನೆ ನೀಡಲಾಗುತ್ತಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರೂ ಆದ ಸಂಸದ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದರು.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ಫಲಾನುಭವಿಗಳು ಸಮಾರಂಭಕ್ಕೆ ಸಾಕ್ಷಿಯಾಗಲಿದ್ದಾರೆ. ಮೈಸೂರಿನಲ್ಲಿ ಗೃಹಲಕ್ಷ್ಮಿ ಕಾರ್ಯಕ್ರಮ ಆರಂಭವಾದ ಕ್ಷಣದಲ್ಲೇ ಏಕ ಕಾಲಕ್ಕೆ ಕರ್ನಾಟಕದ ಎಲ್ಲಾ ಗ್ರಾಮ ಪಂಚಾಯಿತಿ, ನಗರ ಪಾಲಿಕೆ ಹಾಗೂ ನಗರಸಭೆಯ ವಾರ್ಡ್‌ಗಳಲ್ಲಿ ಆರಂಭವಾಗಲಿದೆ. ಪ್ರತಿಯೊಂದು ಕಡೆ ಕಾರ್ಯಕ್ರಮದ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಂದು ಸಾಂಕೇತಿಕವಾಗಿ ಫಲಾನುಭವಿಗಳ ಜೊತೆ ಸಂವಾದ ಕೂಡ ನಡೆಯಲಿದೆ. ನಾನು ಎರಡು ದಿನ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದು, ನೇರ ಪ್ರಸಾರದ ಟ್ರಯಲ್ ರನ್ ವೀಕ್ಷಿಸುತ್ತೇನೆ. ಈ ಮೂಲಕ ಲೋಪ ದೋಷಗಳನ್ನು ಸರಿಪಡಿಸಿಕೊಂಡು ಅಚ್ಚುಕಟ್ಟಾಗಿ ಸಮಾರಂಭ ನಡೆಸಲಾಗುವುದು ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಕೃಷಿ ಸಚಿವ ಚಲುವರಾಯಸ್ವಾಮಿ, ಶಾಸಕರಾದ ಕೆ.ಹರೀಶ್ ಗೌಡ, ರವಿಶಂಕರ್, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾಧು, ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ನಗರ ಪೊಲೀಸ್ ಆಯುಕ್ತ ರಮೇಶ್ ಸೇರಿದಂತೆ ಹಲವು ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

ಯಾವುದೇ ಸ್ಥಾನಮಾನದ ಭರವಸೆ ನೀಡಿಲ್ಲ

ನೀಡುತ್ತೇವೆ ಎನ್ನುವ ಭರವಸೆ ನೀಡಿಲ್ಲ. ಅವರ ಶಕ್ತಿ, ಸಂಘಟನಾ ಸಾಮರ್ಥ್ಯ ನೋಡಿ ಪರಿಗಣಿಸಲಾಗು ವುದು. ಯಾರು ಪಕ್ಷದ ಬೆಳವಣಿಗೆಗೆ ತಳಮಟ್ಟದಿಂದ ಕೆಲಸ ಮಾಡಿರುತ್ತಾರೆ ಅವರಿಗೆ ಮೊದಲ ಆದ್ಯತೆ ಎಂದರು. ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೇವೆ ಎಂದರೆ ಪ್ರತಿ ನಿಲ್ದಾಣದಲ್ಲೂ ಬಸ್ ಇಳಿದು ಹತ್ತುವಂತೆ ಮಾಡುವುದಲ್ಲ. ಒಮ್ಮೆ ಹತ್ತಿದರೆ ಕಡೆಯ ತನಕವೂ ಇರುವಂತಹ ದೃಢ ನಿರ್ಧಾರ ಮಾಡಬೇಕು. ಬಸ್ ಹತ್ತುವುದು, ಇಳಿಯುವುದು ಮಾಡಬಾರದು. ಮಾಡಿದರೆ ಆಗ ನಮ್ಮ ಬೆಲೆಯನ್ನೇ ಕಳೆದುಕೊಳ್ಳುತ್ತೇವೆ ಎಂದರು. ಪಕ್ಷದಲ್ಲಿ ಹೆಚ್ಚು ಕಾಲ ಇದ್ದಷ್ಟು ಹಿರಿತನ, ಜವಾಬ್ದಾರಿ ಮತ್ತು ಗೌರವ ಬರುತ್ತದೆ. ಬರುವುದು, ಹೋಗುವುದು ಮಾಡಿದರೆ ನಾಯಕತ್ವಕ್ಕೂ ಧಕ್ಕೆಯಾಗುತ್ತದೆ. ಈ ಮಾತನ್ನು ಕೇವಲ ಇಂದು ಪಕ್ಷ ಸೇರ್ಪಡೆಯಾದ ಶಿವಮೊಗ್ಗ ಜಿಲ್ಲೆಯವರಿಗೆ ಮಾತ್ರ ಹೇಳುತ್ತಿಲ್ಲ, ರಾಜ್ಯದ ಸಮಸ್ತ ಕಾರ್ಯಕರ್ತರು, ಮುಖಂಡರಿಗೆ ಹೇಳುತ್ತಿದ್ದೇನೆ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷದ ಸದಸ್ಯತ್ವ ಪಡೆಯುವುದೇ ಒಂದು ಸೌಭಾಗ್ಯ, ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಪಕ್ಷದ ಇತಿಹಾಸವೇ ದೇಶದ ಇತಿಹಾಸ. ಕಾಂಗ್ರೆಸ್ ಪಕ್ಷದ ರಕ್ತ ಸಾಮಾನ್ಯವಾದದ್ದಲ್ಲ. ಈ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಪಕ್ಷ. ಕಾಂಗ್ರೆಸ್ಸಿಗನಾಗುವುದೆಂದರೆ ಅದು ಅಭಿಮಾನದ ಸಂಕೇತ. ಈ ರಾಷ್ಟ್ರಧ್ವಜ ಯಾರ ಹೆಗಲ ಮೇಲಿದೆ ಎಂದರೆ ಅದು ಕಾಂಗ್ರೆಸ್ಸಿಗರ ಹೆಗಲ ಮೇಲೆ ಮಾತ್ರ ನಾವೆಲ್ಲಾ ಅಭಿಮಾನದಿಂದ ಕಾಂಗ್ರೆಸ್ಸಿಗರು ಎಂದು ಹೇಳಿಕೊಳ್ಳಬೇಕು.

ಈಗ ನಾವು ಕೊಡುತ್ತಿರುವ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ- ಜನತಾದಳ ಪಕ್ಷಗಳಿಗೆ ನೀಡಲು ಸಾಧ್ಯವಾಯಿತೇ? ಅರಣ್ಯ ಹಕ್ಕು, ಆದಿವಾಸಿಗಳ ಹಕ್ಕು ಸೇರಿದಂತೆ ಅನೇಕ ಕಾನೂನುಗಳನ್ನು ನೀಡಿದ್ದು ನಮ್ಮ ಕಾಂಗ್ರೆಸ್. ದೇಶದ ಎಲ್ಲಾ ಜಾತಿ, ಧರ್ಮಗಳ ಜನರ ಬದುಕಿನಲ್ಲಿ ಬದಲಾವಣೆ ತಂದಿದ್ದೇವೆ. ದಿವಂಗತ ಬಂಗಾರಪ್ಪ ಅವರು ಆಶ್ರಯ ಯೋಜನೆಗೆ ಹೊಸ ರೂಪ ನೀಡಿದರು. ಗ್ರಾಮ ದೇವತೆಗಳ ದೇವಾಲಯ ಜೀರ್ಣೋದ್ಧಾರಕ್ಕೆ ಆರಾಧನಾ ಯೋಜನೆ ಪ್ರಾರಂಭ ಮಾಡಿದ್ದೇ ಬಂಗಾರಪ್ಪ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ. ಪಕ್ಷ ಸೇರ್ಪಡೆಯಾದ ಆಯನೂರು ಮಂಜುನಾಥ್ ಅವರು ಬಿಜೆಪಿಗೆ ಹೋದರು, ಜೆಡಿಎಸ್ ಸೇರಿದರು. ಆದರೆ ಕಾಂಗ್ರೆಸ್ ಪಕ್ಷದ ಬಗೆಗಿನ ಒಲವು ಅವರನ್ನು ಮತ್ತೆ ಕರೆತಂದಿದೆ. ಎಲ್ಲಾ ನದಿಗಳು ಸಮುದ್ರ ಸೇರಿದಂತೆ ಎಲ್ಲರೂ ಕಾಂಗ್ರೆಸ್ ಸೇರಲೇಬೇಕು. ನಮ್ಮ ಪಕ್ಷ ಸಮುದ್ರ ಇದ್ದಂತೆ.

ಕಾಂಗ್ರೆಸ್ ಪಕ್ಷ ತಾಯಿ ಇದ್ದಂತೆ, ಮೊದಲು ತಾಯಿ ಆನಂತರ ನಾವೆಲ್ಲಾ. ನಾನು ಮತ್ತು ಮುಖ್ಯಮಂತ್ರಿಗಳು ಸೇರಿ ತೀರ್ಮಾನ ಮಾಡಿದ್ದೇವೆ. ಇದು ಕೇವಲ ನನ್ನೊಬ್ಬನ ತೀರ್ಮಾನವಲ್ಲ. ಇಷ್ಟೊಂದು ಮಟ್ಟದಲ್ಲಿ ಪಕ್ಷ ಸೇರ್ಪಡೆಯಾಗುತ್ತಿರುವುದು ನೋಡಿ ಸಂತೋಷವಾಗುತ್ತಿದೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕೆಲವೊಂದು ಕ್ಷೇತ್ರದಲ್ಲಿ ಸೋಷಿಯಲ್ ಎಂಜಿನಿಯರಿಂಗ್ ತಿಳಿದುಕೊಳ್ಳದೆ ಎಡವಟ್ಟಾಯಿತು. ಲೋಕಸಭೆಯಲ್ಲಿ ಸರಿಪಡಿಸಿಕೊಳ್ಳುತ್ತೇವೆ.

ಗೃಹಲಕ್ಷ್ಮೀ ಯೋಜನೆ ಇದೇ ಆ.30 ಕ್ಕೆ ಮೈಸೂರಿನಲ್ಲಿದೆ, ಆನಂತರ ಎಲ್ಲಾ ಜಿಲ್ಲಾ ಮಟ್ಟದ ಫಲಾನುಭವಿಗಳನ್ನು ಸೇರಿಸಿ ಕಾರ್ಯಕ್ರಮ ಮಾಡುವ ಉದ್ದೇಶವಿದೆ.

ಕಾರ್ಡ್‌ದಾರರಿಗೆ ಎರಡನೇ ಕಂತಿನ ಹಣ ಪಾವತಿ

ಡಿಬಿಟಿ ಪೋರ್ಟಲ್ ಹಾಗೂ ಖಜಾನೆ ಇಲಾಖೆಯ ಕೆ2 ಪೋರ್ಟಲ್ ಮೂಲಕ ಬಿಪಿಎಲ್ ಕಾರ್ಡ್‌ನಲ್ಲಿರುವ ಪ್ರತಿ ಸದಸ್ಯನಿಗೆ ಕೆಜಿಗೆ 34 ರೂ.ನಂತೆ 5 ಕೆಜಿ ಅಕ್ಕಿಗೆ 170 ರೂ.ನಗದು ಹಣವನ್ನು ಡಿಬಿಟಿ ಮುಖೇನ ಕುಟುಂಬದ ಮುಖ್ಯಸ್ಥರ ಖಾತೆಗೆ ಹಾಕಲಾಗುತ್ತಿದೆ. ಅದೇ ರೀತಿ, ಅಂತ್ಯೋದಯ ಕಾರ್ಡ್‌ನಲ್ಲಿ ಒಬ್ಬರಿಗೆ 170 ರೂ, ಐದು ಸದಸ್ಯರಿದ್ದರೆ 510 ರೂ, ಆರು ಸದಸ್ಯರಿದ್ದರೆ 850 ರೂ. ಹಣ ಹಾಕಲಾಗುತ್ತಿದೆ.

ಅಕ್ಕಿ ಬದಲು ಹಣ ನೀಡುವ ಯೋಜನೆ ಸಂಬಂಧಪಟ್ಟಂತೆ ಈಗಾಗಲೇ ಇಲಾಖೆ ಮಾರ್ಗಸೂಚಿ ಪ್ರಕಟಿಸಿದೆ. ಕುಟುಂಬದ ಮುಖ್ಯಸ್ಥರು ಬ್ಯಾಂಕ್ ಖಾತೆ ಹೊಂದಿಲ್ಲದಿದ್ದರೆ, ಖಾತೆಯೊಂದಿಗೆ ಆಧಾರ್ ಜೋಡಣೆ ಮಾಡಿರದಿದ್ದರೆ, ಖಾತೆ ಲಭ್ಯ ಇಲ್ಲದಿದ್ದಲ್ಲಿ, ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಮಾಹಿತಿಯನ್ನು ಆಧಾರ್ ಸಂಖ್ಯೆಯೊಂದಿಗೆ ಜೋಡಣೆ ಮಾಡಿದ ನಂತರ ಹಾಗೂ ನಿಷ್ಕ್ರಿಯ ಬ್ಯಾಂಕ್ ಖಾತೆಯನ್ನು ಪುನರ್ಜೀವಗೊಳಿಸಿದ ನಂತರ ನಗದು ಸೌಲಭ್ಯ ದೊರೆಯಲಿದೆ. ಮುಖ್ಯಸ್ಥರನ್ನು ನಿಗದಿಪಡಿಸದ ಕುಟುಂಬಗಳು ಮುಖ್ಯಸ್ಥರನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದಕ್ಕಿಂತ ಹೆಚ್ಚು ಮುಖ್ಯಸ್ಥರನ್ನು ಹೊಂದಿರುವ ಕುಟುಂಬಗಳು, ಮಹಿಳೆಯನ್ನು ಕುಟುಂಬದ ಮುಖ್ಯಸ್ಥರನ್ನಾಗಿ ನೇಮಿಸಬೇಕು. ಕುಟುಂಬದ ಮುಖ್ಯಸ್ಥರನ್ನು ಹೊಂದಿರುವ ಪಡಿತರ ಚೀಟಿಗಳ ವಿವರ ನ್ಯಾಯಬೆಲೆ ಅಂಗಡಿಗಳಿಗೆ ಒದಗಿಸಬೇಕು. ಬಳಿಕ ಅವರಿಗೆ ಸೌಲಭ್ಯ ದೊರೆಯಲಿದೆ.

ತಮಿಳುನಾಡಿಗೆ ಹರಿಯುತ್ತಿದ್ದ ನೀರು ಬಂದ್

ಸೂತ್ರ ಅನುಸರಣೆ ಸಂಬಂಧ ಪ್ರಾಧಿಕಾರ ಮತ್ತು ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸುವ ಬಗ್ಗೆ, ಸರ್ವ ಪಕ್ಷ ಸಭೆ ಕರೆದು ಚರ್ಚೆ ನಡೆಸಿ, ಕಾನೂನು ಹೋರಾಟ ನಿರ್ಧಾರಕ್ಕೆ ಬಂದಿತ್ತು. ಜೊತೆಗೆ ಪ್ರಧಾನಿ ಮಧ್ಯ ಪ್ರವೇಶಕ್ಕೆ ಮನವಿ ಮಾಡಲು ತೀರ್ಮಾನ ಮಾಡಲಾಗಿತ್ತು. ಸದ್ಯ ತಮಿಳುನಾಡಿಗೆ ಕಾವೇರಿ ನೀರನ್ನು ನಿಲ್ಲಿಸಿದ್ದು, ನಿನ್ನೆ ಕೆಆರ್‌ಎಸ್ ಅಣೆಕಟ್ಟೆಯಿಂದ ನದಿಗೆ 8964 ಕ್ಯೂಸೆಕ್ ಬಿಡಲಾಗುತ್ತಿತ್ತು. ಇಂದು ಬೆಳಗ್ಗೆಯೂ ಸಹ 10,720 ಕ್ಯೂಸೆಕ್ ನದಿಗೆ ಬಿಡಲಾಗುತ್ತಿತ್ತು. ಬಳಿಕ ನೀರು ನಿಲ್ಲಿಸಿದ ಪರಿಣಾಮ ಸಂಜೆ ವೇಳೆಗೆ ಹೊರ ಹರಿವು 3130 ಇದ್ದು, ನಾಲೆಗಳಿಗೆ ಅನುಕೂಲವಾಗಲಿ ಎಂದು ಕೆಲ ಪ್ರಮಾಣದ ನೀರನ್ನು ಬಿಡಲಾಗುತ್ತಿದ್ದು, ತಮಿಳುನಾಡಿಗೆ ಸಂಪೂರ್ಣವಾಗಿ ನೀರು ನಿಲ್ಲಿಸಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಸೂಪರಿಡೆಂಟ್ ಇಂಜಿನಿಯರ್ ರಘುರಾಂ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಸೆ.1ರಿಂದ ಪ್ಲಾಸ್ಟಿಕ್ ನಿಷೇಧ

- ಅರಣ್ಯಾಧಿಕಾರಿಗಳಿಂದ ಬೆಟ್ಟದಲ್ಲಿ ಜಾಗೃತಿ
- ಪ್ರತಿ ಮಳಿಗೆಗೂ ಭಿತ್ತಿಪತ್ರ ಹಂಚಿ ಅರಿವು ಮೂಡಿಸಿದ ಸಿಬ್ಬಂದಿ
- ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟದ ಅಭಿಯಾನಕ್ಕೆ ಸಹಕಾರ ಕೋರಿದ ಅಧಿಕಾರಿಗಳು



ಸೆ.1ರಿಂದ ದಂಡದ ನಿಯಮ ಜಾರಿ

ಅರಣ್ಯ ಇಲಾಖೆ ಹೊಸದಾಗಿ ಜಾರಿಗೆ ತಂದಿರುವ ದಂಡದ ನಿಯಮ ಸೆ.1ರಿಂದ ಜಾರಿಗೊಳಿಸಲಾಗುತ್ತದೆ. ಚಾಮುಂಡಿಬೆಟ್ಟ ಅರಣ್ಯ ಪ್ರದೇಶಕ್ಕೆ ಅತಿಕ್ರಮ ಪ್ರವೇಶಕ್ಕೆ 500 ರೂ., ಬೆಟ್ಟದ ರಸ್ತೆಯಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡಿದರೆ 1000 ರೂ., ರಸ್ತೆಯುದ್ದಕ್ಕೂ ಆಹಾರ ಪೊಟ್ಟಣ, ಪ್ಲಾಸ್ಟಿಕ್ ಕವರ್, ನೀರಿನ ಬಾಟಲಿ ಸೇರಿದಂತೆ ಇನ್ನಿತರ ತ್ಯಾಜ್ಯ ಎಸೆದರೆ 500 ರೂ., ಬೆಟ್ಟದ ಮೇಲಿನ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಮಾರಾಟ, ಬಳಕೆ ಮಾಡಿ ಮೊದಲ ಬಾರಿಗೆ ಸಿಕ್ಕಿ ಬಿದ್ದರೆ 2500 ರೂ., ಎರಡನೇ ಬಾರಿ ಸಿಕ್ಕಿ ಬಿದ್ದರೆ 5 ಸಾವಿರ, ಮೂರನೇ ಬಾರಿ ಸಿಕ್ಕಿ ಬಿದ್ದರೆ 10 ಸಾವಿರ ದಂಡ ವಿಧಿಸಿ, ಲೈಸೆನ್ಸ್ ರದ್ದು ಮಾಡಲು ಶಿಫಾರಸ್ಸು ಮಾಡುವುದಾಗಿ ಎಚ್ಚರಿಕೆ ನೀಡಲಾಗಿದೆ. ಬೆಟ್ಟದ ನಿವಾಸಿಗಳನ್ನು ಹೊರತುಪಡಿಸಿ, ರಾತ್ರಿ 10ರಿಂದ ಬೆಳಗ್ಗೆ 6 ಗಂಟೆವರೆಗೆ ಅನಧಿಕೃತವಾಗಿ ಬೆಟ್ಟ ಪ್ರವೇಶಿಸುವ ಹೊರಗಿನವರಿಗೆ 2500 ರೂ., ಈ ವೇಳೆ ಮದ್ಯಪಾನ, ಧೂಮಪಾನ ಮಾಡಿದ್ದರೆ, ಇನ್ನಿತರ ಹಾನಿಕಾರಕ ವಸ್ತುಗಳನ್ನು ಹೊಂದಿದ್ದರೆ 5 ಸಾವಿರ ರೂ. ದಂಡ, ವನ್ಯಪ್ರಾಣಿಗಳಿಗೆ ಆಹಾರ ನೀಡುವುದು, ಉಪಟಳ ನೀಡುವವರಿಗೆ 1 ಸಾವಿರ ರೂ., ನಾನಾ ವಿಧದಲ್ಲಿ ಅರಣ್ಯ ಸಂಪತ್ತಿಗೆ ಹಾನಿಯುಂಟು ಮಾಡುವವರಿಗೂ 1 ಸಾವಿರ ರೂ. ದಂಡ ವಿಧಿಸುವುದಾಗಿ ಪ್ರಕಟಿಸಲಾಗಿದೆ. ಚಾಮುಂಡಿಬೆಟ್ಟದ ಪರಿಸರ ಹಾಗೂ ಪಾವಿತ್ರ್ಯತೆ ಸಂರಕ್ಷಣೆಗೆ ಸಾರ್ವಜನಿಕರು ಹಾಗೂ ಬೆಟ್ಟದ ನಿವಾಸಿಗಳು ಸಹಕರಿಸುವಂತೆ ಮನವಿ ಮಾಡಲಾಗಿದೆ.

ಮೈಸೂರು,ಆ.24(ಎಂಟಿವೈ)- ಮೈಸೂರಿನ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣ ಚಾಮುಂಡಿಬೆಟ್ಟದಲ್ಲಿ ಸೆ.1ರಿಂದ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ನಿಷೇಧಿಸುವುದರ ಜೊತೆಗೆ ಧಾರ್ಮಿಕ ಭಾವನೆಗೆ ಧಕ್ಕೆಯುಂಟು ಮಾಡುವ ಚಟುವಟಿಕೆ ತಡೆಗೆ ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಸಂಬಂಧ ಅರಣ್ಯಾಧಿಕಾರಿಗಳ ತಂಡ ಚಾಮುಂಡಿಬೆಟ್ಟದ ವ್ಯಾಪಾರ ಮಳಿಗೆಗಳಿಗೆ ಭಿತ್ತಿಪತ್ರ ಹಂಚುವ ಮೂಲಕ ಜಾಗೃತಿ ಮೂಡಿಸಿತು.

ಮೈಸೂರು ನಗರದ ಹಸಿರೀಕರಣ ವಲಯ ವ್ಯಾಪ್ತಿಗೆ ಒಳಪಡುವ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ ಹೆಚ್ಚಾಗಿದ್ದು, ಇದರಿಂದ ಬೆಟ್ಟದ ಅರಣ್ಯ ಪ್ರದೇಶಕ್ಕೆ ಧಕ್ಕೆಯಾಗುತ್ತಿದೆ. ಅಲ್ಲದೆ, ಬೆಟ್ಟದ ಪರಿಸರದ ಪ್ರಾಣಿ-ಪಕ್ಷಿ ಸಂಕುಲಕ್ಕೂ ಅಪಾಯಕಾರಿ ಆಗಿರುವ ಹಿನ್ನೆಲೆಯಲ್ಲಿ ಸೆ.1ರಿಂದ ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗುತ್ತಿದೆ. ಇದರೊಂದಿಗೆ ಬೆಟ್ಟದ ಧಾರ್ಮಿಕ ಪಾವಿತ್ರ್ಯತೆಗೆ ಧಕ್ಕೆಯಾಗುವ ಅನೈತಿಕ ಚಟುವಟಿಕೆಗೂ ಕಡಿವಾಣ ಹಾಕಲು ನಿರ್ಧರಿಸಿ, ಕೆಲ ನಿಯಮ ಜಾರಿಗೊಳಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಡಿಆರ್‌ಎಫ್ ಸತೀಶ್ ನೇತೃತ್ವದಲ್ಲಿ ಚಾಮುಂಡಿಬೆಟ್ಟದಲ್ಲಿರುವ ಎಲ್ಲಾ ಮಳಿಗೆಗಳಿಗೆ ಕರಪತ್ರ ಹಂಚುವ ಮೂಲಕ ಜಾಗೃತಿ ಮೂಡಿಸಿದರು.

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧದ ಜೊತೆಗೆ ಧೂಮಪಾನ, ಮದ್ಯಪಾನ ನಿರ್ಬಂಧ, ಎಲ್ಲೆಂದರಲ್ಲಿ ವಾಹನ ನಿಲುಗಡೆ, ಅರಣ್ಯ ಅಕ್ರಮ ಪ್ರವೇಶಕ್ಕೆ ಕಡಿವಾಣ ಹಾಕಿರುವ ಬಗ್ಗೆಯೂ ಬೆಟ್ಟದ ನಿವಾಸಿಗಳು, ವ್ಯಾಪಾರಸ್ಥರು ಹಾಗೂ ಬೆಟ್ಟಕ್ಕೆ ಬರುವ ಪ್ರವಾಸಿಗರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ. ಅದರಲ್ಲೂ ಬೆಟ್ಟದಲ್ಲಿರುವ ಪೂಜಾ ಸಾಮಗ್ರಿಗಳ ಮಾರಾಟ ಮಳಿಗೆ, ವಿವಿಧ ಅಂಗಡಿಗಳ ಮಾಲೀಕರಿಗೂ ಖಡಕ್ ಎಚ್ಚರಿಕೆ ನೀಡಲಾಗಿದ್ದು, ನಿಯಮ ಉಲ್ಲಂಘಿಸಿ ಪ್ಲಾಸ್ಟಿಕ್ ಮಾರಾಟ, ಬಳಕೆ ಮಾಡಿದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗುತ್ತಿದೆ.

ಅರಣ್ಯ ಇಲಾಖೆ ವತಿಯಿಂದ ಮುದ್ರಿಸಿರುವ ಈ ಕರಪತ್ರದಲ್ಲಿ ಬೆಟ್ಟದ ಸೂಕ್ಷ್ಮ ಪರಿಸರ ವಲಯವನ್ನು ಕಾಪಾಡುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 76 ಹಾಗೂ 99(1)ರಂತೆ ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 69ರಡಿ ಕಾನೂನುಬಾಹಿರ ಕೃತ್ಯದಲ್ಲಿ ಭಾಗಿಯಾಗುವವರಿಗೆ ದಂಡ ವಿಧಿಸುವ ಎಚ್ಚರಿಕಾ ಸಂದೇಶವಿದೆ.

ಸೌಜನ್ಯ ಪ್ರಕರಣ ಮರು ತನಿಖೆಗೆ ಆಗ್ರಹಿಸಿ ಪಾದಯಾತ್ರೆ



ಮೈಸೂರು, ಆ.24(ಜಿಎ)- ಸೌಜನ್ಯ ಕೇಸ್ ಮರು ತನಿಖೆ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಆ.26ರಂದು ಬೆಳ್ತಂಗಡಿಯಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಪಕ್ಷದ ಮೈಸೂರು ಘಟಕದ ಉಪಾಧ್ಯಕ್ಷ ಡಿ.ಪಿ.ಕೆ.ಪರಮೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಪಕ್ಷದ ಅಧ್ಯಕ್ಷರಾದ ರವಿ ಕೃಷ್ಣಾ ರೆಡ್ಡಿ ನೇತೃತ್ವದಲ್ಲಿ ಬೆಳ್ತಂಗಡಿಯಿಂದ ಧರ್ಮಸ್ಥಳದ ಮಾರ್ಗವಾಗಿ ಬೆಂಗಳೂರಿಗೆ 330 ಕಿಮೀ ಪಾದಯಾತ್ರೆ ನಡೆಯಲಿದ್ದು, ಸೆ.7ರಂದು ಈ ಯಾತ್ರೆ ಬೆಂಗಳೂರು ತಲುಪಲಿದೆ ಎಂದರು.

ಸೆ.8ರಂದು ವಿಧಾನಸೌಧಕ್ಕೆ ತೆರಳಿ ರಾಜ್ಯದ ಜನತೆಯ ಪರವಾಗಿ ಸೌಜನ್ಯ ಹತ್ಯೆಯ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮರು ತನಿಖೆ ನಡೆಸಲು ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ, ಕೊಲೆ ಪ್ರಕರಣಗಳ ಶೀಘ್ರ ವಿಲೇವಾರಿಗೆ ವಿಶೇಷ ತಂಡ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಲಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಪದಾಧಿಕಾರಿಗಳಾದ ರಾಜೇಂದ್ರ, ನಾಗೇಂದ್ರ, ಶ್ರೀವಾರಿ ನಾಗರಾಜ್, ನಾ.ಸಾ. ಪ್ರವೀಣ್, ತಿಮ್ಮಬೋದಿ ಉಪಸ್ಥಿತರಿದ್ದರು.

ಆ.29ರಂದು ದೇಹದಾರ್ಢ್ಯ ಸ್ಪರ್ಧೆ



ಮೈಸೂರು, ಆ.24(ಜಿಎ)-ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಕರ್ನಾಟಕ ಕ್ರೀಡಾ ಪ್ರತಿಷ್ಠಾನದ ವತಿಯಿಂದ ಆ.29ರಂದು ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸ್ಪರ್ಧೆಯ ವ್ಯವಸ್ಥಾಪಕ ಇ.ಹರೀಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6 ಗಂಟೆಗೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಏರ್ಪಡಿಸಿರುವ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆಗೆ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಲಿದ್ದಾರೆ ಎಂದರು.

ಪುರುಷರಿಗೆ ಮಾತ್ರವಲ್ಲದೆ, ಮಹಿಳೆಯರಿಗೂ 'ವಿಮೆನ್ಸ್ ಫಿಸಿಕ್' ಪ್ರದರ್ಶನವನ್ನು ಏರ್ಪಡಿಸಿದ್ದು, ಕಾರ್ಯಕ್ರಮದಲ್ಲಿ ಏಕಲವ್ಯ ಪ್ರಶಸ್ತಿ ಪುರಸ್ಕೃತರು ಸೇರಿದಂತೆ ಅಂತರರಾಷ್ಟ್ರೀಯ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಾಜ ಸೇವಕ ಮಹೇಂದ್ರ ಸಿಂಗ್ ಕಾಳಪ್ಪ, ಉದ್ಯಮಿ ವಿಕ್ರಂ, ವಿದ್ಯಾ, ಆಕಾಶ್ ಆರಾಧ್ಯ ಮತ್ತು ನಾಗಶ್ರೀ ಉಪಸ್ಥಿತರಿದ್ದರು.

ವಿವಿಧ ಸಂಘ-ಸಂಸ್ಥೆಗಳಿಂದ ಬಿಳಿಗೂಳಿ ಗ್ರಾಮ ದತ್ತು ಪಡೆದು ಅಭಿವೃದ್ಧಿ



ಮೈಸೂರು, ಆ.24(ಜಿಎ)-ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಬಿಳಿಗೂಳಿ ಗ್ರಾಮವನ್ನು ಆ.26ರಂದು ಯೂತ್ ಫಾರ್ ಸೇವಾ ಸಂಸ್ಥೆ, ರೋಟರಿ ಬೃಂದಾವನ ಮತ್ತು ಸಾಮಾಜಿಕ ನ್ಯಾಯ ವೇದಿಕೆಯು ದತ್ತು ಸ್ವೀಕಾರ ಮಾಡಲಿವೆ ಎಂದು ಯೂತ್ ಫಾರ್ ಸೇವಾ ಸಂಸ್ಥೆ ಪದಾಧಿಕಾರಿ ಹರೀಶ್ ಶೆಣೈ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಳಿಗೂಳಿ ಗ್ರಾಮದಲ್ಲಿ ಸಾಕ್ಷರತೆ ಹೆಚ್ಚಳ, ಗ್ರಾಮದ ಕೆರೆ ಪುನರುಜ್ಜೀವನ ಸೇರಿದಂತೆ ಸಾಮಾಜಿಕ ಸುಧಾರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಇದರಿಂದ ಕೆಲವೇ ದಿನಗಳಲ್ಲಿ ಇಡೀ ಗ್ರಾಮದ ಚಿತ್ರಣ ಬದಲಾಗುವ ವಿಶ್ವಾಸವಿದೆ ಎಂದರು.

ಗ್ರಾಮದಲ್ಲಿ ಒಟ್ಟು 708 ಕುಟುಂಬಗಳು ವಾಸಿಸುತ್ತಿವೆ. ಆದರೆ ಇಲ್ಲಿನ ಸಾಕ್ಷರತಾ ಪ್ರಮಾಣ ತೀರಾ ಕಡಿಮೆಯಾಗಿದೆ. ಪರಿಶಿಷ್ಟ ಜಾತಿ ಸಮುದಾಯದವರೇ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ಸಂಸ್ಥೆಗಳ ವತಿಯಿಂದ ಪ್ರತಿ ಮನೆಗೂ ಭೇಟಿ ನೀಡಿ, ಮಹಿಳೆಯರ ಸಬಲೀಕರಣ, ಮಕ್ಕಳ ಶಿಕ್ಷಣ, ಮಹಿಳಾ ಉದ್ಯಮಶೀಲತೆಗೆ ಪ್ರೋತ್ಸಾಹ, ಉಚಿತವಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಮೂಲಕ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಲಾಗುತ್ತದೆ. ನಮ್ಮೊಟ್ಟಿಗೆ ಮೈಸೂರಿನ ಎಟಿಎಂಇ ಮತ್ತು ವಿದ್ಯಾ ವಿಕಾಸ ಸಂಸ್ಥೆಯ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ. ಯತೀಶ್, ಸತೀಶ್ ಮೇತ್ರಿ, ಶ್ರೀನಿಧಿ ಮೂರ್ತಿ, ಧರ್ಮಾನಂದ, ಎಸ್. ನಾಗೇಶ್, ದೀಪಕ್ ಆರಾಧ್ಯ ಉಪಸ್ಥಿತರಿದ್ದರು.

ಹುತ್ತಕ್ಕೆ ಎರೆಯುವ ಹಾಲು ವ್ಯರ್ಥ; ಆಸ್ತಿಕರಲ್ಲಿ ಜಾಗೃತಿ

ಶಾಲಾ ಮಕ್ಕಳಿಗೆ ಹಾಲು ವಿತರಿಸಿದ ಮಾನವ ಬಂಧುತ್ವ ವೇದಿಕೆ



ಮೈಸೂರು,ಆ.24(ಎಂಟಿವೈ)- ನಾಗರ ಪಂಚಮಿ ಸೇರಿದಂತೆ ಕೆಲವು ವಿಶೇಷ ಸಂದರ್ಭಗಳಲ್ಲಿ ಹುತ್ತ ಹಾಗೂ ನಾಗರ ಕಲ್ಲಿಗೆ ಎರೆಯುವ ಹಾಲನ್ನು ಸೌಲಭ್ಯ ವಂಚಿತ ಶಾಲಾ ಮಕ್ಕಳಿಗೆ ನೀಡುವಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾನವ ಬಂಧುತ್ವ ವೇದಿಕೆಯ ಕಾರ್ಯಕರ್ತರು, ತಿಲಕ್‌ನಗರದ ಸರ್ಕಾರಿ ಅಂಧ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಗೆ ಹಾಲು ವಿತರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಮೌಢ್ಯತೆ ಹೋಗಲಾಡಿಸುವ ನಿಟ್ಟಿನಲ್ಲಿ ಮಾನವ ಬಂಧುತ್ವ ವೇದಿಕೆ ವಿವಿಧ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು, ನಾಗರಪಂಚಮಿಗೆ ಬದಲಾಗಿ ಬಸವ ಪಂಚಮಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಕ್ಕಳಿಗೆ ಹಾಲು ವಿತರಿಸಿ ಅರಿವು ಮೂಡಿಸಲಾಯಿತು. ತಿಲಕ್‌ನಗರದಲ್ಲಿರುವ ಅಂಧ ಮಕ್ಕಳಿಗೆ ಬಿಸಿ ಹಾಲನ್ನು ನೀಡಿದರೆ, ಮಂಡಿಪೇಟೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಅರ್ಧ ಲೀಟರ್ ನಂದಿನಿ ಹಾಲು ವಿತರಿಸಲಾಯಿತು.

ಇದೇ ವೇಳೆ ಮಾನವ ಬಂಧುತ್ವ ವೇದಿಕೆಯ ಮೈಸೂರು ವಿಭಾಗೀಯ ಸಂಚಾಲಕರಾದ ಡಾ.ಲೀಲಾ ಸಂಪಿಗೆ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಆಚರಿಸುತ್ತಿರುವಂತಹ ಮೌಢ್ಯ, ಕಂದಾಚಾರದ ಬಗ್ಗೆ ಅರಿವು ಮೂಡಿಸುವುದರೊಂದಿಗೆ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡು ವೈಚಾರಿಕತೆ, ಪ್ರಬುದ್ಧತೆಯನ್ನು ರೂಢಿಸಿಕೊಳ್ಳುವಂತೆ ಸಲಹೆ ನೀಡಿದರು.

ಸಾಮಾಜಿಕ ಹೋರಾಟಗಾರರಾದ ಪ್ರೇಮ ಬೋಧಿ ಮಾತನಾಡಿ, ಸಮಾಜದಲ್ಲಿ ಸಾವಿರಾರು ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಬಡ ಕುಟುಂಬದ ಮಕ್ಕಳು ಸೌಲಭ್ಯದಿಂದ ವಂಚಿತರಾಗಿದ್ದಾರೆ. ಮೌಢ್ಯತೆ ಹೆಸರಲ್ಲಿ ಪೋಲಾಗುವ ಹಾಲನ್ನು ಇಂತಹ ಮಕ್ಕಳಿಗೆ ನೀಡಬೇಕು. ಅರ್ಹರಿಗೆ ನೀಡುವ ನೆರವು ನಿಜ ದೇವರ ಸೇವೆ ಮಾಡಿದಂತೆ. ಈ ನಿಟ್ಟಿನಲ್ಲಿ ಜನರು ತಮ್ಮ ಆಚರಣೆಯಲ್ಲಿ ಬದಲಾವಣೆ ತಂದುಕೊಂಡು ಮೌಢ್ಯತೆಯನ್ನು ಧಿಕ್ಕರಿಸಿ, ಮಕ್ಕಳಿಗೆ ನೆರವಾಗಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಾಲೆಯ ಅಧೀಕ್ಷಕ ಸತೀಶ್, ಅಭಿಲಾಷ್, ವೇದಿಕೆ ಜಿಲ್ಲಾ ಸಂಚಾಲಕ ದ್ಯಾವಪ್ಪನಾಯಕ, ಜಿ.ಪಂ ಮಾಜಿ ಸದಸ್ಯ ಚಿಕ್ಕವೀರನಾಯಕ್, ಮೈಸೂರು ನಗರ ಸಂಚಾಲಕ ಮಂಜುನಾಥ್, ಬೆಂಗಳೂರು ವಿಭಾಗೀಯ ಸಂಚಾಲಕ ಆರ್.ಜಯಕುಮಾರ್, ಮುಖಂಡರಾದ ಸಿದ್ದಯ್ಯ, ವೆಂಕಟೇಶ್, ಶಿವರಾಜು, ನಾಗೇಂದ್ರ, ರಶ್ಮಿ, ಸರಸ್ವತಿ ಇನ್ನಿತರರು ಉಪಸ್ಥಿತರಿದ್ದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮನೆ ಸ್ಮಾರಕಕ್ಕೆ ಒತ್ತಾಯ



ಮೈಸೂರು, ಆ.24(ಸಿಎನ್)- ಕವಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮನೆಯನ್ನು ಸ್ಮಾರಕವನ್ನಾಗಿ ಮಾಡಬೇಕೆಂದು ಅಂದಿನ ಸರ್ಕಾರಕ್ಕೆ ಒತ್ತಾಯಿಸಿದ್ದೆ. ಆದರೆ ನನ್ನ ಕನಸು ಈಡೇರಲಿಲ್ಲ. ಈಗಲಾದರೂ ಸರ್ಕಾರ ಸ್ಮಾರಕ ನಿರ್ಮಾಣಕ್ಕೆ ಮುಂದಾಗಬೇಕಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ ಸುದರ್ಶನ್ ಮನವಿ ಮಾಡಿದರು.

ಕಲಾಮಂದಿರದ ಕಿರುರಂಗಮಂದಿರದಲ್ಲಿ ನಿರಂತರ ಫೌಂಡೇಶನ್ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ ಗೊರೂರು ರಾಮಸ್ವಾಮಿಯವರ ಕೃತಿಗಳ ಆಧಾರಿತ 'ಗೊರೂರು' ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗೊರೂರು ರಾಮಸ್ವಾಮಿ ಅವರ ಮನೆಯನ್ನು ಸ್ಮಾರಕವನ್ನಾಗಿ ಮಾಡಬೇಕೆಂದು ಅಂದಿನ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆ. ಆದರೆ ಇದುವರೆಗೂ ಕೂಡ ಯಾರು ಕೈಗೆತ್ತಿಕೊಳ್ಳಲಿಲ್ಲ. ಬಹುಶಃ ಈಗಲಾದರೂ ಆ ವಿಚಾರದ ಕುರಿತು ಬೆನ್ನತ್ತಿದರೆ ಖಂಡಿತ ಆ ಕೆಲಸ ಸಾಧ್ಯವಾಗುತ್ತದೆ ಎಂದರು.

ನಿರಂತರ ಸಂಸ್ಥೆಯ ಪ್ರಸಾದ್ ಕುಂದೂರು ಮಾತನಾಡಿ, ಗೊರೂರು ರಾಮಸ್ವಾಮಿ ಅವರ ಕೃತಿ ನಾಟಕ ರೂಪದಲ್ಲಿ ಬಂದಿರುವುದು ಬಹಳ ವಿಶೇಷವಾಗಿದೆ. ರಾಮಸ್ವಾಮಿ ಅವರು ಅಪ್ಪಟ ಗಾಂಧಿವಾದಿಯಾಗಿದ್ದರು. ಅವರ ಪ್ರಬಂಧಗಳಲ್ಲಿ ಅರ್ಥಪೂರ್ಣವಾದ ಬರಹ, ನಮ್ಮನ್ನು ಕಾಡಲಾರಂಭಿಸುತ್ತದೆ. ಗಾಂಧಿಯಿಂದ ಪಡೆದ ದೃಷ್ಟಿಕೋನದಲ್ಲಿ, ಪರಿವರ್ತನೆಗೆ ಮುಂದಾಗಿದ್ದರು. ಸಮಾಜದ ಓರೆಕೋರೆಗಳನ್ನು ಕೃತಿಗಳ ಮೂಲಕ ತಿಳಿ ಹೇಳುತ್ತಿದ್ದರು. ಅವರ ಕೃತಿಗಳ ಆಧಾರಿತ ನಾಟಕ ನೋಡುವುದೇ ಸೊಗಸು ಎಂದರು.

ಹಿರಿಯ ಪತ್ರಕರ್ತ ಜಗದೀಶ್ ಕೊಪ್ಪ ಮಾತನಾಡಿ, ಗೊರೂರು ಕೃತಿಯನ್ನು ನಾಟಕ ರೂಪಕ್ಕೆ ತಂದ ನಿರಂತರ ತಂಡಕ್ಕೆ ಅಭಿನಂದನೆಗಳು. ಜಾತಿ, ಧರ್ಮಗಳ ತಾರತಮ್ಯ ವಿರುದ್ಧ ಧ್ವನಿ ಎತ್ತಿ ಹೋರಾಡಿದವರು ಅವರು. ಜಾತಿ ಆಧಾರಿತ ಕಥಾಹಂದರದ ಕೃತಿಯನ್ನು 1974ರಲ್ಲಿ ಸಿದ್ದಲಿಂಗಯ್ಯ ಅವರ ನಿರ್ದೇಶನದಲ್ಲಿ, ನಟ ವಿಷ್ಣುವರ್ಧನ್ ಹಾಗೂ ಲೋಕೇಶ್ ಮುಖ್ಯ ಭೂಮಿಕೆಯ 'ಭೂತಯ್ಯನ ಮಗ ಅಯ್ಯು' ಚಿತ್ರ ತೆರೆಮೇಲೆ ಮೂಡಿ ಬಂದಿತ್ತು. ಚಿತ್ರಕ್ಕೆ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು ಎಂದು ಸ್ಮರಿಸಿದರು.

ವೇದಿಕೆ ಕಾರ್ಯಕ್ರಮ ಬಳಿಕ ಮಂಜುನಾಥ್ ಎಲ್ ಬಡಿಗೇರ ನಿರ್ದೇಶನದ ಗೊರೂರು ನಾಟಕ ಪ್ರದರ್ಶನ ಮಾಡಲಾಯಿತು.

ಈ ವೇಳೆ ಪ್ರೇಕ್ಷಕರು ಯಥೇಚ್ಛವಾಗಿ ಆಗಮಿಸಿದ್ದರಿಂದ ಕಿರುರಂಗಮಂದಿರ ಹೌಸ್‌ಫುಲ್ ಆಗಿ, ನೆಲದ ಮೇಲೆ ಕುಳಿತು ನಾಟಕ ವೀಕ್ಷಿಸಿದ ಪ್ರಸಂಗ ವಿಶೇಷವಾಗಿತ್ತು.

ವಾರ್ಷಿಕ ಮಹಾಸಭೆ

ಮೈಸೂರು, ಆ. 24- ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘವು 2022 -23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸೆ. 9 ರಂದು ಬೆಳಗ್ಗೆ 11 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಇದೇ ವೇಳೆ 2022-23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ. 85ಕ್ಕೂ ಹೆಚ್ಚು ಅಂಕ ಗಳಿಸಿರುವ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9964132520 ಸಂಪರ್ಕಿಸಬಹುದು.

ಕದಂಬ ರಂಗ ವೇದಿಕೆ ಸಾರ್ಥಕ ರಂಗಯಾತ್ರೆ ಕಿರುಚಿತ್ರ ಬಿಡುಗಡೆ



ಮೈಸೂರು, ಆ.24(ಸಿಎನ್)-ಒಂದು ರಂಗ ಸಂಸ್ಥೆ ಹುಟ್ಟು ಹಾಕುವುದು ಬಹಳ ಕಷ್ಟದ ಕೆಲಸ. ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದ್ದು ನಮ್ಮ ರಾಜಶೇಖರ ಕದಂಬ ಅವರು. ಅದರ ಜೊತೆಗೆ ಸಂಸ್ಥೆಯ ನಿರ್ವಹಣೆ ಕೂಡ ನಿಭಾಯಿಸಿರುವುದು ಶ್ಲಾಘನೀಯ ಎಂದು ಹಿರಿಯ ರಂಗಕರ್ಮಿ ಮೈಮ್ ರಮೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಕಲಾಮಂದಿರದ ಶ್ರೀರಂಗ(ರಂಗಾಯಣ)ಕಿರುರಂಗ ಮಂದಿರದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ ಮೈಸೂರು ಹಾಗೂ ಕದಂಬ ರಂಗವೇದಿಕೆ ವತಿಯಿಂದ ಗುರುವಾರ ಆಯೋಜಿಸಿದ್ದ 'ಕದಂಬ ರಂಗವೇದಿಕೆ 6 ದಶಕಗಳ ಸಾರ್ಥಕ ರಂಗಯಾತ್ರೆ ಸಾಕ್ಷ್ಯಚಿತ್ರ' ಬಿಡುಗಡೆ ಸಮಾರಂಭ ಕುರಿತು ಮಾತನಾಡಿದರು.

ಇಂತಹ ಮಹಾನ್ ವ್ಯಕ್ತಿಯ ಸಾಕ್ಷ್ಯಚಿತ್ರ ಬಿಡುಗಡೆ ಮಾಡುವುದು ಸಂತಸದ ವಿಚಾರ, ರಾಜಶೇಖರ ಕದಂಬ ಅವರಲ್ಲಿರುವ ಸಹಾಯ ಗುಣದಿಂದಲೇ ಹೆಚ್ಚು ಪ್ರಚಲಿತದಲ್ಲಿದ್ದಾರೆ. ಕಲಾವಿದರಿಗೆ ಇವತ್ತಿನವರೆಗೂ ಸಹಾಯ ಮಾಡಿಕೊಂಡು ಬಂದಿದ್ದಾರೆ. ಇಂದು ಸಾಕ್ಷ್ಯಚಿತ್ರ ಮಾಡಿರುವುದು ಸಂತೋಷ, ಕದಂಬ ಅವರು ರಂಗಭೂಮಿಯ ಸಂಬಂಧವನ್ನು ಬಹಳ ಅಚ್ಚುಕಟ್ಟಾಗಿ ಉಳಿಸಿಕೊಂಡು ಬಂದಿದ್ದಾರೆ. ರಂಗಭೂಮಿಯನ್ನು ಕಟ್ಟುವ ಕೆಲಸ ಸುಲಭವಲ್ಲ, ಅದನ್ನು ನಿಭಾಯಿಸಿರುವುದು ಅವರ ಸಾಧನೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಎನ್.ಧನಂಜಯ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿ ವೇದಿಕೆ ಅಧ್ಯಕ್ಷ ಎಚ್.ಎಸ್ ಸುರೇಶ್ ಬಾಬು, ನಿರ್ದೇಶಕ ಎಚ್.ಆರ್ ರವಿಪ್ರಸಾದ್, ಸಾಕ್ಷ್ಯಚಿತ್ರ ನಿರ್ದೇಶಕ ಡಿ.ಮಧು, ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಇನ್ನಿತರರು ಇದ್ದರು.

ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ಕಟ್ಟಡ ಕಾರ್ಮಿಕರ ಪ್ರತಿಭಟನೆ



ಮೈಸೂರು,ಆ.24(ಪಿಎಂ)– ಕಟ್ಟಡ ಕಾರ್ಮಿಕರ ಮಕ್ಕಳ 2021–22ನೇ ಸಾಲಿನ ಶೈಕ್ಷಣಿಕ ಸಹಾಯಧನ ಬಿಡುಗಡೆ ಮಾಡಬೇಕು ಎಂಬುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು ಅಧೀನ) ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕರ ಆಯುಕ್ತರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಬಾಕಿ ಇರುವ 2021–22ನೇ ಶೈಕ್ಷಣಿಕ ಸಾಲಿನ ಅರ್ಜಿಗಳಿಗೆ ಕೂಡಲೇ ಹಣ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು. ಈಗ ಜಾರಿಯಲ್ಲಿರುವ ಕಾರ್ಮಿಕ ಸಂಹಿತೆಗಳು ಕಾರ್ಮಿಕ ವಿರೋಧಿಯಾಗಿದ್ದು, ಅವುಗಳನ್ನು ರದ್ದುಗೊಳಿಸಬೇಕು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ–1996 ಮತ್ತು ಸೆಸ್ ಕಾಯ್ದೆ–1996 ಅನ್ನು ಮರುಸ್ಥಾಪಿಸಬೇಕು. ಅಂತರರಾಜ್ಯ ವಲಸೆ ಕಾರ್ಮಿಕರ ಕಾಯ್ದೆ–1979 ಅನ್ನು ಬಲಪಡಿಸಬೇಕು. ಕಲ್ಯಾಣ ಮಂಡಳಿಯಲ್ಲಿ ಸಿಐಟಿಯು ಸಂಘಟನೆಗೆ ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಜಿ.ಜಯರಾಮ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿ ರಾವ್, ಕಟ್ಟಡ ಕಾರ್ಮಿಕ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಎಂ.ಬಸವಯ್ಯ, ಪ್ರಧಾನ ಕಾರ್ಯದರ್ಶಿ ಸಿ.ಬಿ.ನವೀನ್‌ಕುಮಾರ್, ಖಜಾಂಚಿ ವಿ.ಸೋಮಶಂಕರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ನ್ಯಾಯಸಮ್ಮತ ತನಿಖೆಗೆ ಒತ್ತಾಯಿಸಿ ಪ್ರತಿಭಟನೆ

ಆ.28ರ ಹೋರಾಟದ ಪೋಸ್ಟರ್ ಬಿಡುಗಡೆ



ಮೈಸೂರು,ಆ.24(ಪಿಎಂ)– ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ನ್ಯಾಯಸಮ್ಮತ ತನಿಖೆಗೆ ಒತ್ತಾಯಿಸಿ ಆ.28ರಂದು ವಿವಿಧ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿರುವ 'ಚಲೋ ಬೆಳ್ತಂಗಡಿ–ಮಹಾಧರಣಿ' ಹೋರಾಟದ ಪೋಸ್ಟರ್ ಬಿಡುಗಡೆಗೊಳಿಸಿ, ಪ್ರತಿಭಟನೆಯನ್ನೂ ನಡೆಸಲಾಯಿತು.

ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕರ ಆಯುಕ್ತರ ಕಚೇರಿ ಎದುರು ಗುರುವಾರ ಕಟ್ಟಡ ಕಾರ್ಮಿಕರ ಪ್ರತಿಭಟನೆ ನಂತರ ಈ ಹೋರಾಟವೂ ನಡೆಯಿತು. ಜನವಾದಿ ಮಹಿಳಾ ಸಂಘಟನೆ, ಕಟ್ಟಡ ಕಾರ್ಮಿಕ ಸಂಘಟನೆ (ಸಿಐಟಿಯು) ಮುಖಂಡರು ಈ ಪ್ರತಿಭಟನೆ ನಡೆಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಜಿ.ಜಯರಾಮ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ದೇವಿ, ಸಹ ಕಾರ್ಯದರ್ಶಿ ಸುಶೀಲ ಸೇರಿದಂತೆ ಸಿಐಟಿಯು ಹಾಗೂ ಕಟ್ಟಡ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಚಂದ್ರಯಾನ–3 ಮಿಷನ್‌ನಲ್ಲಿದ್ದ ಪ್ರಯಾಣಿಕರಿಗೆ ಅಭಿನಂದನೆ ಸಲ್ಲಿಸಿ ಯಡವಟ್ಟು ಮಾಡಿಕೊಂಡ ರಾಜಸ್ಥಾನ ಸಚಿವ!

ಜೈಪುರ, ಆ.24– ಚಂದ್ರಯಾನ–3ರ ಯಶಸ್ಸನ್ನು ದೇಶವೇ ಸಂಭ್ರಮಿಸುತ್ತಿದ್ದರೆ, ರಾಜಸ್ಥಾನ ಸಚಿವರೊಬ್ಬರು ಯಡವಟ್ಟು ಮಾಡಿಕೊಂಡಿದ್ದಾರೆ. ಚಂದ್ರಯಾನ–3ರಲ್ಲಿದ್ದ ಪ್ರಯಾಣಿಕರಿಗೆ ರಾಜಸ್ಥಾನ ಕ್ರೀಡಾ ಸಚಿವ ಅಶೋಕ್ ಚಂದನ ಅಭಿನಂದನೆ ಸಲ್ಲಿಸಿದ್ದಾರೆ. ಚಂದ್ರನ ಮೇಲ್ಮೈ ಮೇಲೆ ಬಾಹ್ಯಾಕಾಶ ನೌಕೆ ಇಳಿದರೆ, ನಾನು ಪ್ರಯಾಣಿಕರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ದೇಶ ವಿಜ್ಞಾನ ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಿದೆ. ಇದಕ್ಕಾಗಿ ನಾನು ದೇಶದ ಜನತೆಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ರಾಜಸ್ಥಾನ ಸಚಿವರು ಹೇಳಿದ್ದಾರೆ.



ಚಂದ್ರಯಾನ–3 ಬುಧವಾರ ಸಂಜೆ ಚಂದ್ರನ ಮೇಲೆ ಯಶಸ್ವಿ ಸಾಫ್ಟ್ ಲ್ಯಾಂಡಿಂಗ್ ಮಾಡಿದ್ದು, ಚಂದ್ರನ ಮೇಲ್ಮೈ ಮೇಲೆ ಸಾಫ್ಟ್ ಲ್ಯಾಂಡಿಂಗ್ ಮಾಡಿದ ನಾಲ್ಕನೇ ದೇಶ ಮತ್ತು ದಕ್ಷಿಣ ಧ್ರುವವನ್ನು ತಲುಪಿದ ಮೊದಲ ದೇಶವಾಗಿದೆ.

ವರ್ಷದ ಹಿಂದೆ ಶಂಕುಸ್ಥಾಪನೆಗೊಂಡ

ಮೈಸೂರಿನ ಅತ್ಯಾಧುನಿಕ ಖಗೋಳ ತಾರಾಲಯ ನಿರ್ಮಾಣಕ್ಕೆ 'ಗ್ರಹಣ'



ಫೈಲ್ ಚಿತ್ರ



ಚಾಮುಂಡಿಬೆಟ್ಟದ ತಪ್ಪಲಲ್ಲಿ ಮೈಸೂರು ವಿವಿಗೆ ಸೇರಿದ 3 ಎಕರೆ ಜಾಗದಲ್ಲಿ 81 ಕೋಟಿ ರೂ. ಅಂದಾಜು ವೆಚ್ಚದ ಪ್ಲಾನೆಟೇರಿಯಂ ಕಟ್ಟಡ ಕಾಮಗಾರಿಗೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ 2022ರ ಮಾರ್ಚ್ 6ರಂದು ಶಂಕುಸ್ಥಾಪನೆ ನೆರವೇರಿಸಿದ್ದರು.

ಎಸ್.ಟಿ.ರವಿಕುಮಾರ್

ಮೈಸೂರು, ಆ.24–ಮೈಸೂರಿನಲ್ಲಿ ನಿರ್ಮಿಸಲುದ್ದೇಶಿಸಿರುವ ಬಹು ನಿರೀಕ್ಷಿತ ಅತ್ಯಾಧುನಿಕ ಖಗೋಳ ತಾರಾಲಯ ಯೋಜನೆಗೆ ಗ್ರಹಣ ಹಿಡಿದಿದೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸ್ವಾಗತ ಕಮಾನು ಬಳಿಯ ನಿಸರ್ಗ ಮಡಿಲಿನ ಮೈಸೂರು ವಿಶ್ವವಿದ್ಯಾನಿಲಯದ 20 ಎಕರೆ ಪ್ರದೇಶದ ಪೈಕಿ 3 ಎಕರೆ ಜಾಗದಲ್ಲಿ 81 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕಾಸ್ಮೋಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (COSMOS)ದ ಫೀಚರಿಂಗ್ ಪ್ಲಾನೆಟೇರಿಯಂ ನಿರ್ಮಿಸಲು ಯೋಜಿಸಲಾಗಿತ್ತು.

ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ (Indian Institute of Astro Physics) ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ನಿರ್ಮಿಸಲುದ್ದೇಶಿಸಿರುವ ಪ್ಲಾನೆಟೇರಿಯಂ ಯೋಜನೆಯ ಬೃಹತ್ ಕಾಮಗಾರಿಗೆ 2022ರ ಮಾರ್ಚ್ 6ರಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಶಂಕುಸ್ಥಾಪನೆ ನೆರವೇರಿಸಿದ್ದರು. ಸಂಸದ ಪ್ರತಾಪ್ ಸಿಂಹ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಡಾ. ಎಸ್.ಚಂದ್ರಶೇಖರ್, ಕೇಂದ್ರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ. ಕೆ.ವಿಜಯ ರಾಘವನ್, ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ನಿರ್ದೇಶಕಿ ಪ್ರೊ. ಅನ್ನಪೂರ್ಣ ಸುಬ್ರಹ್ಮಣಿಯಂ, ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಕುಲಪತಿ ಪ್ರೊ. ಜಿ.ಹೇಮಂತ ಕುಮಾರ್ ಹಾಗೂ ಅಂದಿನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಮಹತ್ವಾಕಾಂಕ್ಷೆಯ ಚಂದ್ರಯಾನ–3 ಯಶಸ್ವಿಯಾಗಿದೆ. ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲ್ಮೈಯಲ್ಲಿ ಸುರಕ್ಷಿತ ಲ್ಯಾಂಡಿಂಗ್ ಆಗಿರುವುದನ್ನು ಇಡೀ ವಿಶ್ವ ಕಣ್ತುಂಬಿಕೊಂಡಿರುವ ಈ ಸಂದರ್ಭದಲ್ಲಿ ಉದ್ದೇಶಿತ ಮೈಸೂರಿನ ಅತ್ಯಾಧುನಿಕ ತಾರಾಲಯ ಕಾರ್ಯಗತವಾಗದಿರುವುದು ಹಲವರಿಗೆ ನಿರಾಸೆ ಉಂಟು ಮಾಡಿದೆ.

ಅಡಿಗಲ್ಲು ಹಾಕಿ 17 ತಿಂಗಳು ಕಳೆದರೂ, ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಕಾಸ್ಮೋಸ್ ಕಟ್ಟಡ ಕಾಮಗಾರಿಯೇ ಆರಂಭವಾಗಿಲ್ಲ. ಪ್ಲಾನೆಟೇರಿಯಂಗೆ ಆರ್ಕಿಟೆಕ್ಚರ್, ಎಲ್‌ಇಡಿ ಡೂಮ್ ಮತ್ತು ಸಿವಿಲ್ ಕಾಮಗಾರಿಗೆ ತಜ್ಞ ಕಂಪನಿಗಳೇ ಸೂಕ್ತ ಎಂದು ನಿರ್ಧರಿಸಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್, ಯೋಜನೆಗೆ ಗ್ಲೋಬಲ್ ಟೆಂಡರ್ ಕರೆದಿತ್ತು.

ಕಾಸ್ಮೋಸ್ ಯೋಜನೆಯ ಸಿವಿಲ್ ಕಾಮಗಾರಿಯನ್ನು ಮೆ| ಆರ್‌ಎಸ್‌ಆರ್ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್‌ಗೆ ವಹಿಸಿ ಕಳೆದ ವಾರವಷ್ಟೇ ಕಾರ್ಯಾದೇಶ (Work Order) ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

> "ಪ್ಲಾನೆಟೇರಿಯಂಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಸಂಸ್ಥೆಯು ತಜ್ಞ ಕಂಪನಿಗೆ ಕಾಮಗಾರಿ ವಹಿಸಿದೆ. ಶೀಘ್ರ ಕೆಲಸ ಆರಂಭವಾಗಲಿದೆ.
>
> - **ಪ್ರೊ. ಎನ್.ಕೆ.ಲೋಕನಾಥ್,** ನಿರ್ದೇಶಕರು, ಪ್ಲಾನಿಂಗ್, ಮಾನಿಟರಿಂಗ್ ಮತ್ತು ಇವ್ಯಾಲ್ಯುಯೇಷನ್ ಬೋರ್ಡ್

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಆಟೋಮಿಕ್ ಎನರ್ಜಿ ಇಲಾಖೆ, ಸ್ಪೇಸ್ ಕೇಂದ್ರದ ಪ್ರಧಾನ ವೈಜ್ಞಾನಿಕ ಸಲಹಾ ಸಮಿತಿ, ಹಣಕಾಸು ಸಚಿವಾಲಯ ಹಾಗೂ ಎಂಪಿ ಲಾಡ್‌ನಿಂದ ಪ್ಲಾನೆಟೇರಿಯಂ ಯೋಜನೆಗೆ ಅನುದಾನ ಒದಗಿಸಲಿವೆ ಮೈಸೂರು ವಿಶ್ವವಿದ್ಯಾನಿಲಯವು ಕಟ್ಟಡ ನಿರ್ಮಿಸಲು ಜಾಗ ಮಾತ್ರ ನೀಡಿದೆ.

ಸಾರ್ವಜನಿಕರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿ ಖಗೋಳ ಶಾಸ್ತ್ರ ಮತ್ತು ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವುದು, ಡೇಟಾ ವಿಶ್ಲೇಷಣೆ ಮತ್ತು ಪ್ರಯೋಗಗಳಿಗೆ ಪ್ರೋತ್ಸಾಹ, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳೊಂದಿಗೆ ಸಂಪರ್ಕ ಕಲ್ಪಿಸುವುದು ಕಾಸ್ಮೋಸ್‌ನ ಉದ್ದೇಶವಾಗಿದೆ.

ಬಾಹ್ಯಾಕಾಶ ಟೆಲಿಸ್ಕೋಪ್‌ಗಳು, ದತ್ತಾಂಶ ವಿಜ್ಞಾನ, ಬೋಧನೆ ಮೇಲಿನ ಪ್ರಯೋಗಗಳು, ಡೇಟಾ ಉತ್ಪನ್ನಗಳ ಮೇಲೆ ತರಬೇತಿ ನೀಡುವುದೂ ಸೇರಿದಂತೆ ದೇಶದಲ್ಲಿನ ವಿಜ್ಞಾನಿಗಳು ಸಂಶೋಧನೆ ಮಾಡಿದ ಹೊಸ ಆವಿಷ್ಕಾರಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಖಗೋಳ ತಾರಾಲಯವು ವರದಾನವಾಗಲಿದೆ.



ಭಾರತದ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಚಂದ್ರನಂಗಳಕ್ಕಿಳಿದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಮುಂಭಾಗ ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಸಂಭ್ರಮಾಚರಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಉಪ ಮೇಯರ್ ಡಾ.ಜಿ.ರೂಪಾ, ಪಾಲಿಕೆ ಸದಸ್ಯರಾದ ಶಾಂತಕುಮಾರಿ, ಬಿ.ವಿ.ಮಂಜುನಾಥ್, ಎಂ.ಯು.ಸುಬ್ಬಯ್ಯ, ಆರೀಫ್ ಹುಸೇನ್, ಎಸ್‌ಬಿಎಂ ಮಂಜು, ರಂಗಸ್ವಾಮಿ, ಮಾ.ವಿ.ರಾಂಪ್ರಸಾದ್, ರಜನಿ ಅಣ್ಣಯ್ಯ, ಸಯ್ಯದ್ ಹಸ್ರತ್ ಉಲ್ಲಾ ಸೇರಿದಂತೆ ಬಹುತೇಕ ಕಾರ್ಪೊರೇಟರ್‌ಗಳು ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು. ಬಾವುಟ ಹಿಡಿದು, ಜೈಕಾರದೊಂದಿಗೆ ಸಂಭ್ರಮಿಸಿ, ಸಿಹಿ ವಿತರಿಸಲಾಯಿತು.

ಚಂದ್ರಯಾನ–3ರ ಯಶಸ್ಸಿಗಾಗಿ ಇಸ್ರೋ ತಂಡವನ್ನು ಅಭಿನಂದಿಸಿ ಪತ್ರ ಬರೆದ ಸೋನಿಯಾ ಗಾಂಧಿ



ನವದೆಹಲಿ, ಆ.24– ಚಂದ್ರಯಾನ–3ರ ಯಶಸ್ಸನ್ನು ಶ್ಲಾಘಿಸಿ ಕಾಂಗ್ರೆಸ್ ಮಾಜಿ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಇಸ್ರೋ ಅಧ್ಯಕ್ಷ ಎಸ್ ಸೋಮನಾಥ್ ಅವರಿಗೆ ಪತ್ರ ಬರೆದಿದ್ದಾರೆ.

ಇಸ್ರೋದ ಪ್ರಭಾವಶಾಲಿ ಸಾಮರ್ಥ್ಯಗಳನ್ನು ಹಲವು ವರ್ಷಗಳಿಂದ ಅಭಿವೃದ್ಧಿಪಡಿಸಲಾಗಿದೆ ಮತ್ತು 1960ರ ದಶಕದಿಂದಲೂ ಅದು ಸ್ವಾವಲಂಬನೆ ಸಾಧಿಸಿರುವುದು ಅದರ ಗಮನಾರ್ಹ ಸಾಧನೆಗಳಿಗೆ ಸಾಕ್ಷಿಯಾಗಿದೆ ಎಂದು ಹೇಳಿದ್ದಾರೆ.

ಬುಧವಾರ ಸಂಜೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಭವ್ಯ ಸಾಧನೆಯಿಂದ ತಾನೆಷ್ಟು ರೋಮಾಂಚನಗೊಂಡಿದ್ದೇನೆ ಎಂಬುದನ್ನು ತಿಳಿಸಲು ಸೋಮನಾಥ್ ಅವರಿಗೆ ಪತ್ರ ಬರೆದಿರುವುದಾಗಿ ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ತಿಳಿಸಿದ್ದಾರೆ. ಇದು ಎಲ್ಲಾ ಭಾರತೀಯರಿಗೆ, ವಿಶೇಷವಾಗಿ ಯುವ ಪೀಳಿಗೆಗೆ ಅತ್ಯಂತ ಹೆಮ್ಮೆ ಮತ್ತು ಉತ್ಸಾಹದ ವಿಷಯವಾಗಿದೆ ಎಂದು ಸೋನಿಯಾ ಗಾಂಧಿ ಹೇಳಿದ್ದಾರೆ.

ಇಸ್ರೋದ ಪ್ರಭಾವಶಾಲಿ ಸಾಮರ್ಥ್ಯಗಳನ್ನು ಹಲವು ವರ್ಷಗಳಿಂದ ಅಭಿವೃದ್ಧಿಪಡಿಸಲಾಗಿದೆ ಮತ್ತು 1960ರ ದಶಕದಿಂದಲೂ ಅದರ ಸ್ವಾವಲಂಬನೆಯ ಅಡಿಪಾಯವು ಅದರ ಗಮನಾರ್ಹ ಸಾಧನೆಗಳಲ್ಲಿ ಮಹತ್ವದ ಪಾತ್ರ ವಹಿಸಿದೆ. ಸಂಸ್ಥೆಯಲ್ಲಿ ಪ್ರಮುಖ ವ್ಯಕ್ತಿಗಳು ಇದ್ದಾರೆ ಮತ್ತು ಸಾಮೂಹಿಕ ಪ್ರಯತ್ನದ ಮನೋಭಾವವು ಯಾವಾಗಲೂ ಸಂಸ್ಥೆಯನ್ನು ಮುನ್ನಡೆಸುತ್ತಿದೆ. ತನ್ನದೇ ಆದ ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳನ್ನು ಅವಲಂಬಿಸಿರುವ ಇಸ್ರೋದ ಸಾಮರ್ಥ್ಯವು ಬಾಹ್ಯಾಕಾಶ ಕ್ಷೇತ್ರದಲ್ಲಿನ ಅದರ ಯಶಸ್ವಿ ಪ್ರಯತ್ನಗಳಿಗೆ ಕೊಡುಗೆ ನೀಡಿದೆ ಎಂದು ಸೋನಿಯಾ ಪತ್ರದಲ್ಲಿ ತಿಳಿಸಿದ್ದಾರೆ.

ಇಡೀ ಇಸ್ರೋದ ಒಗ್ಗಟ್ಟಿಗೆ ನಾನು ಶುಭ ಹಾರೈಸುತ್ತೇನೆ ಮತ್ತು ಈ ಮಹತ್ವದ ಸಂದರ್ಭದಲ್ಲಿ ಅದರ ಪ್ರತಿಯೊಬ್ಬ ಸದಸ್ಯರಿಗೂ ನನ್ನ ಆತ್ಮೀಯ ಅಭಿನಂದನೆಯನ್ನು ತಿಳಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ಇನ್ಫೋಸಿಸ್ ಬ್ರಾಂಡ್ ಅಂಬಾಸಿಡರ್ ಆಗಿ ರಾಫೆಲ್ ನಡಾಲ್ ನೇಮಕ



ಬೆಂಗಳೂರು, ಆ.24– ದೇಶದ ಎರಡನೇ ಅತಿ ದೊಡ್ಡ ಐಟಿ ಸೇವಾ ರಫ್ತು ಕಂಪನಿ ಇನ್ಫೋಸಿಸ್ ಗುರುವಾರ ಟೆನಿಸ್ ದಿಗ್ಗಜ ರಾಫೆಲ್ ನಡಾಲ್ ಅವರನ್ನು ತನ್ನ ಬ್ರಾಂಡ್ ಮತ್ತು ಇನ್ಫೋಸಿಸ್‌ನ ಡಿಜಿಟಲ್ ಇನ್ನೋವೇಶನ್‌ನ ರಾಯಭಾರಿಯಾಗಿ ನೇಮಕ ಮಾಡಿದೆ. ರಾಫೆಲ್ ನಡಾಲ್ ಅವರೊಂದಿಗೆ ಮೂರು ವರ್ಷಗಳ ಅವಧಿಗೆ ಒಡಂಬಡಿಕೆ ಮಾಡಿಕೊಂಡಿದೆ. ಡಿಜಿಟಲ್ ಸೇವೆಗಳ ಕಂಪನಿಯೊಂದಿಗೆ ನಡಾಲ್ ಅವರ ಈ ಮೊದಲ ಸಹಯೋಗವನ್ನು ಗುರುತಿಸಲು, ಇನ್ಫೋಸಿಸ್ ಮತ್ತು ನಡಾಲ್ ಅವರ ಕೋಚಿಂಗ್ ತಂಡ AI- ಚಾಲಿತ ಪಂದ್ಯ ವಿಶ್ಲೇಷಣಾ ಸಾಧನ ಅಭಿವೃದ್ಧಿಪಡಿಸುತ್ತಿದೆ ಎಂದು ಕಂಪನಿಯ ಬೆಂಗಳೂರಿನ ಪ್ರಧಾನ ಕಚೇರಿಯ ಪ್ರಕಟಣೆ ತಿಳಿಸಿದೆ. ನಡಾಲ್ ಅವರನ್ನು ಇನ್ಫೋಸಿಸ್‌ನ ರಾಯಭಾರಿಯಾಗಿ ಸ್ವಾಗತಿಸಲು ಇದು ಗೌರವವಾಗಿದೆ ಎಂದು ಇನ್ಫೋಸಿಸ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಲೀಲ್ ಪರೇಖ್ ಹೇಳಿದ್ದಾರೆ.

ವೇಶ್ಯಾವಾಟಿಕೆ ದಂಧೆ; ಮಹಿಳೆಗೆ 7 ವರ್ಷ ಶಿಕ್ಷೆ

ಮೈಸೂರು, ಆ.24(ಎಸ್‌ಬಿಡಿ)– ಹಣದ ಆಮಿಷವೊಡ್ಡಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದ ಮಹಿಳೆಗೆ ಮೈಸೂರಿನ 3ನೇ ಅಧಿಕ ಮತ್ತು ಸತ್ರ ನ್ಯಾಯಾಲಯ 7 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಮೇಟಗಳ್ಳಿ ಪೊಲೀಸ್ ಠಾಣೆ ಮಧುರಾ ನಗರ 16ನೇ ಕ್ರಾಸ್‌ನ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಶೋಭಾಗೆ ಶಿಕ್ಷೆ ವಿಧಿಸಿದೆ. ಮೈಸೂರು ಜಿಲ್ಲೆ ಹಾಗೂ ಪಶ್ಚಿಮ ಬಂಗಾಳದಿಂದ ಮಹಿಳೆಯರನ್ನು ಹಣದ ಆಮಿಷದಿಂದ ಮನೆಗೆ ಕರೆಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದರು. ಈ ಬಗ್ಗೆ ಮಾಹಿತಿ ತಿಳಿದ ಮಾನವ ಕಳ್ಳಸಾಗಾಣೆ ವಿರೋಧಿ ಘಟಕದ ಅಂದಿನ ಇನ್‌ಸ್ಪೆಕ್ಟರ್ ಚಂದ್ರಕಲಾ, ಮೇಟಗಳ್ಳಿ ಪೊಲೀಸರ ಸಹಕಾರದೊಂದಿಗೆ 2016ರ ಜೂ.21ರಂದು ದಾಳಿ ನಡೆಸಿ, ಆರೋಪಿಯನ್ನು ವಶಕ್ಕೆ ಪಡೆದಿದ್ದರು.

ಈ ಸಂಬಂಧ ಮೇಟಗಳ್ಳಿ ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಕುಮಾರ್, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಮೈಸೂರಿನ 3ನೇ ಅಧಿಕ ಮತ್ತು ಸತ್ರ ನ್ಯಾಯಾಲಯ(ಭ್ರಷ್ಟಾಚಾರ ನಿಗ್ರಹ ವಿಶೇಷ ನ್ಯಾಯಾಲಯ)ದ ನ್ಯಾಯಾಧೀಶರಾದ ಶ್ರೀಮತಿ ಕೆ.ಭಾಗ್ಯ ಅವರು ಪ್ರಕರಣದ ವಿಚಾರಣೆ ನಡೆಸಿ, ಶೋಭಾ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆಕೆಗೆ 7 ವರ್ಷ ಜೈಲು ಶಿಕ್ಷೆ ಹಾಗೂ 12 ಸಾವಿರ ರೂ. ದಂಡ ವಿಧಿಸಿ, ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ನ್ಯಾಯಾಲಯದ ಸರ್ಕಾರಿ ಅಭಿಯೋಜಕಿ ಟಿ.ಹೆಚ್.ಲೋಲಾಕ್ಷಿ ವಾದ ಮಂಡಿಸಿದ್ದರು.

ಚಂದ್ರಯಾನ–3ರ ಎಂಜಿನಿಯರ್‌ಗಳಿಗೆ 17 ತಿಂಗಳ ವೇತನ ಪಾವತಿ ಆಗಿಲ್ಲ: ಕಾಂಗ್ರೆಸ್



ಬೆಂಗಳೂರು, ಆ.24– ಚಂದ್ರಯಾನ–3ರ ಉಡ್ಡಯನ ವಾಹನ ತಯಾರಿಸಿದ ಎಂಜಿನಿಯರ್‌ಗಳಿಗೆ ವೇತನ ಪಾವತಿ ಮಾಡಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ. ರಾಂಚಿ ಮೂಲದ ಹಿಂದೂಸ್ತಾನ್ ಎಂಜಿನಿಯರಿಂಗ್ ಕಾರ್ಪೊರೇಷನ್ (ಎಚ್‌ಇಸಿ) ಚಂದ್ರಯಾನ–3ರ ಉಡ್ಡಯನ ವಾಹನ ತಯಾರಿಸಿದ್ದು, ಇದರ ಎಂಜಿನಿಯರ್‌ಗಳಿಗೆ 17 ತಿಂಗಳಿಂದ ವೇತನ ಪಾವತಿ ಮಾಡಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಆರೋಪಿಸಿದ್ದಾರೆ. ಈ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ಉಲ್ಲೇಖಿಸಿ ಸಾಮಾಜಿಕ ತಾಣ 'ಎಕ್ಸ್'ನಲ್ಲಿ ಅವರು ಆರೋಪ ಮಾಡಿದ್ದಾರೆ.

ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಮುಂದಾಳತ್ವದಲ್ಲಿ ನಿಜಕ್ಕೂ ಇತಿಹಾಸವನ್ನು ಸೃಷ್ಟಿಸಿದ್ದೇವೆ. ಸೋಮನಾಥ್ ಮತ್ತು ಅವರ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು ಎಂದು ಹೇಳಿದ್ದಾರೆ. ಆದರೆ ಕಪಟತನ ತೋರಿರುವ ಪ್ರಧಾನಿ ಮೋದಿ ಉತ್ತರ ನೀಡಬೇಕು ಎಂದು ವೇಣುಗೋಪಾಲ್ ಆಗ್ರಹಿಸಿದ್ದಾರೆ.

ಚಂದ್ರನ ಮೇಲ್ಮೈಯಲ್ಲಿ ವಿಕ್ರಮ್ ಲ್ಯಾಂಡ್ ಆದ ತಕ್ಷಣ ಪರದೆಯಲ್ಲಿ ಕಾಣಿಸಿಕೊಂಡ ಪ್ರಧಾನಿ ಮೋದಿ, ವಿಜ್ಞಾನಿಗಳ ಸಾಧನೆಯ ಶ್ರೇಯಸ್ಸು ಪಡೆಯಲು ಯತ್ನಿಸಿದ್ದಾರೆ. ಆದರೆ ಇಸ್ರೋ ಮತ್ತು ವಿಜ್ಞಾನಿಗಳಿಗೆ ನೆರವು ನೀಡುವಲ್ಲಿ ಸರ್ಕಾರವು ವಿಫಲವಾಗಿದೆ ಎಂದು ಆರೋಪಿಸಿದ್ದಾರೆ.

ಚಂದ್ರಯಾನ–3ರ ಯೋಜನೆಯಲ್ಲಿ ಕೆಲಸ ಮಾಡಿದ್ದ ಹಿಂದೂಸ್ತಾನ್ ಎಂಜಿನಿಯರ್ ಕಾರ್ಪೊರೇಷನ್ (ಎಚ್‌ಇಸಿ) ಎಂಜಿನಿಯರ್‌ಗಳಿಗೆ ಕಳೆದ 17 ತಿಂಗಳು ಸಂಬಳ ಏಕೆ ಪಾವತಿ ಮಾಡಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಅಲ್ಲದೆ ಚಂದ್ರಯಾನ–3ರ ಬಜೆಟ್ ಅನ್ನು ಶೇ.32ರಷ್ಟು ಕಡಿತಗೊಳಿಸಿದ್ದೇಕೆ ಎಂದು ಪ್ರಶ್ನಿಸಿರುವ ಅವರು, ಇವರೆಲ್ಲಾ ದೇಶದ ಹೀರೋಗಳು. ಅವರು ವಿಶ್ವದರ್ಜೆಯ ಬಾಹ್ಯಾಕಾಶ ಯೋಜನೆಯನ್ನು ಮಾಡಿದ್ದಾರೆ. ಆದರೆ ಅವರ ಪ್ರತಿಭೆ ಮತ್ತು ಶ್ರಮದ ಬಗ್ಗೆ ನಿಮಗೆ ಯಾವುದೇ ಗೌರವವಿಲ್ಲ ಎಂದು ಪ್ರಧಾನಿ ಮೋದಿಯವರನ್ನು ವೇಣುಗೋಪಾಲ್ ಟೀಕೆ ಮಾಡಿದ್ದಾರೆ.

ಮದುವೆ ಆಗುವುದಾಗಿ ನಂಬಿಸಿ ಕೈಕೊಟ್ಟ ಕಾನ್‌ಸ್ಟೇಬಲ್!

ಇಡೀ ಕುಟುಂಬದ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ ವಿದ್ಯಾರ್ಥಿನಿ

ಮೈಸೂರು, ಆ.24(ಸಿಎನ್)–ನಾಲ್ಕು ವರ್ಷ ಕಾಲ ವಿದ್ಯಾರ್ಥಿನಿಯನ್ನು ಪ್ರೀತಿಸಿ, ಮದುವೆ ಆಗುವುದಾಗಿ ನಂಬಿಸಿ ಕೈಕೊಟ್ಟ ಆರೋಪದ ಮೇರೆಗೆ ಪೊಲೀಸ್ ಕಾನ್‌ಸ್ಟೇಬಲ್ ಹಾಗೂ ಆತನ ಕುಟುಂಬದವರ ವಿರುದ್ಧ ಮೈಸೂರು ಜಿಲ್ಲಾ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿ.ನರಸೀಪುರ ಠಾಣೆಯ ಕಾನ್‌ಸ್ಟೇಬಲ್ ರಂಗಸ್ವಾಮಿ, ಆತನ ತಂದೆ ರಾಜೇಗೌಡ, ತಾಯಿ ಕಾಮಾಕ್ಷಿ, ಸಹೋದರಿಯರಾದ ಸವಿತಾ, ರೇಣುಕಾ, ಭಾವಂದಿರಾದ ದೇವರಾಜು, ಅಶೋಕ, ಸ್ನೇಹಿತ ಸೋಮಶೇಖರ್ ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಿರುದ್ಧ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿನಿ ನೀಡಿದ ದೂರಿನನ್ವಯ ಪೊಲೀಸರು ಭಾರತೀಯ ದಂಡ ಸಂಹಿತೆ 417, 420, 354(ಡಿ), 504, 506, 114. 34 ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವಿವರ: ಪಿರಿಯಾಪಟ್ಟಣ ತಾಲೂಕು ಆಲನಹಳ್ಳಿ ಗ್ರಾಮದ ಶಂಕರ್ ಎಂಬುವರ ಪುತ್ರಿ, ವಿದ್ಯಾರ್ಥಿನಿ 2019 ರಿಂದ ಅದೇ ಗ್ರಾಮದ ರಾಜೇಗೌಡ ಎಂಬುವರ ಪುತ್ರ ಕಾನ್‌ಸ್ಟೇಬಲ್ ರಂಗಸ್ವಾಮಿಯನ್ನು ಪ್ರೀತಿಸುತ್ತಿದ್ದಳು. ಆತನು ಕೂಡ ಆಕೆಯನ್ನು ಮದುವೆಯಾಗುವುದಾಗಿ ನಂಬಿಸಿ ಆಕೆಯೊಂದಿಗೆ ಓಡಾಡಿಕೊಂಡಿದ್ದ ಎಂದು ಹೇಳಲಾಗಿದೆ. ಈ ಮಧ್ಯೆ 2021ರ ಡಿ.12ರಂದು ವಿದ್ಯಾರ್ಥಿನಿಗೆ ಆಕೆಯ ಮನೆಯವರು ಭೂತನಹಳ್ಳಿ ಗ್ರಾಮದ ಯುವಕನೊಂದಿಗೆ ನಿಶ್ಚಿತಾರ್ಥ ಮಾಡಿದ್ದಾರೆ. ಈ ವೇಳೆ ರಂಗಸ್ವಾಮಿ ವಿದ್ಯಾರ್ಥಿನಿಯನ್ನು, ತಾನೇ ಮದುವೆಯಾಗುವುದಾಗಿಯೂ ಬೇರೆ ಯುವಕನೊಂದಿಗೆ ಮದುವೆಯಾಗುವುದು ಬೇಡ ಎಂದು ಆಕೆಗೆ ಹೇಳಿದ್ದಾನೆ. ಈ ನಡುವೆ ನಿಶ್ಚಿತಾರ್ಥವಾಗಿದ್ದ ಯುವಕನಿಗೆ ಇವರ ಪ್ರೀತಿಯ ವಿಚಾರವನ್ನು ಯಾರೋ ತಿಳಿಸಿದ ಹಿನ್ನೆಲೆಯಲ್ಲಿ ಆತ ಅನುವನ್ನು ಮದುವೆಯಾಗಲು ನಿರಾಕರಿಸಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ನಂತರ ಗ್ರಾಮದ ಯಜಮಾನರ ಸಮ್ಮುಖದಲ್ಲಿ ಯುವತಿ ಮತ್ತು ರಂಗಸ್ವಾಮಿ ಕುಟುಂಬಸ್ಥರು ಮದುವೆಯ ಮಾತುಕತೆ ನಡೆಸಿದ್ದು, ಆ ಸಂದರ್ಭದಲ್ಲಿ ರಂಗಸ್ವಾಮಿ ಕುಟುಂಬದವರು ಪಿರಿಯಾಪಟ್ಟಣದಲ್ಲಿ ನಿವೇಶನ, 100 ಗ್ರಾಂ ಚಿನ್ನಾಭರಣ ಹಾಗೂ 3 ಲಕ್ಷ ರೂ. ನಗದು ವರದಕ್ಷಿಣೆಯಾಗಿ ಕೇಳಿದ್ದು, ಅನು ಕುಟುಂಬಸ್ಥರು ನಿವೇಶನ ಮತ್ತು ಚಿನ್ನ ಕೊಡಲು ಒಪ್ಪಿದ್ದು, ನಗದು ಕೊಡಲಾಗುವುದಿಲ್ಲ ಎಂದು ನಿರಾಕರಿಸಿದ್ದಾರೆ. ಇದಕ್ಕೆಲ್ಲಾ ಒಪ್ಪಿ ಆರೇಳು ತಿಂಗಳಲ್ಲಿ ಮದುವೆ ಮಾಡಿಕೊಳ್ಳುವುದಾಗಿ ರಂಗಸ್ವಾಮಿ ಮತ್ತು ಕುಟುಂಬಸ್ಥರು ಒಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣದಲ್ಲಿ 13 ಲಕ್ಷ ರೂ.ಗಳಿಗೆ ನಿವೇಶನವನ್ನು ಮಾತನಾಡಿ, ಮೂರು ಲಕ್ಷ ರೂ. ಮುಂಗಡ ಹಣ ನೀಡಿ ಯುವತಿ ತಂದೆ ಶಂಕರ್ ಹೆಸರಿಗೆ ಒಪ್ಪಂದ ಕರಾರು ಪತ್ರವನ್ನು ನೋಂದಾಯಿಸಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

ಕಳೆದ ಆ.9 ರಂದು ಅನು ಮನೆಗೆ ಬಂದ ರಂಗಸ್ವಾಮಿ ಕುಟುಂಬದವರು ಮದುವೆ ಖರ್ಚಿಗೆ 5 ಲಕ್ಷ ರೂ. ಕೊಟ್ಟರೆ ಮಾತ್ರ ಮದುವೆಯಾಗುವುದಾಗಿ ತಿಳಿಸಿದ್ದಲ್ಲದೇ, ಪೊಲೀಸ್ ಇಲಾಖೆಯಲ್ಲಿರುವ ರಂಗಸ್ವಾಮಿಗೆ ಅನುವನ್ನು ಮದುವೆಯಾಗುವುದರಿಂದ ಯಾವುದೇ ಲಾಭವಿಲ್ಲ. ಅವನಿಗೆ ಬೇರೆ ಹುಡುಗಿಯನ್ನು ಮದುವೆ ಮಾಡುತ್ತೇವೆ ಎಂದು ಹೇಳಿದ್ದಲ್ಲದೇ, ಮದುವೆಯಾಗಲು ಬಲವಂತ ಮಾಡಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರೆಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.

ಈ ಸಂಬಂಧ ವಿದ್ಯಾರ್ಥಿನಿ ಅನು ಆ.10ರಂದೇ ಮಹಿಳಾ ಠಾಣೆಗೆ ದೂರು ಸಲ್ಲಿಸಿದ್ದು, ಆ ವಿಚಾರ ತಿಳಿದ ರಂಗಸ್ವಾಮಿ ಕುಟುಂಬಸ್ಥರು ಆಕೆಯನ್ನು ಮದುವೆ ಮಾಡಿಕೊಳ್ಳಲು 1 ವಾರ ಸಮಯಾವಕಾಶ ಕೇಳಿದ್ದರಿಂದ ಅಂದು ದೂರು ದಾಖಲಾಗಿರಲಿಲ್ಲ. ನಂತರ ರಂಗಸ್ವಾಮಿ ಮತ್ತು ಆತನ ಸ್ನೇಹಿತ ಸೋಮಶೇಖರ್ ಅವರುಗಳು ಈಕೆ ಕಾಲೇಜಿಗೆ ಹೋಗುವಾಗ ಹಿಂಬಾಲಿಸಿ ಕಿರುಕುಳ ನೀಡುತ್ತಿದ್ದರು. ಅಲ್ಲದೇ ಆಕೆಯನ್ನು ಮದುವೆ ಮಾಡಿಕೊಳ್ಳುವುದಿಲ್ಲ ಎಂದು ರಂಗಸ್ವಾಮಿ ಕುಟುಂಬಸ್ಥರು ತಿಳಿಸಿದ್ದು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದ ಹಿನ್ನೆಲೆಯಲ್ಲಿ ಆಕೆ ಆ.23 ರಂದು ಮಹಿಳಾ ಠಾಣೆಯಲ್ಲಿ ರಂಗಸ್ವಾಮಿ ಮತ್ತು ಕುಟುಂಬಸ್ಥರ ವಿರುದ್ಧ ದೂರು ದಾಖಲಿಸಿದ್ದಾಳೆ.

ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಸಲು 3 ತಿಂಗಳ ಗಡುವು

ಆದೇಶ ಧಿಕ್ಕರಿಸಿದರೆ ದಂಡ ಖಚಿತ



ಮೈಸೂರು, ಆ.24(ಬಿಎಲ್‌ಯು)– ಕಾರು, ಬಸ್ಸು, ಲಾರಿ, ದ್ವಿಚಕ್ರ ವಾಹನ ಸೇರಿದಂತೆ ಎಲ್ಲಾ ರೀತಿಯ ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳ ವಡಿಸಲು ಸಾರಿಗೆ ಇಲಾಖೆ ಮೂರು ತಿಂಗಳ ಗಡುವು ನೀಡಿದೆ. ನಂತರವೂ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳ ವಡಿಸದ ವಾಹನ ಸವಾರರಿಗೆ 500 ರೂ. ದಂಡ ವಿಧಿಸಲಾಗುವುದು ಎಂದು ಸಾರಿಗೆ ಇಲಾಖೆ ಎಚ್ಚರಿಸಿದೆ.

ನಂಬರ್ ಪ್ಲೇಟ್‌ಗಳನ್ನು ನಕಲಿ ಮಾಡಿ ಅಪರಾಧ ಕೃತ್ಯಗಳನ್ನು ಎಸಗುವುದಕ್ಕೆ ಕಡಿವಾಣ ಹಾಕಲು ಸಾರಿಗೆ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಎಲ್ಲಾ ವಾಹನಗಳಿಗೂ ಕಡ್ಡಾಯವಾಗಿ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಸಲು ಸಾರಿಗೆ ಇಲಾಖೆ ಕಟ್ಟುನಿಟ್ಟಿನ ಆದೇಶ ಮಾಡಿದೆ.

2019ರ ಏಪ್ರಿಲ್ 1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ (ಹೆಚ್‌ಎಸ್‌ಆರ್‌ಪಿ) ಅಳವಡಿಸುವಂತೆ ಸಾರಿಗೆ ಇಲಾಖೆ ಆದೇಶ ನೀಡಿದ್ದು, ನ.17ರ ತನಕ ಗಡುವು ನೀಡಿದೆ. ಈ ಸಂಬಂಧ ಸಾರಿಗೆ ಇಲಾಖೆ ಆ.17ರಂದು ಅಧಿಸೂಚನೆ ಹೊರಡಿಸಿದೆ.

ಶಾಶ್ವತ ಗುರುತಿನ ಸಂಖ್ಯೆ ಹೊಂದಿರುವ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್‌ನಲ್ಲಿ ಹಾಲೋಗ್ರಾಮ್ ಸೇರಿದಂತೆ ಹಲವು ಹೊಸ ವೈಶಿಷ್ಟ್ಯತೆ ಇದೆ. ಹಾಲೋಗ್ರಾಮ್ ಇರುವ ಕಾರಣ ಇದನ್ನು ನಕಲು ಮಾಡಲು ಸಾಧ್ಯವಿಲ್ಲ. ಈ ಕಾರಣದಿಂದ ನ.17 ರೊಳಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್‌ಗಳನ್ನು ಅಳವಡಿಸುವಂತೆ ಸಾರಿಗೆ ಇಲಾಖೆ ಸೂಚನೆ ನೀಡಿದೆ.

2019ರ ಏಪ್ರಿಲ್ 1ರ ನಂತರ ನೋಂದಣಿಯಾದ ಎಲ್ಲಾ ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳ ವಡಿಸಲಾಗಿದೆ. ಆದರೆ ಅದಕ್ಕಿಂತ ಮುಂಚಿನ ವಾಹನಗಳಿಗೆ ಈ ನಂಬರ್ ಪ್ಲೇಟ್ ಅಳವಡಿಸಲಾಗಿಲ್ಲ. ಆದ ಕಾರಣ ವಾಹನ ಖರೀದಿ ಮಾಡಿರುವ ಶೋರೂಂಗಳಿಗೆ ಹೋಗಿ ಅಲ್ಲಿ ಹಾಲೋಗ್ರಾಂ ಇರುವ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಪಡೆದು ವಾಹನಗಳಿಗೆ ಅಳವಡಿಸಬೇಕು ಎಂದು ಮೈಸೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿ ದೇವಿಕಾ ತಿಳಿಸಿದ್ದಾರೆ.

> ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಸಲು 3 ತಿಂಗಳ ಕಾಲಾವಕಾಶ ನೀಡಲಾಗಿದೆ. ಅಷ್ಟರಲ್ಲಿ ಸಾರಿಗೆ ಇಲಾಖೆ ಆದೇಶ ದಂತೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಸಿಕೊಳ್ಳಬೇಕು. ಗಡುವು ಮುಗಿದ ನಂತರವೂ ನಂಬರ್ ಪ್ಲೇಟ್ ಅಳವಡಿಸದ ವಾಹನ ಸವಾರರಿಗೆ ಸಾರಿಗೆ ಇಲಾಖೆ ಹಾಗೂ ಪೊಲೀಸರು 500 ರೂ.ಗಳ ದಂಡ ವಿಧಿಸುತ್ತಾರೆ. ಜೊತೆಗೆ ಎಫ್‌ಸಿ ಮಾಡಿಸಲು ಆರ್‌ಟಿಒಗೆ ಬಂದ ವೇಳೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಇಲ್ಲದಿದ್ದರೆ ಎಫ್‌ಸಿ ಮಾಡುವುದಿಲ್ಲ.
>
> **–ದೇವಿಕಾ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮೈಸೂರು.**

ದರಪಟ್ಟಿ ಆಹ್ವಾನ

ಮೈಸೂರು, ಆ.24–ಜಿಲ್ಲಾ ಕೇಂದ್ರ ಗ್ರಂಥಾಲಯ ಮೈಸೂರು ಕಚೇರಿ ಹಾಗೂ ಅಧೀನ ತಾಲೂಕು ಶಾಖಾ ಗ್ರಂಥಾಲಯಗಳಲ್ಲಿ 2022–23ನೇ ಸಾಲಿಗೆ ಸಂಬಂಧಿಸಿದಂತೆ ಗ್ರಂಥಾಲಯಗಳಲ್ಲಿ ಲಭ್ಯವಿರುವ ಹಳೆಯ ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ನಿಯಾಮಾನುಸಾರ ವಿಲೇವಾರಿ ಮಾಡಲು ದರಪಟ್ಟಿ ಆಹ್ವಾನಿಸಲಾಗಿದೆ. ಆಗಸ್ಟ್ 28ರಿಂದ ಸೆ.16ರವರೆಗೆ ಅರ್ಜಿಗಳನ್ನು ಪಡೆಯಲು ಅವಕಾಶವಿದ್ದು, ನಗರದ ಕೇಂದ್ರ ಗ್ರಂಥಾಲಯದಲ್ಲಿ ರೂ. 50 ಪಾವತಿಸಿ ಅರ್ಜಿ ಪಡೆಯಬಹುದಾಗಿದೆ. ಅರ್ಜಿಯನ್ನು ಸೆ.19ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯ ದೂ.ಸಂ:0821–2425875, 2425975 ಅನ್ನು ಸಂಪರ್ಕಿಸಬಹುದು

ಹುಣಸೂರಲ್ಲಿ ಶೆಟಲ್ ಕಾಕ್ ಕ್ರೀಡಾಂಗಣ ಉದ್ಘಾಟನೆ

ಹುಣಸೂರು, ಆ.24– ನಗರದಲ್ಲಿ ನೂತನವಾಗಿ ಹುಣಸೂರು ಕ್ಲಬ್ ಆವರಣದಲ್ಲಿ ನಿರ್ಮಾಣಗೊಂಡಿರುವ ಶೆಟಲ್ ಕಾಕ್ ಕ್ರೀಡಾಂಗಣವನ್ನು ಶಾಸಕ ಜಿ.ಡಿ. ಹರೀಶ್‌ಗೌಡ ಉದ್ಘಾಟಿಸಿದರು.

ಬಳಿಕ ಶೆಟಲ್ ಕಾಕ್ ಆಟವಾಡಿ ವೇದಿಕೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು, ಮಾಜಿ ಸಚಿವ ಡಾ.ಹೆಚ್.ಎಲ್.ತಿಮ್ಮೇಗೌಡ, ಶ್ರೀನಿವಾಸ ಅಯ್ಯಂಗಾರ್ ಸೇರಿದಂತೆ ಘಟಾನುಘಟಿ ನಾಯಕರು ಈ ಕ್ಲಬಿನ ಸದಸ್ಯರಾಗಿರುವುದು ಇತಿಹಾಸ. ಈ ಕ್ಲಬ್ ಶತಮಾನೋತ್ಸವದ ಹೊಸ್ತಿಲಿಗೆ ಬಂದಿರುವುದು ಶ್ಲಾಘನೀಯ ಎಂದರು.

ಇಲ್ಲಿವರೆಗೆ ಯಾರ ಸಹಾಯವಿಲ್ಲದೇ ಬೆಳೆದು ಬಂದಿರುವ ಈ ಕ್ಲಬ್ ಯುವಕರು, ಅಧಿಕಾರಿಗಳು ಸೇರಿದಂತೆ ಎಲ್ಲಾ ವರ್ಗದವರಿಗೂ ಉತ್ತಮ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ತಮ್ಮ ದೈನಂದಿನ ಚಟುವಟಿಕೆಗಳಿಂದ ಬಳಲಿ ಈ ಕ್ಲಬ್‌ಗೆ ಆಗಮಿಸಿ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಮನಸ್ಸು ಹಗುರ ಮಾಡಿಕೊಂಡು ಮನೆಗೆ ತೆರಳುತ್ತಾರೆ ಎಂದರು.

ಕ್ಲಬ್ ನಿರ್ಗಮಿತ ಅಧ್ಯಕ್ಷ ಎಂ.ಚರಮಣ್ಣ ಮಾತನಾಡಿ, 1930ರಲ್ಲಿ ಪ್ರಾರಂಭವಾಗಿ ಯಾವುದೇ



ಕಾಗದ ಪತ್ರ, ಲೆಕ್ಕಪತ್ರ, ಆಡಿಟ್‌ಗಳಂತಹ ಹಣಕಾಸಿನ ಲೆಕ್ಕಾಚಾರವಿಲ್ಲದೇ ಕೇವಲ ನಂಬಿಕೆ, ಧೃಡವಿಶ್ವಾಸದಿಂದ ನಡೆದು ಬಂದ ಈ ಕ್ಲಬ್‌ಗೆ ತನ್ನದೇ ಆದ ಇತಿಹಾಸವಿದೆ. ನಾನು ಸಹ 1977ರಲ್ಲಿ ಇಲ್ಲಿಗೆ ಟೆನ್ನಿಸ್ ಆಡಲು ಸೇರಿದ್ದು, ನಂತರ ಕಬ್ಲ್ ಅಧ್ಯಕ್ಷನಾಗಿ ಹಂತ ಹಂತವಾಗಿ ಕ್ಲಬ್ ಅಭಿವೃದ್ಧಿ ಮಾಡಲಾಯಿತು. ಒಂದು ಕಾಲದಲ್ಲಿ ಕ್ಲಬ್‌ಗೆ ಬರುವ ದಿನಪತ್ರಿಕೆಗೆ ಹಣ ನೀಡಲು ಕಷ್ಟವಾಗಿ ಪತ್ರಿಕೆಯನ್ನೇ ನಿಲ್ಲಿಸಲಾಗಿತ್ತು. ಪ್ರಸ್ತುತ ಕ್ಲಬ್ ಸುತ್ತ ವಾಣಿಜ್ಯ ಮಳಿಗೆಗಳನ್ನು ಕಟ್ಟಿ ಲಕ್ಷಾಂತರ ರೂ. ಆದಾಯ ಬರುವಂತೆ ಮಾಡಲಾಗಿದೆ. ಅಲ್ಲದೇ ಇದೀಗ ಶೆಟಲ್ ಕಾಕ್ ಕ್ರೀಡಾಂಗಣ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಡಾ.ಅಶೋಕ್, ತಾಪಂ ಇಓ ಎಂ.ಕೆ.ಮನು, ನಗರ ಪೊಲೀಸ್ ಇನ್ಸ್‌ಪೆಕ್ಟರ್ ಧರ್ಮೇಂದ್ರ, ನಗರಸಭಾ ಸದಸ್ಯರಾದ ಹೆಚ್.ಪಿ.ಸತೀಶ್, ಕೃಷ್ಣರಾಜಗುಪ್ತ, ಸರವಣ, ಪೆರುಮಾಳ್ ಅವರನ್ನು ಗೌರವಿಸಲಾಯಿತು.

ಕ್ಲಬ್ ಅಧ್ಯಕ್ಷ ಜಿ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ನಾಗರಾಜು ಕ್ಲಬ್ ಬೆಳೆದು ಬಂದ ಬಗ್ಗೆ ತಿಳಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಎಂ.ಕೆ.ಶ್ರೀನಿವಾಸ್, ಹೆಚ್.ಜೆ.ನಾಗೇಂದ್ರ ಪ್ರಸಾದ್, ಎನ್.ಮುನಿರಾಜು, ಎಂ.ಎಸ್.ಅಮೀನ್ ಎಸಿಎಫ್ ಮಹದೇವಯ್ಯ ಹಾಗೂ ಇತರರಿದ್ದರು.

ಕಾರ್ಯಕ್ರಮದಿಂದ ಹೊರನಡೆದ ಅಧಿಕಾರಿ

ಬಹು ನಿರೀಕ್ಷಿತ ಶೆಟಲ್ ಕಾಕ್ ಕ್ರೀಡಾಂಗಣ ಉದ್ಘಾಟಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೆ ಈ ಸಂಬಂಧ ನಾಮಫಲಕ ಅಳವಡಿಸಿರುವುದು ಸರಿಯಲ್ಲ ಎಂದು ಕಾರ್ಯಕ್ರಮದ ಮುಖ್ಯ ಅತಿಥಿ ಯಾಗಿ ಆಗಮಿಸಿದ್ದ ಕ್ಲಬ್ ಸದಸ್ಯ, ಲೋಕೋಪ ಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ವಿ.ವೈ ಭೋಜರಾಜು ಸೇರಿದಂತೆ ಕೆಲ ಸದಸ್ಯರು ಕಾರ್ಯಕ್ರಮದಿಂದ ಹೊರ ನಡೆದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಬೆದುರುಲಂಕ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗದರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಬಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಂಗ್ ಆಫ್ ಕೋತ (ಹಿಂ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಂಡೀವಧಾರಿ ಅರ್ಜುನ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ರಾ.10.10ಕ್ಕೆ, ಜೈಲರ್ (ತ): ಮ.1ಕ್ಕೆ, ಬ್ಯಾಂಗ್ (ಕ): ಸಂ.4.30ಕ್ಕೆ ಓಎಂಜಿ 2 (ಹಿಂ): ರಾ.7.10ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.10.15ಕ್ಕೆ, ರಾ.7.25ಕ್ಕೆ, ಜೈಲರ್ (ಕ): ಮ.12.55ಕ್ಕೆ, ಗದರ್ 2 (ಹಿಂ): ಸಂ.4.05ಕ್ಕೆ, ಮಿಸ್ಟರ್ ಪ್ರಗ್ನೆಂಟ್ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಕ್ಷೇತ್ರಪತಿ (ಕ): ಬೆ.10.40ಕ್ಕೆ, ಆಚಾರ್ & ಕೋ (ಕ): ಮ.1.45ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಸಂ.4ಕ್ಕೆ, ಬ್ಲೂ ಬೀಟಲ್ (ಇಂ): ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.9.50ಕ್ಕೆ, ಮ.3.50ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಯರ ಆರಾಧನಾ ಮಹೋತ್ಸವ

ನಂಜನಗೂಡು, ಆ.24– ನಗರದ ಶ್ರೀರಾಘವೇಂದ್ರ ಸ್ವಾಮಿಗಳ ಪ್ರತೀಕ ಸನ್ನಿಧಾನದಲ್ಲಿ ಆ.31ರಿಂದ ಮೂರು ದಿನಗಳ ಕಾಲ ಶ್ರೀರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧಾನ ಮಹೋತ್ಸವ ನಡೆಯಲಿದೆ.



ಆ.31ರಂದು ಶ್ರೀರಾಘವೇಂದ್ರ ಗುರುಗಳ ಪೂರ್ವಾರಾಧನೆಯೊಂದಿಗೆ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ದೊರೆಯಲಿದೆ. ಪ್ರಾತಃಕಾಲ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ ಮಹಾಮಂಗಳಾರತಿ ನೆರವೇರಲಿದೆ. ಸೆ.1ರಂದು ಶ್ರೀಗುರು ಸಾರ್ವಭೌಮರ ಬೃಂದಾವನ ಪ್ರವೇಶ ಮಾಡಿ 352 ವರ್ಷ ಸಂದಿರುವ ಸುದಿನದ ಅಂಗವಾಗಿ ಮಧ್ಯಾರಾಧನೆ ನಡೆಯಲಿದೆ. ಸೆ.2ರಂದು ಶ್ರೀಗುರುಗಳ ಉತ್ತರಾಧನೆ ನೆರವೇರಲಿದೆ. ಸೆ.3ರಂದು ಸುಜ್ಞಾನೇಂದ್ರ ತೀರ್ಥರ ಆರಾಧನೆ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮ: ಮಹೋತ್ಸವ ಅಂಗವಾಗಿ ಆ.31ರಂದು ಸಂಜೆ 6ಕ್ಕೆ ವಿದುಷಿ ಕೋವಿಲಡಿ ಆರ್.ಕಲಾ ಹಾಗೂ ಅರ್ಚನಾ ಅವರಿಂದ ದಾಸವಾಣಿ, ಸೆ.1ರಂದು ಸಂಜೆ 6ಕ್ಕೆ ವಿದ್ವಾನ್ ಕೇಶವ್ ಮೋಹನಕುಮಾರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಪಿಟೀಲು ವಾದನ, ಸೆ.2ರಂದು ಸಂಜೆ 6ಕ್ಕೆ ಮೈಸೂರಿನ ವಿದ್ವಾನ್ ಭಾನುಸಿಂಹ ಅವರಿಂದ ದಾಸವಾಣಿ, ಸೆ.3ರಂದು ಸಂಜೆ 6ಕ್ಕೆ ವಿದ್ವಾನ್ ಚಂದನ್‌ಕುಮಾರ್ ಅವರಿಂದ ಕೊಳಲು ವಾದನ ಏರ್ಪಡಿಸಲಾಗಿದೆ ಎಂದು ಮಠದ ವ್ಯವಸ್ಥಾಪಕ ಕೆ.ಸುಧಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.31ಕ್ಕೆ, ಅರ್ಥಪೂರ್ಣವಾಗಿ ಬೋಸ್ ಹುಟ್ಟುಹಬ್ಬ ಆಚರಣೆ



ತಿ.ನರಸೀಪುರ, ಆ.24– ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರ ಹುಟ್ಟುಹಬ್ಬವನ್ನು ಉದ್ಯೋಗ ಮೇಳ ಸೇರಿದಂತೆ ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಮಾತನಾಡಿದ ಅವರು, ಆ.31ರಂದು ಪಟ್ಟಣದ ಎಪಿಎಂಸಿ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಂಡಿದ್ದು, ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗ ಕಲ್ಪಿಸಲಾಗುವುದು. ನೂರಕ್ಕೂ ಹೆಚ್ಚು ಪ್ರತಿಷ್ಠಿತ ಸಂಸ್ಥೆಗಳು ಈ ಮೇಳದಲ್ಲಿ ಭಾಗವಹಿಸಲಿದ್ದು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ನಿರುದ್ಯೋಗಿ ಯುವಕರು ಬೆಳಗ್ಗೆ 10 ಗಂಟೆಗೆ ಆಗಮಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ಸಲಹೆ ನೀಡಿದರು. ಅಲ್ಲದೇ ಇಲ್ಲಿ ಉದ್ಯೋಗ ದೊರೆಯದ ಯುವಕರ ಡೇಟಾ ಸಂಗ್ರಹಿಸಿ ಮುಂಬರುವ ದಿನಗಳಲ್ಲಿ ಅವರಿಗೂ ಉದ್ಯೋಗ ಕಲ್ಪಿಸಲಾಗುವುದು ಎಂದರು.

ಮೇಳವನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಖಾತೆ ಸಚಿವ ವೆಂಕಟೇಶ್ ಸೇರಿದಂತೆ ಎರಡೂ ಜಿಲ್ಲೆಯ ಶಾಸಕರು ಭಾಗವಹಿಸಲಿದ್ದಾರೆ ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ತಾಪಂ ಮಾಜಿ ಸದಸ್ಯರಾದ ಕುಕ್ಕೂರು ಪ್ರಸನ್ನ, ನರಸಿಂಹ ಮಾದನಾಯಕ, ಸೋಸಲೆ ಮಹದೇವಸ್ವಾಮಿ, ಚಿದರವಳ್ಳಿ ಚಂದ್ರಶೇಖರ್, ಅಕ್ಕೂರು ಗುರುಮೂರ್ತಿ, ಸಚಿವರ ಆಪ್ತ ಸಹಾಯಕ ಬಸವರಾಜು, ಹೊಸಪುರ ಮಲ್ಲು, ಅಸ್ಲಾಂ ಪಾಷಾ, ಅತ್ತಳ್ಳಿ ಗ್ರಾಪಂ ಸದಸ್ಯ ಮಹೇಶ್, ಕಲಿಯೂರು ವೆಂಕಟೇಶ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ವಿದ್ಯಾರ್ಥಿ ಅಪಹರಣ

ಮೂತ್ರ ವಿಸರ್ಜನೆ ನೆಪದಲ್ಲಿ ತಪ್ಪಿಸಿಕೊಂಡು ಬಂದ ವಿದ್ಯಾರ್ಥಿ

ತಿ.ನರಸೀಪುರ, ಆ.24– ಪಟ್ಟಣದ ಲಿಟಲ್ ಫ್ಲವರ್ ಕಾನ್ವೆಂಟ್ ವಿದ್ಯಾರ್ಥಿಯೋರ್ವನನ್ನು ದುಷ್ಕರ್ಮಿಗಳು ಅಪಹರಿಸಿದ್ದು, ಮೂತ್ರ ವಿಸರ್ಜನೆ ನೆಪದಲ್ಲಿ ವಿದ್ಯಾರ್ಥಿ ತಪ್ಪಿಸಿ ಕೊಂಡು ಬಂದಿರುವ ಘಟನೆ ಪಟ್ಟಣದ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಶಾಲೆಯ 7ನೇ ತರಗತಿ ವಿದ್ಯಾರ್ಥಿ, ಪಟ್ಟಣದ ತ್ರಿವೇಣಿ ನಗರದ ನಿವಾಸಿ ಅಭಿಷೇಕ್ ಅಪಹರಣಕ್ಕೊಳಗಾಗಿ ತಪ್ಪಿಸಿಕೊಂಡು ಬಂದ ಬಾಲಕ. ಈತ ಗುರುವಾಗ ಬೆಳಗ್ಗೆ ಕಾನ್ವೆಂಟ್‌ಗೆ ಹೋಗುತ್ತಿದ್ದ ವೇಳೆ ತ್ರಿವೇಣಿ ನಗರದ ಸೆವೆಂತ್ ಡೇ ಕಾನ್ವೆಂಟ್ ಬಳಿ ಒಮಿನಿಯೊಳಗಿದ್ದ ನಾಲ್ವರು ಮಂಕಿ ಕ್ಯಾಪ್ ಧರಿಸಿದ್ದರು ಎನ್ನಲಾಗಿದೆ. ಈ ವೇಳೆ ಓರ್ವ ಅಭಿಷೇಕ್‌ನನ್ನು ಕರೆದು ವಿದ್ಯೋದಯ ಸರ್ಕಲ್ ಎಲ್ಲಿ ಎಂದು ವಿಳಾಸ ಕೇಳುವ ನೆಪ ದಲ್ಲಿ ಕೆಳಗಿಳಿದು ಬಾಲಕನ ಮುಖಕ್ಕೆ ಮತ್ತು ಬರುವ ಔಷಧಿ ಹಾಕಿ ಪ್ರಜ್ಞೆ ತಪ್ಪಿಸಿ ಆತನನ್ನು ಒಮಿನಿ ಕಾರಿನಲ್ಲಿ ಕೂರಿಸಿಕೊಂಡು ಆರ್ಯ ಮಹಲ್ ಬಳಿ ಹೋಗುತ್ತಿರುವಾಗ ಬಾಲಕನಿಗೆ ಎಚ್ಚರವಾಗಿ ಬಟ್ಟೆಗೆ ಮೂತ್ರ ವಿಸರ್ಜನೆ ಮಾಡಿಕೊಂಡಿದ್ದ ಕಾರಣ ಮೂತ್ರ ವಿಸರ್ಜನೆಗೆ ಇಳಿಸಿದ್ದಾರೆ. ಎದುರಿಗೆ ಬೈಕ್ ಬರುತ್ತಿದ್ದರಿಂದ ಬಾಲಕ ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾಗಿ ಬಂದಿದ್ದಾನೆ ಎಂದು ತಿಳಿದು ಬಂದಿದೆ. ಈ ಸಂಬಂಧ ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಹೆಮ್ಮಿಗೆ ಸಹಕಾರ ಸಂಘಕ್ಕೆ 44 ಸಾವಿರ ನಿವ್ವಳ ಲಾಭ

ತಲಕಾಡು, ಆ.23– ಪ್ರಸಕ್ತ ಸಾಲಿನಲ್ಲಿ ಹೆಮ್ಮಿಗೆ ಸಹಕಾರ ಸಂಘ 44 ಸಾವಿರ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷೆ ಎಸ್.ಜಿ.ರುಕ್ಮಿಣಿ ಶೇಷಾದ್ರಿ ತಿಳಿಸಿದರು.

ಇಲ್ಲಿನ ಹೆಮ್ಮಿಗೆ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದಲ್ಲಿ 840 ರೈತರು ಸದಸ್ಯತ್ವ ಹೊಂದಿದ್ದು, 2022–23ನೇ ಸಾಲಿನಲ್ಲಿ 44 ಸಾವಿರ ನಿವ್ವಳ ಲಾಭದೊಂದಿಗೆ ಸಂಘ ಮುನ್ನಡೆಯುತ್ತಿದೆ ಎಂದರು.

ಸಂಘದ ಸಿಇಓ ಎನ್.ಎಸ್.ರಂಜನ್ ಕುಮಾರ್ ಮಾತನಾಡಿ, ರೈತರು ಪಡೆದಿರುವ ಸಾಲವನ್ನು ಸಕಾಲದಲ್ಲಿ ಮರು ಪಾವತಿಸಬೇಕೆಂದು ತಿಳಿಸಿದ ಅವರು ಜಿಲ್ಲಾ ಬ್ಯಾಂಕ್ ಮೂಲಕ ರೈತರಿಗೆ 6 ಕೋಟಿಗೂ ಹೆಚ್ಚು ಸಾಲ ನೀಡಿದ್ದೇವೆ. ಟ್ರಾಕ್ಟರ್ ಖರೀದಿಸಲು



10 ಲಕ್ಷ ಸಾಲ, ಕೊಳವೆ ಬಾವಿ ಕೊರೆಸಲು ಇಬ್ಬರು ರೈತರಿಗೆ 3 ಲಕ್ಷ ರೂ. ಸಾಲ ನೀಡಿದ್ದೇವೆ. ಮುಂದೆ ಇನ್ನು ಹೆಚ್ಚಿನ ರೈತರಿಗೆ ಸಾಲ ನೀಡುವ ಗುರಿ ಹೊಂದಲಾಗಿದ್ದು, ರೈತರು ಇದರ ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗುವಂತೆ ಕರೆ ನೀಡಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ರಾಮೇಗೌಡ, ಮಾಜಿ ಅಧ್ಯಕ್ಷ ಹೆಚ್.ವಿ.ಶೇಷಾದ್ರಿ, ಡೈರಿ ಕಾರ್ಯದರ್ಶಿ ಸೋಮಣ್ಣ, ಕೆ.ಎಸ್.ಮಾದೇವಸ್ವಾಮಿ, ಪುಟ್ಟಸ್ವಾಮಿ, ಮಹದೇವಪ್ಪ ಹೆಚ್.ಸಿ.ಹೆಮ್ಮಯ್ಯ, ಚೌಡಮ್ಮ, ಜಾಕಿರ್ ಖಾನ್, ಹೆಚ್.ಆರ್.ಶಿವಕುಮಾರ್, ಕಮಲಮ್ಮ, ಜಾಲಹಳ್ಳಿ ಗಿರೀಶ್, ಬಂಗಾರಸ್ವಾಮಿ, ಸಂಘದ ಚಿಕ್ಕಹೊನ್ನಯ್ಯ, ಸಹಕಾರ ಸಂಘದ ವ್ಯಾಪ್ತಿಯ ಸದಸ್ಯರು ಹಾಜರಿದ್ದರು.

ವಿಕ್ರಮ್ ಲ್ಯಾಂಡರ್ ಒಂದು ಮೈಲಿಗಲ್ಲು: ಪ್ರಮೋದ್



ಹೆಚ್.ಡಿ.ಕೋಟೆ, ಆ.24– ಇಸ್ರೋ ಚಂದ್ರನ ಮೇಲೆ ಯಶಸ್ವಿಯಾಗಿ ವಿಕ್ರಮ್ ಲ್ಯಾಂಡರ್ ಇಳಿಸಿದ್ದು ಕೋಟ್ಯಾಂತರ ಭಾರತೀಯರ ಹೃದಯದಲ್ಲಿ ಅಭಿಮಾನದ ತರಂಗ ಎಬ್ಬಿಸಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇರಾರೂ ಸಾಧಿಸದ ವಿಕ್ರಮವನ್ನು ಭಾರತೀಯರು ಸಾಧಿಸಿರುವುದು ಒಂದು ಮೈಲಿಗಲ್ಲಾಗಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್ ತಿಳಿಸಿದರು.

ಪಟ್ಟಣದ ಬಾಪೂಜಿ ವೃತ್ತದಲ್ಲಿ ಚಂದ್ರಯಾನ ಯಶಸ್ವಿ ಹಿನ್ನೆಲೆಯಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿ ಸಿಹಿ ಹಂಚಿ ಮಾತನಾಡಿದ ಅವರು, ಈ ಅಭೂತಪೂರ್ವ ಯಶಸ್ಸಿಗೆ ಕಾರಣರಾದ ಇಸ್ರೋದ ಎಲ್ಲಾ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಇದೇ ವೇಳೆ ಪಟಾಕಿ ಸಿಡಿಸಿ, ಸಿಹಿ ಹಂಚಲಾಯಿತು. ಈ ವೇಳೆ ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಕಾರ್ಯದರ್ಶಿ ಸ್ವಾಮಿ, ಪುರಸಭಾ ಸದಸ್ಯ ಮಿಲ್ ನಾಗರಾಜು, ಜೆ.ಪಿ.ಶಿವರಾಜಪ್ಪ, ಜಯಂತ್, ಎಚ್.ಕೆ.ಪ್ರಕಾಶ್, ನಂದೀಶ್, ಡೈರಿ ಶ್ರೀಕಾಂತ್, ಕಸ್ತೂರಿ ಮಹೇಶ್, ಜಿ.ರವಿ, ಯಶವಂತ್, ರಾಜು, ಪ್ರಭು, ರತನ್, ನಾರಾಯಣ್ ಲಾಲ್ ಹಾಗೂ ವಿದ್ಯಾರ್ಥಿಗಳಿದ್ದರು.

ಚಿರತೆ ದಾಳಿಗೆ ಹಸು ಬಲಿ

ಭೇರ್ಯ, ಆ.24– ಚಿರತೆ ದಾಳಿಗೆ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಕಾವಲ್ ಹೊಸೂರು ಗ್ರಾಮದಲ್ಲಿ ನಡೆದಿದೆ.



ರಾಜೇಶ್ವರಿ ಎಂಬುವರಿಗೆ ಸೇರಿದ ಹಸು ಬಲಿಯಾಗಿರುವುದು. ಈಗಾಗಲೇ ರಾಜೇಶ್ವರಿ ಅವರ 2 ಕುರಿಗಳನ್ನು ಚಿರತೆ ತಿಂದು ಹಾಕಿರುವ ಘಟನೆ ಮಾಸುವ ಮುನ್ನವೇ ಮತ್ತೆ ಚಿರತೆ ಹಸು ತಿಂದು ಹಾಕಿದ್ದು, ತೀವ್ರ ನಷ್ಟಕ್ಕೀಡಾಗಿದ್ದಾರೆ. ಈಕೆಗೆ ಅರಣ್ಯ ಇಲಾಖೆ ಸೂಕ್ತ ಪರಿಹಾರ ಒದಗಿಸಿ ನ್ಯಾಯ ದೊರಕಿಸಿ ಕೊಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಚಿರತೆ ಉಪಟಳ: ಮಠದ ಕಾವಲ್ ಅರಣ್ಯ ವ್ಯಾಪ್ತಿಯಲ್ಲಿ ಚಿರತೆ ಉಪಟಳ ಹೆಚ್ಚಾಗಿದ್ದು, ಗೇರದಡ, ಬಸವನಪುರ, ಚಿಕ್ಕಭೇರ್ಯ, ಬಟಿಗನಹಳ್ಳಿ, ಭೇರ್ಯ, ಸಂಬ್ರವಳ್ಳಿ ಗ್ರಾಮಗಳಲ್ಲಿ ಚಿರತೆ ದಾಳಿ ನಡೆಸಿ ಕುರಿ, ಮೇಕೆ, ನಾಯಿಗಳನ್ನು ತಿಂದು ಹಾಕುತ್ತಿದ್ದು, ಅರಣ್ಯ ಇಲಾಖೆ ಚಿರತೆ ಹಿಡಿಯುವಲ್ಲಿ ವಿಫಲರಾಗಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಗಾಂಜಾ ಬೆಳೆದಿದ್ದ ಆರೋಪಿ ಬಂಧನ

ಹೆಚ್.ಡಿ.ಕೋಟೆ, ಆ.24– ಅಕ್ರಮವಾಗಿ ಗಾಂಜಾ ಬೆಳೆದಿದ್ದ ಆರೋಪಿಯನ್ನು ಅಂತರಸಂತೆ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಎನ್.ಬೇಗೂರು ಗ್ರಾಮದ ನಿವಾಸಿ ವಿಜಯ್ ಬಂಧಿತ ಆರೋಪಿ. ಈತ ತಮ್ಮ ಮನೆ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಗಿಡ ಬೆಳೆದಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಂತರಸಂತೆ ಠಾಣೆ ಎಸ್‌ಐ ರವಿಶಂಕರ್ ಹಾಗೂ ಸಿಬ್ಬಂದಿ ವಿಜಯ್‌ನನ್ನು ಬಂಧಿಸಿ, 2 ಕೆಜಿ ತೂಕದ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಪ್ರತಿಭಾ ಪುರಸ್ಕಾರ

ಭೇರ್ಯ, ಆ.24– ಎಡತೊರೆ ಬಲಿಜ (ಬಣಜಿಗ) ಸಂಘದಿಂದ 2022–23 ಸಾಲಿನಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮುದಾಯದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಟಿ.ಎನ್.ದಯಾನಂದ್ ತಿಳಿಸಿದ್ದಾರೆ.

ಕೆ.ಆರ್.ನಗರದ ಪಿಎಲ್‌ಡಿ ಬ್ಯಾಂಕ್ ಸಮುದಾಯ ಭವನದಲ್ಲಿ ಸೆ.9ರಂದು ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಹೀಗಾಗಿ ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80 ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ್ ಕಾರ್ಡ್ ಜೆರಾಕ್ಸ್‌ನೊಂದಿಗೆ ಆ.30ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ 9886614308, 9972830745 ಸಂಪರ್ಕಿಸಿ.

ವಿಶ್ವ ನಾಯಿಗಳ ದಿನಾಚರಣೆ ಅಂಗವಾಗಿ ಹುಣಸೂರಿನಲ್ಲಿ ಶ್ವಾನಗಳ ಸೌಂದರ್ಯ ಸ್ಪರ್ಧೆ

ಹುಣಸೂರು, ಆ.24– ಹುಣಸೂರು ರೋಟರಿ ಸಂಸ್ಥೆ ವತಿಯಿಂದ ವಿಶ್ವ ನಾಯಿಗಳ ದಿನಾಚರಣೆ ಅಂಗವಾಗಿ ಆ.26ರಂದು ಬೆಳಗ್ಗೆ 10 ಗಂಟೆಗೆ ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಸಾಕು ನಾಯಿಗಳ ಸೌಂದರ್ಯ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ರೋಟರಿ ಅಧ್ಯಕ್ಷ ಚೆನ್ನಕೇಶವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮುಖ್ಯ ಅತಿಥಿಗಳಾಗಿ ಡೊಲ್ಮ ಡಾಗ್ ರೆಸ್ಕ್ಯೂ ಕೇರ್ ಸಂಸ್ಥೆ ಕೌಲ್ಸಂಗ್‌ದೋರ್ಜಿ ಆಗಮಿಸಲಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವ ಮೊದಲ ಮೂರು ಸ್ಥಾನ ಗಳಿಸುವ ನಾಯಿಗಳಿಗೆ ನಗದು ಮತ್ತು ಟ್ರೋಫಿ ನೀಡಲಾಗುವುದು ಹಾಗೂ ಭಾಗವಹಿಸುವ ಎಲ್ಲಾ ನಾಯಿಗಳಿಗೂ ಸಮಾಧಾನಕರ ಬಹುಮಾನ ನೀಡಲಾಗುವುದು. ಸ್ಪರ್ಧೆಗೆ ನೋಂದಣಿ ಶುಲ್ಕ 200 ರೂ. ಸಂದಾಯ ಮಾಡಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಮೊ.9980630632 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಕ್ರೀಡೆಯಿಂದ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿ




ನಂಜನಗೂಡು, ಆ.24– ಕ್ರೀಡೆ ಮಾನವನ ಒತ್ತಡ ನಿವಾರಿಸಿ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಯಾವುದಾದರೊಂದು ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶಿವಲಿಂಗಯ್ಯ ತಿಳಿಸಿದರು.

ನಗರದ ಜೂನಿಯರ್ ಕಾಲೇಜು ಕ್ರೀಡಾಂಗಣದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ನಡೆದ ಶಿಕ್ಷಕರ ಕ್ರೀಡಾಕೂಟಕ್ಕೆ ಗುಂಡು ಎಸೆಯುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯ ದೈಹಿಕ ಮತ್ತು ಮಾನಸಿಕವಾಗಿ ಸಧೃಡನಾಗಿದ್ದರೇ ಏನು ಬೇಕಾದರೂ ಸಾಧಿಸಬಹುದಾಗಿದೆ. ಕ್ರೀಡೆ ಮನುಷ್ಯನ ಆರೋಗ್ಯಕ್ಕೆ ಸಹಕಾರಿ. ಶಿಕ್ಷಕರು ನಿತ್ಯ ಯಾವುದಾದರೊಂದು ಕ್ರೀಡೆಯಲ್ಲಿ ತೊಡಗುವುದರಿಂದ ವೃತ್ತಿಯಲ್ಲಿ ದಕ್ಷತೆ ಹೆಚ್ಚಿಸಿಕೊಳ್ಳಬಹುದು ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ ಮಾತನಾಡಿ, ಕ್ರೀಡೆ ವ್ಯಕ್ತಿಯಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗುಣ ಬೆಳೆಸುತ್ತದೆ. ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಾಗಬಾರದು ಭಾಗವಹಿಸುವಿಕೆ ಮಾತ್ರ ಮುಖ್ಯವಾಗಬೇಕು, ಇಂದಿನ ಸೋಲೆ ನಾಳಿನ ಗೆಲುವು ಎಂದು ತಿಳಿದು ನಮ್ಮ ತಪ್ಪುಗಳನ್ನು ತಿದ್ದುಕೊಂಡು ಗೆಲುವಿನ ಶಿಖರ ಏರಬೇಕು. ನಮ್ಮ ಜೀವನದಲ್ಲೂ ಸಹ ಪ್ರತಿದಿನ ಅನೇಕ ಸವಾಲುಗಳು ಎದುರಾಗುತ್ತವೆ. ಯಾವುದಕ್ಕೂ ಎದೆಗುಂದದೆ ಎದುರಿಸಿ ಮುನ್ನಡೆಯಬೇಕು. ಅಂತಹ ಕ್ರೀಡಾ ಮನೋಭಾವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಕಾರ್ಯದರ್ಶಿ ರಂಗನಾಥ್, ಸೋಮೇಶ್, ಪುಟ್ಟರಾಜು, ರಾಜೇಂದ್ರ, ಮಹೇಶ್, ಗೋಪಾಲ್, ಸಿದ್ದೇಶ್, ಮಹದೇವಮೂರ್ತಿ, ಸುನಂದ, ಶ್ರೀಪತಿ, ಸತೀಶ್ ದಳವಾಯಿ ಸೇರಿದಂತೆ ಶಿಕ್ಷಕರಿದ್ದರು.

ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಸರಗೂರು, ಆ.24– ಆಕ್ಷೇಪಾರ್ಹ ಹೇಳಿಕೆ ನೀಡಿರುವ ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸದಸ್ಯರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನಟ ಉಪೇಂದ್ರ ಮೇಲೆ ಕ್ರಮ ಕೈಗೊಂಡು ಅವರನ್ನು ಗಡಿಪಾರು ಮಾಡಬೇಕು ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಉಪಪ್ರಧಾನ ಸಂಚಾಲಕ ದೊಡ್ಡಸಿದ್ದು ಮಾತನಾಡಿ, ನಟ ಉಪೇಂದ್ರರನ್ನು ಬಂಧಿಸಬೇಕು. ಇಲ್ಲದಿದ್ದರೇ ಪ್ರತಿ ಗ್ರಾಮದಿಂದ ವಿನೂತನ ಚಳವಳಿ ನಡೆಸಲಾಗುವುದು ಎಂದರು. ಇದೇ ವೇಳೆ ತಹಸೀಲ್ದಾರ್ ಮೂಲಕ ಸಿಎಂಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ತಾಲೂಕು ಸಂಚಾಲಕ ಗೋವಿಂದರಾಜು, ಸಣ್ಣಕುಮಾರ್, ಸರಗೂರು ಅಭಿವೃದ್ಧಿ ಹೋರಾಟ ಸಮಿತಿ ಸಂಚಾಲಕ ಕೃಷ್ಣ, ಆದಿಕರ್ನಾಟಕ ಮಹಾಸಭಾ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ನಾಗರಾಜು, ಬಸವರಾಜು, ಅಧ್ಯಕ್ಷ ಶಿವಣ್ಣ, ನಾಗರಾಜು, ಸಮಿತಿ ಸಂಚಾಲಕ ಚಂದ್ರ, ಸದಸ್ಯರಾದ ನಾಗೇಂದ್ರ ಮಣಿಕಂಠ, ಸಿಂಗಯ್ಯ, ರಂಗಯ್ಯ, ದಯಾನಂದ, ನಾರಾಯಣ್, ಮಹದೇವ, ವಸಂತ ಪಾಟೀಲ್, ಮಂಜು, ಹೆಚ್.ಡಿ.ಕೋಟೆ ತಾಲೂಕು ಸದಸ್ಯರು ಮಹೇಶ್, ಚೆಲುವರಾಜು, ಶಿವಪ್ಪ, ಮುಖಂಡರು ಗೋಪಾಲ್, ತಿಮ್ಮಯ್ಯ, ಮಾನವ ಹಕ್ಕು ಸಮಿತಿ ಜಿಲ್ಲಾಧ್ಯಕ್ಷ ಕುಮಾರ್, ಲಕ್ಷ್ಮಿಕಾಂತ್, ಪ್ರಕಾಶ್ ಇನ್ನಿತರರಿದ್ದರು.

ಮೈಸೂರು ಮಿತ್ರ 44
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ. ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು